# ಸಾರ್ವತ್ರಿಕಪಂಚೀಕರಣ



ಪ್ರಕಾಶಕರು :

ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ - 573211

# ಅಧ್ಯಾತ್ಮಪ್ರಕಾಶಕಾರ್ಯಾಲಯ,

ಹೊಳೆನರಸೀಪುರ.

------

## ಈ ಕಾರ್ಯಾಲಯದಿಂದ ತಾವು ಯಾವಯಾವ ಲಾಭವನ್ನು ಪಡೆಯಬಹುದು ?

೧. ಕಾರ್ಯಾಲಯದಲ್ಲಿ ನಡೆಯುತ್ತಿರುವ ಪೂಜೆ, ಭಜನೆ, ಪುರಾಣಶ್ರವಣ, ಉಪನ್ಯಾಸ, ಅನುಷ್ಠಾನಗಳು- ಇವುಗಳನ್ನು ನೋಡಿ ನಲಿಯಬಹುದು.

೨. ಕಾರ್ಯಾಲಯದಲ್ಲಿ ಪ್ರಕಟವಾಗುತ್ತಿರುವ ಅಮೂಲ್ಯವಾದ ಗ್ರಂಥಗಳನ್ನು ಕೊಂಡು ಓದಿ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳಬಹುದು.

೩. ಕಾರ್ಯಾಲಯದಲ್ಲಿರುವ "**ವಿದ್ಯಾನಿಲಯ**"ಕ್ಕೆ ನಿಮ್ಮ ಕಡೆಯಲ್ಲಿರುವ ವಿದ್ಯಾರ್ಥಿಗಳನ್ನು ಕಳುಹಿಸಿ ಅಧ್ಯಾತ್ಮವಿದ್ಯೆಯಲ್ಲಿ ಪ್ರವೀಣರನ್ನಾಗಿ ಮಾಡಿಸಿ, ಅವರಿಂದ ನಿಮ್ಮ ಪ್ರಾಂತ್ಯದಲ್ಲಿ ವಿದ್ಯಾಪ್ರಸಾರವನ್ನು ಮಾಡಿಸಬಹುದು.

೪. ಕಾರ್ಯಾಲಯದಲ್ಲಿ ಪ್ರಕಟವಾಗುವ "**ಅಧ್ಯಾತ್ಮಪ್ರಕಾಶ**" ಮಾಸಪತ್ರಿಕೆಗೆ ಚಂದಾದಾರರಾಗಿ ತಿಂಗಳುತಿಂಗಳೂ ಬಗೆಬಗೆಯ ಅಧ್ಯಾತ್ಮಬೋಧೆಯನ್ನು ಪಡೆಯಬಹುದು. ಮಹಾಪೋಷಕರೂ ಪೋಷಕರೂ ಆಗಿ ಪತ್ರಿಕೆಯನ್ನು ಪ್ರೋತ್ಸಾಹಿಸಬಹುದು.

೫. ಕಾರ್ಯಾಲಯದಲ್ಲಿ ಸಿದ್ಧವಾಗುತ್ತಿರುವ ಪುಸ್ತಕಗಳ ಪ್ರಕಟನೆಗೆ ಯಥಾಶಕ್ತಿಯಾಗಿ ಧನಸಹಾಯವನ್ನು ಮಾಡಿ ಮಹಾಶ್ರಯದಾತರು, ಆಶ್ರಯದಾತರು, ಮಹಾಪೋಷಕರು, ಅಥವಾ ಪೋಷಕರು ಎನಿಸಿ ಈ ಪ್ರಕಟನೆಗಳ ಪುಸ್ತಕಭಂಡಾರವೊಂದನ್ನು ಏರ್ಪಡಿಸಿಕೊಳ್ಳಬಹುದು.

೬. ಗ್ರಂಥಗಳ ಪ್ರಚಾರಕ್ಕಾಗಿ ಏರ್ಪಡಿಸಿರುವ (1) ಬ್ರಹ್ಮವಿದ್ಯಾದಾನ (2) ಅಧ್ಯಾತ್ಮಗ್ರಂಥಪಾರಿತೋಷಕ (3) ವಿಶೇಷವಿನಿಯೋಗ- ಈ ಯೋಜನೆಗಳಲ್ಲಿ ಭಾಗವನ್ನು ವಹಿಸಿ ಪುಣ್ಯವನ್ನೂ ಪುರುಷಾರ್ಥವನ್ನೂ ಸಂಪಾದಿಸಬಹುದು.

೭. ಸುಸಜ್ಜಿತವಾಗಿರುವ ಪುಸ್ತಕಭಂಡಾರ ಮತ್ತು ಉಚಿತ ವಾಚನಾಲಯಗಳನ್ನು ಉಪಯೋಗಿಸಿಕೊಂಡು ಹೆಚ್ಚು ಜ್ಞಾನವನ್ನು ಸಂಪಾದಿಸಿಕೊಳ್ಳಬಹುದು.

------

ಅಧ್ಯಾತ್ಮಗ್ರಂಥಾವಳಿ

ಶ್ರೀಶಂಕರಾಚಾರ್ಯವಿರಚಿತ

# ಪಂಚೀಕರಣ

ಶ್ರೀಸುರೇಶ್ವರಾಚಾರ್ಯರ ವಾರ್ತಿಕ, ಭಾವಾರ್ಥ

ವಿಶೇಷ ಟಿಪ್ಪಣಿ - ಮುಂತಾದವುಗಳೊಡನೆ ಸಂಸ್ಕರಿಸಿ ಪ್ರಕಟಿಸಿದ್ದು.

ಅನುವಾದಕರು ಮತ್ತು ಸಂಸ್ಕರಿಸಿದವರು :

**ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು**

ಕ್ರಮಾಂಕ : ೪೮

**ಪ್ರಕಾಶಕರು :**

ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ - 573211

2000

ಮೊದಲನೆಯ ಮುದ್ರಣ 1934 ( 500 ಪ್ರತಿಗಳು)
ಎರಡನೆಯ ಮುದ್ರಣ 1966 ( 1000 ಪ್ರತಿಗಳು)
ಮೂರನೆಯ ಮುದ್ರಣ 2000 ( 1000 ಪ್ರತಿಗಳು)

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು.

All Rights Reserved

ಅಕ್ಷರ ಜೋಡಣೆ :

**ಪ್ರಶಾಂತ್ ಎಂಟರ್‌ಪ್ರೈಸಸ್**

ನಂ. ೨೧೩, ಬಾಲಾಜಿ ರಸ್ತೆ,

ತ್ಯಾಗರಾಜನಗರ, ಬೆಂಗಳೂರು - ೨೮

ದೂರವಾಣಿ : ೬೭೬೭೦೧೬

ಮುದ್ರಕರು :

**ಶ್ರೀಗಣೇಶ್ ಮಾರುತಿ ಪ್ರಿಂಟರ್ಸ್**

ನಂ. 76, 3ನೇ ಬ್ಲಾಕ್, 6ನೇ ಮುಖ್ಯರಸ್ತೆ

ತ್ಯಾಗರಾಜನಗರ, ಬೆಂಗಳೂರು - 28

ದೂ : 6528542

# ಮುನ್ನುಡಿ

ಈ ಗ್ರಂಥದ ಪ್ರತಿಗಳೆಲ್ಲವೂ ಮುಗಿದುಹೋಗಿದ್ದರಿಂದ ಈಗ ಪೂರ್ಣವಾಗಿ ಶೋಧಿಸಿ ಅಚ್ಚಿನ ತಪ್ಪುಗಳನ್ನು ತಿದ್ದಿ ಪ್ರಕಟಿಸಲಾಗಿದೆ. ಕಾರ್ಯಾಲಯದ ಪಂಡಿತರು ಶ್ರೀ ಲಕ್ಷ್ಮೀನರಸಿಂಹಮೂರ್ತಿಗಳವರು ಅಚ್ಚಿನ ಕರಡನ್ನೆಲ್ಲ ತಿದ್ದಿ ಇದನ್ನು ಆದಷ್ಟು ಶುದ್ಧರೂಪಕ್ಕೆ ತಂದಿರುತ್ತಾರೆ.

ಶಾಂಕರಭಾಷ್ಯದಲ್ಲಿರುವ ಪ್ರಕ್ರಿಯೆಗೆ ಈ ಗ್ರಂಥದಲ್ಲಿರುವ ಪ್ರಕ್ರಿಯೆಯನ್ನು ಹೋಲಿಸಿ ನೋಡಬೇಕೆಂಬ ಕುತೂಹಲವುಳ್ಳ ಜಿಜ್ಞಾಸುಗಳಿಗೆ ಇದು ಎಂದಿನಂತೆಯೇ ಉಪಕಾರಕವಾಗಿರುವದೆಂದು ನಂಬಿರುತ್ತೇನೆ.

**ಈ ಗ್ರಂಥದ ಪ್ರಕಟನೆಗೆ ಸಹಾಯ ಮಾಡಿದವರು :**

1) ಶ್ರೀ ಕೆ. ಟಿ. ಅನಂತಸುಬ್ಬರಾವ್, ಬೆಂಗಳೂರು. ರೂ. 250

2) ಶ್ರೀಮತಿ ವಿಜಯಲಕ್ಷ್ಮಿ - ಶಿವಶಂಕರ್, ಬೆಂಗಳೂರು. ರೂ. 250
(ಪತಿ ದಿವಂಗತ ಶಿವಶಂಕರ್‌ರವರ ಸ್ಮರಣಾರ್ಥ)

3) ಎ. ಆರ್. ಅಶ್ವತ್ಥನಾರಾಯಣರಾವ್, ಬೆಂಗಳೂರು. ರೂ. 250

ಧನಸಹಾಯ ಮಾಡಿರುವ ಮೇಲ್ಕಂಡ ಮಹನೀಯರುಗಳಿಗೆ ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕವಾದ ಅಭಿನಂದನೆಗಳು.

18-12-2000
ಶ್ರೀವಿಕ್ರಮ ಸಂವತ್ಸರ,
ಮಾರ್ಗಶಿರ ಬಹುಳ ಅಷ್ಟಮಿ

**ಪ್ರಕಾಶಕರು**

## ಒಂದನೆಯ ಸಂಸ್ಕರಣದ
## ಪೀಠಿಕೆಯಿಂದ ಆರಿಸಿದ ಭಾಗ

ಈ ಚಿಕ್ಕ ಪ್ರಕರಣವನ್ನು ಅನೇಕಕಾರಣಗಳಿಂದ ಕನ್ನಡಿಸಲಾಗಿದೆ. ಇದನ್ನು ಸುಪ್ರಸಿದ್ಧರಾದ ಶ್ರೀಶಂಕರಭಗವತ್ಪಾದಾಚಾರ್ಯರವರೇ ಬರೆದಿದ್ದಾರೆಂದು ಅನೇಕರ ನಂಬಿಕೆಯಿರುವದಲ್ಲದೆ ಇದಕ್ಕೆ ಶ್ರೀಸುರೇಶ್ವರಾಚಾರ್ಯಕೃತವೆಂದು ಪ್ರಸಿದ್ಧವಾಗಿರುವ ವಾರ್ತಿಕವೂ ಆನಂದಗಿರಿಗಳ ವ್ಯಾಖ್ಯಾನವೂ ಇರುವದು ಇಂಥ ಕಾರಣಗಳಲ್ಲಿ ಒಂದಾಗಿದೆ.

ಉಪನಿಷತ್ತುಗಳಲ್ಲಿ ಉಪಾಸನಾವಾಕ್ಯಗಳೆಂದೂ ಜ್ಞಾನವಾಕ್ಯಗಳೆಂದೂ ಎರಡು ಬಗೆಯ ವಾಕ್ಯಗಳಿವೆ. ಆದ್ದರಿಂದ ಇವುಗಳಲ್ಲಿ ಯಾವ ಬಗೆಯ ವಾಕ್ಯಗಳಿಗೆ ಪ್ರಾಬಲ್ಯವನ್ನು ಒಪ್ಪಬೇಕೆಂಬ ಸಂಶಯವುಂಟಾಗುವದು ಸ್ವಾಭಾವಿಕವಾಗಿದೆ. ಬ್ರಹ್ಮವನ್ನು ಉಪಾಸನೆಮಾಡುವದರಿಂದ ಮುಕ್ತಿಯಾಗುವದೆ, ಬ್ರಹ್ಮಸ್ವರೂಪವನ್ನು ಚೆನ್ನಾಗಿ ಅರಿತುಕೊಂಡದ್ದರಿಂದ ಮುಕ್ತಿಯಾಗುವದೆ ? - ಎಂಬ ವಿಷಯದಲ್ಲಿ ಹಿಂದಿನಿಂದಲೂ ಅದ್ವೈತಿಗಳಲ್ಲಿಯೇ ವಿವಾದವಿತ್ತೆಂಬುದು ಶ್ರೀಗೌಡಪಾದರವರ ಮಾಂಡೂಕ್ಯಕಾರಿಕೆ, ಶ್ರೀಶಂಕರಾಚಾರ್ಯರವರ ಪ್ರಸ್ಥಾನತ್ರಯಭಾಷ್ಯ, ಶ್ರೀಸುರೇಶ್ವರಾಚಾರ್ಯರವರ ಬೃಹದಾರಣ್ಯಕ, ತೈತ್ತಿರೀಯ ವಾರ್ತಿಕಗಳು - ಈ ಗ್ರಂಥಗಳಿಂದಲೂ ತಿಳಿದುಬರುತ್ತದೆ. ಈ ಮೂವರು ಆಚಾರ್ಯರೂ ಜ್ಞಾನದಿಂದಲೇ ಮುಕ್ತಿಯಾಗುವದು, ಉಪಾಸನೆಯಿಂದ ಚಿತ್ತೈಕಾಗ್ರ್ಯವೂ ವಿಚಾರಕ್ಕೆ ಯೋಗ್ಯತೆಯೂ ಉಂಟಾಗುವವು - ಎಂದು ಸಿದ್ಧಾಂತ ಮಾಡಿರುತ್ತಾರೆ. 'ಪರಮಾತ್ಮನಿಗಿಂತ ಬೇರೆಯಾದದ್ದೆಲ್ಲವೂ ಮಿಥ್ಯೆಯೇ ; ಮನಸ್ಸು, ಇಂದ್ರಿಯ - ಮುಂತಾದವುಗಳೂ ಆತ್ಮನಿಗಿಂತ ಬೇರೆಯಾಗಿಲ್ಲದೆ ಇರುವದರಿಂದ ಆತ್ಮನೇ ಸತ್ಯವು. ಆತ್ಮನಿಗಿಂತ ಬೇರೆಯಾಗಿರುವವೆಂದು ಜನರು ಕಲ್ಪಿಸುವ ಮನಸ್ಸೇ ಮುಂತಾದವುಗಳು ಪರಮಾರ್ಥವಾಗಿ ಇಲ್ಲವೇ ಇಲ್ಲ' - ಎಂಬುದನ್ನು ಯಾರು ವಿಚಾರದಿಂದಲೇ ಕಂಡುಕೊಂಡಿರುವರೋ ಅಂಥವರಿಗೆ ಮತ್ತೆ ಮಾಡಬೇಕಾದ ಸಾಧನವು ಬೇರೆ ಏನೂ ಇರುವದೇ ಇಲ್ಲ ; ಆದರೆ ಇಂಥ ಉತ್ತಮಾಧಿಕಾರಿಗಳನ್ನು ಬಿಟ್ಟರೆ ಮಿಕ್ಕ ಮಂದ, ಮಧ್ಯಮಾಧಿಕಾರಿಗಳೆಲ್ಲ ಮನಸ್ಸನ್ನು ಬೇರೆಯಾಗಿರುವದೆಂದೇ ಎಣಿಸುವದರಿಂದ ಅಂಥವರಿಗೆ ಚಿತ್ತವನ್ನು

ನಿಗ್ರಹಿಸಿಕೊಂಡಮೇಲೆಯೇ ವಿಚಾರಶಕ್ತಿಯು ಬಲಿತು ತತ್ತ್ವಜ್ಞಾನವೂ ಬ್ರಹ್ಮಾನಂದವೂ ಕೈವಶವಾಗಬೇಕಾಗಿರುವದು - ಎಂದು ಶಂಕರಭಗವತ್ಪಾದರವರು ಸ್ಪಷ್ಟವಾಗಿ ಹೇಳಿರುತ್ತಾರೆ. (ಮಾಂಡೂಕ್ಯಕಾರಿಕೆಯ ಅದ್ವೈತಪ್ರಕರಣದ ೪೦ನೆಯ ಶ್ಲೋಕದ ಭಾಷ್ಯವನ್ನು ನೋಡಿ.)

ಹೀಗಿದ್ದರೂ ಈಗಿನ ಕೆಲವರು ಕೇವಲ ವಿಚಾರದಿಂದ ಯಾರಿಗೂ ಜ್ಞಾನವಾಗಲೇ ಆರದೆಂದೂ ನಿರ್ವಿಕಲ್ಪಕಸಮಾಧಿಯಿಂದಲೇ ತತ್ತ್ವಸಾಕ್ಷಾತ್ಕಾರವಾಗುವದೆಂದೂ ಭಾಷ್ಯವಿರುದ್ಧವಾದ ಅಭಿಪ್ರಾಯವನ್ನು ಹರಡುತ್ತಿದ್ದಾರೆ ; ಆಚಾರ್ಯಕೃತವೆಂದು ಪ್ರಸಿದ್ಧವಾಗಿರುವ ಕೆಲವು ಪ್ರಕರಣಗಳ ವಚನವನ್ನು ತಮ್ಮ ಮತಕ್ಕೆ ಪ್ರಮಾಣವಾಗಿ ಉದಾಹರಿಸುತ್ತಲೂ ಇರುತ್ತಾರೆ. ಅಂಥ ಪ್ರಕರಣಗಳಲ್ಲಿ ಈ **ಪಂಚೀಕರಣ**ವು ಒಂದಾಗಿರುತ್ತದೆ. ಇಂಥ ಪ್ರಕರಣಗಳ ಒಟ್ಟು ತಾತ್ಪರ್ಯವನ್ನು ಆಚಾರ್ಯರ ಪ್ರಸ್ಥಾನತ್ರಯಭಾಷ್ಯಕ್ಕೆ ಹೊಂದುವಂತೆ ಅರಿಯಬೇಕೇ ಹೊರತು ಸಿದ್ಧಾಂತಕ್ಕೆ ಹಾನಿಯಾಗುವಂತೆ ಅರ್ಥವನ್ನು ಮಾಡಬಾರದೆಂಬುದನ್ನು ಹೇಳಬೇಕಾದದ್ದೇ ಇಲ್ಲ. ಸಿದ್ಧಾಂತಕ್ಕೆ ವಿರೋಧವಾಗಿ ತೋರುವ ಅಭಿಪ್ರಾಯದ ವಚನಗಳೇನಾದರೂ ಪ್ರಕರಣದಲ್ಲಿ ಕಂಡುಬಂದರೆ ಆ ವಚನಗಳೇ ಪ್ರಕ್ಷಿಪ್ತವಾಗಿರಬೇಕು, ಎಂದರೆ ಯಾರೋ ಈಚೆಗೆ ಸೇರಿಸಿದವುಗಳಾಗಿರಬೇಕು ; ಇಲ್ಲದಿದ್ದರೆ ಪ್ರಕರಣವು ಆಚಾರ್ಯಕೃತವಲ್ಲದೆ ಇರಬೇಕು. ಆದ್ದರಿಂದ ಈ ಬಗೆಯ ಪ್ರಕರಣಗಳನ್ನು ಹೇಗೆ ನಾವು ಎಚ್ಚರಿಕೆಯಿಂದ ಉಪಯೋಗಿಸಿಕೊಳ್ಳಬೇಕೆಂಬುದನ್ನು ತೋರಿಸಿಕೊಡುವದಕ್ಕಾಗಿಯೂ ಈ ಪ್ರಕಟನೆಗೆ ಕೈಹಾಕಿದ್ದೇನೆ.

ಪಂಚೀಕರಣವು ಆಚಾರ್ಯಕೃತವಾಗಿರಲಿ ಬಿಡಲಿ, ಇದರಲ್ಲಿರುವ ವಿಷಯವು ವೇದಾಂತಜಿಜ್ಞಾಸುಗಳಿಗೆಲ್ಲ ತುಂಬ ಪ್ರಯೋಜನಕರವಾಗಿರುತ್ತದೆಯೆಂಬುದರಲ್ಲಿ ಸಂದೇಹವಿಲ್ಲ. ಓಂಕಾರದ ಚಿಂತನೆಯ ಮೂಲಕ ಪರಮಾತ್ಮನನ್ನು ಕಂಡುಕೊಳ್ಳಬಹುದೆಂಬುದು ಉಪನಿಷತ್ಸಿದ್ಧಾಂತದಲ್ಲಿ ಒಂದು ಬಹು ಮುಖ್ಯವಾದ ಉಪದೇಶವಾಗಿರುತ್ತದೆ. ಇದರಲ್ಲಿ ಅಪವಾದ(?)ಪ್ರಕ್ರಿಯೆಯು ಗುಟ್ಟೆಲ್ಲ ಅಡಕವಾಗಿರುವದರಿಂದ ಇದು ವಿಚಾರಕರಿಗೂ ವಿಚಾರಕ್ಕೆ ಸಮರ್ಥರಲ್ಲದ ಮಧ್ಯಮಾಧಿಕಾರಿಗಳಿಗೂ ಉಪಯೋಗಕರವಾಗಿರುವದು.

ಮಧ್ಯಮಾಧಿಕಾರಿಗಳೆಂದರೆ ಎಂದಿಗೂ ವಿಚಾರವನ್ನು ಮಾಡದೆ ಕುರುಡು ನಂಬಿಕೆಯಿಟ್ಟುಕೊಂಡಿರುವವರೆಂದು ಅರ್ಥವಲ್ಲ; ಸಾಧನವನ್ನೂ ಮಾಡುತ್ತಾ ಅನುಭವಕ್ಕೆ ಅನುಸಾರವಾಗಿ ವಿಚಾರವನ್ನೂ ಮಾಡುತ್ತಿರುವವರೆಂದರ್ಥ. ಇವರಿಗೆ ಕ್ರಮಕ್ರಮವಾಗಿ ಚಿತ್ತವು ಏಕಾಗ್ರವಾಗಿ, ವಿಚಾರದಲ್ಲಿ ಶಕ್ತಿಯೂ ಬಲಿತು ಜ್ಞಾನವುಂಟಾಗುತ್ತದೆ. ಆದ್ದರಿಂದಲೇ ಈ ಗ್ರಂಥವು ಮಾಂಡೂಕ್ಯೋಪನಿಷತ್ತಿನ ಆಧಾರದಿಂದ ಹುಟ್ಟಿರುವದಾದರೂ ಅಲ್ಲಿಲ್ಲದ ಉತ್ಪತ್ತಿಕ್ರಮ, ಪಂಚೀಕರಣ, ಲಯಚಿಂತನೆ- ಮುಂತಾದವುಗಳನ್ನೂ ಅಡಕಮಾಡಿಕೊಂಡಿರುತ್ತದೆ.

**ಗ್ರಂಥದ ಹೆಸರು** ಪಂಚೀಕರಣವೆಂದಿದ್ದರೂ ಪಂಚೀಕರಣವೇನೂ ಈ ಗ್ರಂಥದ ಮುಖ್ಯವಿಷಯವಲ್ಲ ; ಓಂಕಾರದ ಮೂಲಕ ಸಮಾಧಿಯನ್ನು ಪಡೆಯುವ ಬಗೆಯನ್ನು ತಿಳಿಸುವದೇ ಇದರ ಉದ್ದೇಶವಾಗಿದೆ. ವಾರ್ತಿಕಕ್ಕೆ **'ಪ್ರಣವವಾರ್ತಿಕ'** ವೆಂಬ ಮತ್ತೊಂದು ಹೆಸರೂ ಇದೆ. ಅದರಲ್ಲಿ ಮೊದಲಿನಲ್ಲಿಯೂ ಕೊನೆಯಲ್ಲಿಯೂ ಓಂಕಾರವಿಚಾರವನ್ನೇ ಹೇಳಿರುತ್ತದೆ. ಆದಕಾರಣ 'ಪ್ರಣವ ನಿರೂಪಣೆ'ಯೆಂದೋ 'ಸಮಾಧಿವಿಧಿ'ಯೆಂದೋ ಈ ಗ್ರಂಥಕ್ಕೆ ಹೆಸರಿದ್ದರೆ ಹೆಚ್ಚು ಒಪ್ಪುತ್ತಿತ್ತೆಂದು ಹೇಳಬೇಕಾಗಿದೆ.

**ಗ್ರಂಥಕ್ಕೂ ವಾರ್ತಿಕಕ್ಕೂ ಕೆಲವು ಕಡೆ ಹೊಂದುಗಡೆಯಿಲ್ಲ :** ಇದರ ಪಾಠಸ್ಥಿತಿಯು ಅಷ್ಟು ಸಮರ್ಪಕವಾಗಿಲ್ಲ ; ವಿಷಯವಿಮರ್ಶೆಯನ್ನು ಮಾಡುವದರಲ್ಲಿ ಆಚಾರ್ಯರು ತಮ್ಮ ಬೇರೆಯ ಗ್ರಂಥಗಳಲ್ಲಿ ಹೇಳಿರುವದಕ್ಕೂ ಇಲ್ಲಿ ಹೇಳಿರುವದಕ್ಕೂ ಕೆಲವು ವಿರೋಧಗಳು ಕಂಡುಬರುತ್ತವೆ. ಈ ಕಾರಣಗಳಿಂದ ವಾರ್ತಿಕವು ಒಂದು ಸ್ವತಂತ್ರಗ್ರಂಥವಾಗಿರಬಹುದೆ? ಪಂಚೀಕರಣವನ್ನು ಸುರೇಶ್ವರಾಚಾರ್ಯರಿಂದೀಚೆಗೆ ಯಾರೋ ಮಾಡಿರಬಹುದೆ? - ಎಂದು ಈಚಿನ ವಿಮರ್ಶಕರು ಕೆಲವರು ಶಂಕಿಸಿರುವರು. ಇವರ ಶಂಕೆಗೆ ಅನುಕೂಲವಾಗಿರುವ ವಿಷಯಗಳನ್ನೆಲ್ಲ ಓದುಗರ ಸೌಕರ್ಯಕ್ಕಾಗಿ **ಒಂದನೆಯ ಪರಿಶಿಷ್ಟ**ದಲ್ಲಿ ಕೂಡಿಸಿಟ್ಟಿರುತ್ತೇನೆ.

**ವಾರ್ತಿಕದಲ್ಲಿ ಹೇಳಿರುವ ಕೆಲವು ವಿವರಗಳಿಗೂ ಉಪನಿಷತ್ತಿನಲ್ಲಿರುವ ಆದೇ ವಿಷಯದ ವಿವರಗಳಿಗೂ ಹೆಚ್ಚು ಕಡಿಮೆಗಳಿವೆ ;** ವಾರ್ತಿಕದ ಕೆಲವು ವಿಚಾರಗಳು ಬೇರೆಯ ಗ್ರಂಥಗಳಲ್ಲಿಯೂ ಕಂಡುಬರುತ್ತವೆ; ಅವುಗಳಲ್ಲಿ ಕೆಲವು ಹೋಲಿಕೆಗಳೂ ಕೆಲವು ವೈಲಕ್ಷಣ್ಯಗಳೂ ಇವೆ. ಈ ವಿಷಯಗಳನ್ನೆಲ್ಲ ಸಂಗ್ರಹಿಸಿ

**ಎರಡನೆಯ ಪರಿಶಿಷ್ಟ**ದಲ್ಲಿ ಕೊಟ್ಟಿರುತ್ತೇನೆ. ವಾರ್ತಿಕಕಾರರು ಪಂಚೀಕರಣವನ್ನು ತಮ್ಮ ಗ್ರಂಥದಲ್ಲಿ ಮತ್ತೆಲ್ಲಿಯಾದರೂ ಉದಾಹರಿಸಿರುವರೆ, ಪಂಚೀಕರಣ ವಾರ್ತಿಕಕ್ಕೂ ಬೃಹದಾರಣ್ಯಕ ತೈತ್ತಿರೀಯವಾರ್ತಿಕಗಳಿಗೂ ಏನಾದರೂ ಹೋಲಿಕೆ ಅಥವಾ ವೈಲಕ್ಷಣ್ಯಗಳುಂಟೆ ?- ಎಂಬ ವಿಷಯವನ್ನು ಗೊತ್ತುಪಡಿಸುವದಕ್ಕೆ ನನ್ನಿಂದ ಆಗಲಿಲ್ಲ.

ಮೂಲವೂ ವಾರ್ತಿಕವೂ ಸಣ್ಣ ಗ್ರಂಥಗಳಾದ್ದರಿಂದ ಅವುಗಳ ಸಂಸ್ಕೃತ ಪಾಠವನ್ನೂ ಕೊಟ್ಟಿರುತ್ತೇನೆ. ಮೂಲವನ್ನು ಒಟ್ಟು ಏಳು ಖಂಡಗಳಾಗಿ ಒಡೆದು ಮೊದಲು ಅರ್ಥದೊಡನೆ ಪೂರ್ತಿಯಾಗಿ ಅಚ್ಚುಮಾಡಿಸಲಾಗಿದೆ. ವಾರ್ತಿಕಕ್ಕೂ ಮೂಲಕ್ಕೂ ಇರುವ ಸಂಬಂಧವು ಥಟ್ಟನೆ ಹೊಳೆಯುವಂತೆ ವಾರ್ತಿಕವನ್ನೂ ಹಾಗೆಯೇ ವಿಂಗಡಿಸಿ ಆಮೇಲೆ ಮುದ್ರಿಸಿರುತ್ತದೆ. ಮೂಲವನ್ನು ನಿರ್ಣಯ ಸಾಗರದ ಮುದ್ರಿತಪ್ರತಿ, ಕಾಶೀಸಂಸ್ಕೃತಗ್ರಂಥಮಾಲೆಯಲ್ಲಿ ಮುದ್ರಿತವಾಗಿರುವ ಪ್ರತಿ - ಇವೆರಡರ ಆಧಾರದಿಂಧಲೂ, ವಾರ್ತಿಕವನ್ನು ಈ ಎರಡು ಮುದ್ರಿತ ಪುಸ್ತಕಗಳಲ್ಲದೆ 'ಮೈಸೂರು ಓರಿಯಂಟಲ್ ಲೈಬ್ರರಿ ಸೀರಿಸ್' ಎಂಬ ಗ್ರಂಥಾವಳಿಯ ದಕ್ಷಿಣಾಮೂರ್ತಿಸ್ತೋತ್ರದ ಪರಿಶಿಷ್ಟದಲ್ಲಿರುವ ಪಾಠಕ್ಕೂ ಹೋಲಿಸಿಕೊಂಡು ಬರೆದಿದೆ. ಮೂಲಗ್ರಂಥದ ಅಡಿಯಲ್ಲಿ ಪಾಠಾಂತರವನ್ನು ಕೊಟ್ಟಿರುವದಲ್ಲದೆ ಗ್ರಂಥದ ಕೊನೆಯಲ್ಲಿ ವಿಸ್ತಾರವಾದ ವಿಶೇಷ ಟಿಪ್ಪಣಿ ಯೊಂದನ್ನು ಸೇರಿಸಿ ಕೆಲವು ಹೆಚ್ಚು ವಿಚಾರಗಳನ್ನು ಚರ್ಚಿಸಿರುತ್ತದೆ. ಆಮೇಲೆ ಪಂಚೀಕರಣವು ಆಚಾರ್ಯಕೃತವಲ್ಲವೆನ್ನುವವರ ಅಭಿಪ್ರಾಯವನ್ನು ವರ್ಣಿಸುವ ಪರಿಶಿಷ್ಟ, ವಾರ್ತಿಕದಲ್ಲಿ ಹೇಳಿರುವ ಅಧ್ಯಾತ್ಮಾದಿವಿಭಾಗವನ್ನು ಮಿಕ್ಕ ಗ್ರಂಥಗಳಿಗೆ ಹೋಲಿಸುವ ಪರಿಶಿಷ್ಟ- ಇವುಗಳನ್ನು ಕೊಟ್ಟಿದೆ. ಎಲ್ಲಕ್ಕೂ ಕೊನೆಯಲ್ಲಿ ಪುಸ್ತಕದಲ್ಲಿ ಬಂದಿರುವ ಎಲ್ಲಾ ಪಾರಿಭಾಷಿಕಶಬ್ದಗಳ ಶಬ್ದಾನುಕ್ರಮಣಿಕೆಯನ್ನೂ ಕೊಟ್ಟಿರುತ್ತದೆ. ಇಷ್ಟು ಪರಿಕರಗಳಿಂದ ಕೂಡಿರುವದರಿಂದ ಈವರೆಗೆ ಪ್ರಕಟಿತ ವಾಗಿರಬಹುದಾಗಿರುವ ಎಲ್ಲಾ ಪಂಚೀಕರಣದ ಸಂಸ್ಕರಣಗಳಿಗಿಂತಲೂ ಇದು ತತ್ತ್ವಜಿಜ್ಞಾಸುಗಳಿಗೆ ಹೆಚ್ಚು ಪ್ರಯೋಜನಕರವಾದೀತೆಂದು ನಂಬಿರುತ್ತೇನೆ.

ಶ್ರೀಮುಖಸಂವತ್ಸರ
ಮಾಘ ಶು॥ ಪಾಡ್ಯಮಿ
**1934**

**ಸಂಪಾದಕ**

-------

# ಓದುಗರಿಗೆ

ಈ ಗ್ರಂಥದಲ್ಲಿ

(೧) ಮೂಲವನ್ನು ಎಡಗಡೆಯ ಪುಟದಲ್ಲಿ ಖಂಡಖಂಡಗಳಾಗಿ ವಿಂಗಡಿಸಿ ಅಚ್ಚುಮಾಡಿಸಿ ಬಲಗಡೆಯಲ್ಲಿ ಅದೇ ಸಂಖ್ಯೆಯನ್ನು ಹಾಕಿ ಭಾವಾರ್ಥವನ್ನು ಅಚ್ಚು ಮಾಡಿಸಿದೆ. ಇಲ್ಲಿ ಮಾಡಿರುವ ಖಂಡಗಳ ವಿಂಗಡವು ಈ ಸಂಸ್ಕರಣದಲ್ಲಿ ಹೊಸದಾಗಿ ಮಾಡಿಕೊಂಡದ್ದು.

(೨) ಮೂಲದ ಕೆಳಗೆ ಕೊಟ್ಟಿರುವ ಟಿಪ್ಪಣಿಗಳು ಪಾಠಾಂತರಗಳನ್ನು ಸೂಚಿಸುತ್ತವೆ. ಇಲ್ಲಿ ನಿ।। ಎಂದರೆ ನಿರ್ಣಯಸಾಗರದಲ್ಲಿ ಅಚ್ಚಾಗಿರುವ ಪುಸ್ತಕದ ಪಾಠ; ಕಾ।। ಎಂದರೆ ಕಾಶಿಯ ಸಂಸ್ಕೃತಗ್ರಂಥಮಾಲೆಯಲ್ಲಿ ಅಚ್ಚಾಗಿರುವ ಪುಸ್ತಕದ ಪಾಠ ; ಮೈ ।। ಎಂದರೆ ''ಮೈಸೂರು ಓರಿಯಂಟಲ್ ಲೈಬ್ರರಿ ಸೀರೀಸ್'' ಎಂಬ ಗ್ರಂಥಾವಳಿಯಲ್ಲಿ ಅಚ್ಚಾಗಿರುವ ಪುಸ್ತಕದ ಪಾಠ.

(೩) ಮುಖ್ಯವಾದ ಶಬ್ದಗಳನ್ನು ಕಪ್ಪಕ್ಷರದಲ್ಲಿ ಅಚ್ಚುಮಾಡಿದೆ.

(೪) ಅನುವಾದವೂ ಅಲ್ಲಿರುವ ದಪ್ಪಕ್ಷರದ ತಲೆಬರಹಗಳೂ ವಿಶೇಷ ಟಿಪ್ಪಣಿಯೂ ಪರಿಶಿಷ್ಟವೂ ಸಂಪಾದಕರು ಹೊಸದಾಗಿ ಸೇರಿಸಿದವುಗಳು. ವಿಶೇಷಟಿಪ್ಪಣಿಯಲ್ಲಿ ಆ।।ಟೀ।। ಎಂದರೆ ಆನಂದಗಿರಿಯ ಟೀಕೆ ; ಟೀ।। ಎಂದರೆ 'ವಾರ್ತಿಕಾಭರಣ'ವೆಂಬ ಹೆಸರಿನ ಟೀಕೆ. 'ವಾರ್ತಿಕಾಭರಣ'ವನ್ನು ಬರೆದಾತನು ಯಾರೆಂಬುದು ತಿಳಿಯದು ; ಆತನು ತೀರ ಈಚಿನವನೆಂದು ತೋರುವದು.

---------

ವಾರ್ತಿಕಸಹಿತ

# ಪಂಚೀಕರಣ

॥ ಓಂ ॥

# ಪಞ್ಚೀಕರಣಮ್

★ ೧. ಅಥಾತಃ ಪರಮಹಂಸಾನಾಂ ಸಮಾಧಿವಿಧಿಂ ವ್ಯಾಖ್ಯಾಸ್ಯಾಮಃ॥

★ ೨. ಸಚ್ಛಬ್ದವಾಚ್ಯಮವಿದ್ಯಾಶಬಲಂ ಬ್ರಹ್ಮ । ಬ್ರಹ್ಮಣೋಽವ್ಯಕ್ತಮ್ ; ಅವ್ಯಕ್ತಾನ್ಮಹತ್, ಮಹತೋಽಹಂಕಾರಃ, ಅಹಂಕಾರಾತ್ ಪಞ್ಚತನ್ಮಾತ್ರಾಣಿ, ಪಞ್ಚತನ್ಮಾತ್ರೇಭ್ಯಃ ಪಞ್ಚಮಹಾಭೂತಾನಿ ಮಹಾಭೂತೇಭ್ಯೋಽಖಿಲಂ ಜಗತ್ ॥

★ ೩. ಪಞ್ಚಾನಾಂ ಭೂತಾನಾಮೇಕೈಕಂ ದ್ವಿಧಾ ವಿಭಜ್ಯ, ಸ್ವಾರ್ಧಭಾಗಂ ವಿಹಾಯ, ಅರ್ಧಭಾಗಂ ಚತುರ್ಧಾ ವಿಭಜ್ಯ, ಇತರೇಷು ಯೋಜಿತೇ ಪಞ್ಚೀಕರಣಂ ಮಾಯಾರೂಪದರ್ಶನಮ್ । **ಅಧ್ಯಾರೋಪಾಪವಾದಾಭ್ಯಾಂ ನಿಷ್ಪ್ರಪಞ್ಚಂ ಪ್ರಪಞ್ಚ್ಯತೇ**[1]॥

೪. ಓಂ. ಪಞ್ಚೀಕೃತಪಞ್ಚಮಹಾಭೂತಾನಿ ತತ್ಕಾರ್ಯಂ ಚ[2] ಸರ್ವಂ ವಿರಾಡಿತ್ಯುಚ್ಯತೇ ಏತತ್ ಸ್ಥೂಲಶರೀರಮಾತ್ಮನಃ । ಇನ್ದ್ರಿಯೈರರ್ಥೋಪಲಬ್ಧಿರ್ಜಾಗರಿತಮ್ । ತದುಭಯಾಭಿಮಾನ್ಯಾತ್ಮಾ[3] ವಿಶ್ವಃ । ಏತತ್ತ್ರಯಮಕಾರಃ ॥

೫. ಅಪಞ್ಚೀಕೃತಪಞ್ಚಮಹಾಭೂತಾನಿ ಪಞ್ಚ ತನ್ಮಾತ್ರಾಣಿ ತತ್ಕಾರ್ಯಂ ಚ ಪಞ್ಚ ಪ್ರಾಣಾಃ ದಶೇನ್ದ್ರಿಯಾಣಿ ಮನೋ ಬುದ್ಧಿಶ್ಚೇತಿ ಸಪ್ತದಶಕಂ ಲಿಙ್ಗಂ ಭೌತಿಕಂ ಹಿರಣ್ಯಗರ್ಭ ಇತ್ಯುಚ್ಯತೇ । ಏತತ್

★ ಈ ಮೂರು ಖಂಡಗಳೂ ಮೂಲಕ್ಕೆ ಸೇರಿಲ್ಲವೆಂದು ತೋರುತ್ತದೆ. ಒಂದನೆಯ ಪರಿಶಿಷ್ಟವನ್ನು ನೋಡಿ. 1. ಇದೇ ಶ್ಲೋಕಾರ್ಧವು ಗೀ. ಭಾ. ೧೩-೧೩ರಲ್ಲಿದೆ.

2. ನಿ॥ ಪಾಠದಲ್ಲಿ 'ಚ' ಎಂದಿಲ್ಲ. 3. ಇದು ಕಾ॥ ಪಾಠ ; ನಿ॥ ಪಾಠವು ಅಷ್ಟು ಶುದ್ಧವಲ್ಲ.

|| ಓಂ ||

# ಪಂಚೀಕರಣ

೧. ಈಗ ಆದ್ದರಿಂದ ಪರಮಹಂಸರಿಗೆ ಸಮಾಧಿಯ ವಿಧಾನವನ್ನು ವಿವರಿಸುತ್ತೇವೆ.

೨. ಸತ್ (ಇರುವದು) - ಎಂಬ ಶಬ್ದದಿಂದ ಹೇಳಲ್ಪಡುವದು ಅವಿದ್ಯೆಯಿಂದ ಸವಿಶೇಷವಾದ ಬ್ರಹ್ಮವು. ಬ್ರಹ್ಮದಿಂದ ಅವ್ಯಕ್ತವು, ಅವ್ಯಕ್ತದಿಂದ ಮಹತ್ತು, ಮಹತ್ತಿನಿಂದ ಅಹಂಕಾರವು, ಅಹಂಕಾರದಿಂದ ಐದು ತನ್ಮಾತ್ರೆಗಳು, ಐದು ತನ್ಮಾತ್ರೆಗಳಿಂದ ಐದು ಮಹಾಭೂತಗಳು, ಐದು ಮಹಾಭೂತಗಳಿಂದ (ಈ) ಎಲ್ಲಾ ಜಗತ್ತು (-ಹೀಗೆ ಆಗಿರುವದು).

೩. ಐದು ಭೂತಗಳಲ್ಲಿ ಒಂದೊಂದನ್ನೂ ಎರಡು ಪಾಲುಮಾಡಿ ಅದರ ಒಂದು ಅರ್ಧಭಾಗವನ್ನು ಬಿಟ್ಟು, (ಉಳಿದ) ಅರ್ಧಭಾಗವನ್ನು ನಾಲ್ಕು ಪಾಲಾಗಿ ಹಂಚಿ, ಮಿಕ್ಕ ಪಾಲುಗಳಲ್ಲಿ ಸೇರಿಸಿದರೆ **ಪಂಚೀಕರಣ**ವಾಗುವದು. ಇದು ಮಾಯಾರೂಪದ ದರ್ಶನವು. **ಅಧ್ಯಾರೋಪ ಮತ್ತು ಅಪವಾದ- ಇವುಗಳಿಂದ ಯಾವ ಪ್ರಪಂಚವೂ ಇಲ್ಲದ (ಪರಮಾತ್ಮವಸ್ತುವನ್ನು) ವಿಸ್ತರಿಸಿ ಹೇಳಲಾಗಿದೆ.**

೪. ಓಂ. ಪಂಚೀಕೃತವಾದ ಐದು ಮಹಾಭೂತಗಳು, ಅವುಗಳ ಕಾರ್ಯ- ಇದೆಲ್ಲ **ವಿರಾಜ**ನೆನಿಸುವದು. ಇದು ಆತ್ಮನಿಗೆ **ಸ್ಥೂಲಶರೀರವು.** ಇಂದ್ರಿಯಗಳಿಂದ ವಿಷಯಗಳನ್ನು ಅರಿಯುವದು **ಎಚ್ಚರವು.** ಅವೆರಡಕ್ಕೂ ಅಭಿಮಾನಿಯಾದ ಆತ್ಮನು **ವಿಶ್ವ**ನು. ಈ ಮೂರೂ 'ಅ' ಕಾರವು.

೫. ಪಂಚೀಕರಣವಾಗದ ಐದು ಮಹಾಭೂತಗಳಾದ ಐದು ತನ್ಮಾತ್ರೆಗಳೂ ಅವುಗಳ ಕಾರ್ಯವಾದ ಐದು ಪ್ರಾಣಗಳು, ಹತ್ತು ಇಂದ್ರಿಯಗಳು ಮನಸ್ಸು, ಬುದ್ಧಿ - ಈ ಹದಿನೇಳೂ ಸೇರಿದ ಭೌತಿಕವಾದ **ಲಿಂಗವೂ ಹಿರಣ್ಯಗರ್ಭ**ನೆನಿಸುವದು. ಇದು ಆತ್ಮನಿಗೆ ಸೂಕ್ಷ್ಮಶರೀರವು.

ಸೂಕ್ಷ್ಮಶರೀರಮಾತ್ಮನಃ । ಕರಣೇಷೂಪಸಂಹೃತೇಷು ಜಾಗರಿತಸಂಸ್ಕಾರಜಃ ಪ್ರತ್ಯಯಃ ಸವಿಷಯಃ ಸ್ವಪ್ನ ಇತ್ಯುಚ್ಯತೇ । ತದುಭಯಾಭಿಮಾನ್ಯಾತ್ಮಾ ತೈಜಸಃ। ಏತತ್ತ್ರಯಮುಕಾರಃ ॥

೬. ಶರೀರದ್ವಯಕಾರಣಮಾತ್ಮಾಜ್ಞಾನಂ ಸಾಭಾಸಮವ್ಯಾಕೃತಮಿತ್ಯುಚ್ಯತೇ । ಏತತ್ ಕಾರಣಶರೀರಮಾತ್ಮನಃ । ತಚ್ಚ ನ ಸತ್, ನಾಸತ್, ನಾಪಿ ಸದಸತ್ । ನ ಭಿನ್ನಂ, ನಾಭಿನ್ನಂ, ನಾಪಿ ಭಿನ್ನಾಭಿನ್ನಂ ಕುತಶ್ಚಿತ್। ನ ನಿರವಯವಂ, ನ ಸಾವಯವಂ, ನೋಭಯಮ್ । ಕಿಂ ತು ಕೇವಲಬ್ರಹ್ಮಾತ್ಮೈಕತ್ವಜ್ಞಾನಾಪನೋದ್ಯಮ್ । ಸರ್ವಪ್ರಕಾರಜ್ಞಾನೋಪಸಂಹಾರೇ ಬುದ್ಧೇಃ ಕಾರಣಾತ್ಮನಾಽವಸ್ಥಾನಂ ಸುಷುಪ್ತಿಃ । ತದುಭಯಾಭಿಮಾನ್ಯಾತ್ಮಾ ಪ್ರಾಜ್ಞಃ । ಏತತ್ತ್ರಯಂ ಮಕಾರಃ ॥

೭. ಅಕಾರ ಉಕಾರೇ, ಉಕಾರೋ ಮಕಾರೇ, ಮಕಾರ ಓಂಕಾರೇ, ಓಂಕಾರೋಽಹಮ್ಯೇವ । 'ಅಹಮಾತ್ಮಾ ಸಾಕ್ಷೀ ಕೇವಲಶ್ಚಿನ್ಮಾತ್ರಸ್ವರೂಪಃ; ನಾಜ್ಞಾನಂ ನಾಪಿ ತತ್ಕಾರ್ಯಮ್, ಕಿಂ ತು ನಿತ್ಯಶುದ್ಧಬುದ್ಧ-ಮುಕ್ತಸತ್ಯಸ್ವಭಾವಂ ಪರಮಾನನ್ದಾದ್ವಯಂ ಪ್ರತ್ಯಗ್ಭೂತಚೈತನ್ಯಂ ಬ್ರಹ್ಮೈವಾಹಮಸ್ಮೀ'ತ್ಯಭೇದೇನಾವಸ್ಥಾನಂ[1] ಸಮಾಧಿಃ । 'ತತ್ತ್ವಮಸಿ'* (ಛಾಂ. ೬-೮-೭), 'ಬ್ರಹ್ಮಾಹಮಸ್ಮಿ' (ತೈ.ನಾ.), 'ಸತ್ಯಂ ಜ್ಞಾನಮನನ್ತಂ ಬ್ರಹ್ಮ'* (ತೈ. ೨-೧), 'ಏಕಮೇವಾದ್ವಿತೀಯಮ್'* (ಛಾಂ. ೬-೨-೧), 'ಆತ್ಮೈವೇದಂ ಸರ್ವಮ್' (ಛಾಂ. ೭-೨೫-೧)* 'ಸರ್ವಂ ಖಲ್ವಿದಂ ಬ್ರಹ್ಮ' (ಛಾಂ. ೩-೧೪-೧), 'ಪ್ರಜ್ಞಾನಮಾನನ್ದಂ ಬ್ರಹ್ಮ' (?), 'ಅಯಮಾತ್ಮಾ ಬ್ರಹ್ಮ' (ಮಾಂ. ೨)- ಇತ್ಯಾದಿಶ್ರುತಿಭ್ಯಃ ॥ ಇತಿ ಪಞ್ಚೀಕರಣಂ ಭವತಿ ॥

1. ಬ್ರಹ್ಮೈವಾಹಮಸ್ಮಿ, ಅಹಂ ಬ್ರಹ್ಮಾಸ್ಮಿ, ಕಾ॥

* ಈ ವಾಕ್ಯಗಳು ಕಾ ॥ ಪಾಠದಲ್ಲಿ ಮಾತ್ರ ಇವೆ.

ಸುಮ್ಮನಾಗಲು ಎಚ್ಚರದ ಸಂಸ್ಕಾರದಿಂದ ಉಂಟಾದದ್ದಾಗಿಯೂ ವಿಷಯ ದೊಡಗೂಡಿದ್ದಾಗಿಯೂ ಇರುವ ಪ್ರತ್ಯಯವೇ **ಸ್ವಪ್ನ**ವೆನಿಸುವದು. ಆ ಎರಡಕ್ಕೂ ಅಭಿಮಾನಿಯಾದ ಆತ್ಮನು **ತೈಜಸನು.** ಈ ಮೂರೂ 'ಉ' ಕಾರವು.

೬. ಎರಡು ಶರೀರಗಳಿಗೂ ಕಾರಣವಾದ ಆತ್ಮಾಜ್ಞಾನವು ಆಭಾಸ ದೊಡನೆ ಕೂಡಿ **ಅವ್ಯಾಕೃತ**ವೆನಿಸುವದು. ಇದು ಆತ್ಮನಿಗೆ ಕಾರಣ ಶರೀರವು. ಅದು ಸದ್ರೂಪವಲ್ಲ, ಅಸದ್ರೂಪವಲ್ಲ, ಸದಸದ್ರೂಪವೂ ಅಲ್ಲ; ಯಾವದಕ್ಕೂ ಭಿನ್ನವೂ ಅಲ್ಲ, ಅಭಿನ್ನವೂ ಅಲ್ಲ, ಭಿನ್ನಾಭಿನ್ನವೂ ಅಲ್ಲ; ಅವಯವಗಳಿಲ್ಲದ್ದಲ್ಲ, ಅವಯವಗಳುಳ್ಳದ್ದಲ್ಲ, ಈ ಎರಡು ರೂಪ ವಾಗಿಯೂ ಇರುವದಲ್ಲ. ಮತ್ತೇನೆಂದರೆ : ಬರಿಯ ಬ್ರಹ್ಮಾತ್ಮೈಕ್ಯಜ್ಞಾನ ದಿಂದಲೇ ಹೋಗತಕ್ಕದ್ದು. ಎಲ್ಲಾ ಬಗೆಯ ಜ್ಞಾನವೂ ಹೋಗಲಾಗಿ ಬುದ್ಧಿಯು ಕಾರಣರೂಪದಿಂದ ಉಳಿಯುವದು **ಸುಷುಪ್ತಿ**ಯು. ಆ ಎರಡಕ್ಕೂ ಅಭಿಮಾನಿಯಾದ ಆತ್ಮನು **ಪ್ರಾಜ್ಞ**ನು. ಈ ಮೂರೂ 'ಮ' ಕಾರವು.

೭. ಅಕಾರವು ಉಕಾರದಲ್ಲಿ, ಉಕಾರವು ಮಕಾರದಲ್ಲಿ, ಮಕಾರವು ಓಂಕಾರದಲ್ಲಿ, ಓಂಕಾರವು ಅಹಮ್ಮಿನಲ್ಲಿಯೇ (ಲಯವಾಗುತ್ತದೆ.) ''ನಾನು ಚಿನ್ಮಾತ್ರಸ್ವರೂಪನಾದ ಒಬ್ಬನೇ ಆಗಿರುವ ಸಾಕ್ಷಿಯು ; ಅಜ್ಞಾನವಲ್ಲ, ಅದರ ಕಾರ್ಯವೂ ಅಲ್ಲ, ಮತ್ತೇನೆಂದರೆ ನಿತ್ಯಶುದ್ಧಬುದ್ಧ ಮುಕ್ತಸತ್ಯಸ್ವಭಾವ ವಾಗಿಯೂ ಪರಮಾನಂದಾದ್ವಯರೂಪವಾಗಿಯೂ ಒಳಗಿನ ಚೈತನ್ಯ ವಾಗಿಯೂ ಇರುವ ಬ್ರಹ್ಮವೇ ನಾನು''-ಎಂದು ಅಭೇದದಿಂದ ಇರುವಿಕೆಯೇ ಸಮಾಧಿಯು. ''ಅದು ನೀನೇ ಆಗಿರುವೆ'' (ಛಾಂ.), ''ಬ್ರಹ್ಮವು ನಾನೇ ಆಗಿರುವೆನು'' (ತೈ.ನಾ.),''ಸತ್ಯವೂ ಜ್ಞಾನವೂ ಅನಂತವೂ (ಆದದ್ದು) ಬ್ರಹ್ಮವು'' (ತೈ.), ''(ಬ್ರಹ್ಮವು) ತನಗೆರಡನೆಯ ದಿಲ್ಲದ ಒಂದೇ'' (ಛಾಂ.), ''ಇದೆಲ್ಲವೂ ಆತ್ಮನೇ'' (ಛಾಂ.), ''ಇದೆಲ್ಲವೂ ಬ್ರಹ್ಮವೇ'' (ಛಾಂ.), ''ಪ್ರಜ್ಞಾನವೂ ಆನಂದವೂ ಆದದ್ದು ಬ್ರಹ್ಮವು'' (?), ''ಈ ಆತ್ಮನೇ ಬ್ರಹ್ಮವು'' (ಮಾಂ.)- ಇವೇ ಮುಂತಾದ ಶ್ರುತಿಗಳು (ಇದಕ್ಕೆ ಪ್ರಮಾಣವು).

**ಹೀಗೆ ಪಂಚೀಕರಣವಾಯಿತು.**

# ಪಞ್ಚೀಕರಣವಾರ್ತಿಕಮ್

೧

ಓಂಕಾರಃ ಸರ್ವವೇದಾನಾಂ ಸಾರಸ್ತತ್ತ್ವಪ್ರಕಾಶಕಃ ।
ತೇನ ಚಿತ್ತಸಮಾಧಾನಂ ಮುಮುಕ್ಷೂಣಾಂ ಪ್ರಕಾಶ್ಯತೇ ॥ ೧ ॥

೨

ಆಸೀದೇಕಂ ಪರಂ ಬ್ರಹ್ಮ ನಿತ್ಯಮುಕ್ತಮವಿಕ್ರಿಯಮ್ ।
ತತ್ ಸ್ವಮಾಯಾಸಮಾವೇಶಾದ್ ಬೀಜಮವ್ಯಾಕೃತಾತ್ಮಕಮ್ ॥ ೨ ॥
ತಸ್ಮಾದಾಕಾಶಮುತ್ಪನ್ನಂ ಶಬ್ದತನ್ಮಾತ್ರರೂಪಕಮ್ ।
ಸ್ಪರ್ಶಾತ್ಮಕಸ್ತತೋ ವಾಯುಸ್ತೇಜೋ ರೂಪಾತ್ಮಕಂ ತತಃ ॥ ೩ ॥
ಆಪೋ ರಸಾತ್ಮಿಕಾಃ ತಸ್ಮಾತ್ತೇಭ್ಯೋ ಗನ್ಧಾತ್ಮಿಕಾ ಮಹೀ ।
ಶಬ್ದೈಕಗುಣಮಾಕಾಶಂ ಶಬ್ದಸ್ಪರ್ಶಗುಣೋ ಮರುತ್ ॥ ೪ ॥
ಶಬ್ದಸ್ಪರ್ಶರೂಪಗುಣೈಸ್ತ್ರಿಗುಣಂ ತೇಜ ಉಚ್ಯತೇ ।
ಶಬ್ದಸ್ಪರ್ಶರೂಪರಸಗುಣೈರಾಪಶ್ಚತುರ್ಗುಣಾಃ ॥ ೫ ॥
ಶಬ್ದಸ್ಪರ್ಶರೂಪರಸಗನ್ಧೈಃ ಪಞ್ಚಗುಣಾ ಮಹೀ ।
ತೇಭ್ಯಃ ಸಮಭವತ್ ಸೂತ್ರಂ[1] ಲಿಙ್ಗಂ[2] ಸರ್ವಾತ್ಮಕಂ ಮಹತ್ ॥ ೬ ॥
ತತಃ ಸ್ಥೂಲಾನಿ ಭೂತಾನಿ ಪಞ್ಚ ತೇಭ್ಯೋ ವಿರಾಡಭೂತ್ ।
ಪಞ್ಚೀಕೃತಾನಿ ಭೂತಾನಿ ಸ್ಥೂಲಾನೀತ್ಯುಚ್ಯತೇ ಬುಧೈಃ ॥ ೭ ॥

೩

ಪೃಥಿವ್ಯಾದೀನಿ ಭೂತಾನಿ ಪ್ರತ್ಯೇಕಂ ವಿಭಜೇದ್ದ್ವಿಧಾ ।
ಏಕೈಕಂ ಬಾಗಮಾದಾಯ ಚತುರ್ಧಾ ವಿಭಜೇತ್ಪುನಃ ॥ ೮ ॥

---

1. ಸೂಕ್ಷ್ಮಂ ನಿ॥  2. ಭೂತಂ ಕಾ॥

# ಪಂಚೀಕರಣವಾರ್ತಿಕ

## ೧. ಗ್ರಂಥದ ವಿಷಯ

೧. ಓಂಕಾರವು ಎಲ್ಲಾ ವೇದಗಳ ಸಾರವಾಗಿದ್ದು ತತ್ತ್ವವನ್ನು ಬೆಳಗುವಂಥದ್ದಾಗಿರುವದು. ಅದರಿಂದ ಚಿತ್ತಸಮಾಧಾನವನ್ನು ಮಾಡಿ ಕೊಳ್ಳುವ ಬಗೆಯನ್ನು ಮುಮುಕ್ಷುಗಳಿಗಾಗಿ ತಿಳಿಸುತ್ತೇವೆ.

## ೨. ಬ್ರಹ್ಮದಿಂದ ಜಗತ್ತುಂಟಾದ ಬಗೆ

೨-೪. ಯಾವಾಗಲೂ ಮುಕ್ತವಾಗಿಯೇ ಇರುವ, ಯಾವ ಮಾರ್ಪಾಡುಗಳೂ ಇಲ್ಲದ ಪರಬ್ರಹ್ಮವು ಒಂದೇ ಇತ್ತು. ಅದು ತನ್ನ ಮಾಯೆಯ ಸಂಬಂಧದಿಂದ ಅವ್ಯಾಕೃತರೂಪವಾದ ಬೀಜವಾಯಿತು. ಅದರಿಂದ ಶಬ್ದತನ್ಮಾತ್ರೆಯ ರೂಪವಾದ ಆಕಾಶವುಂಟಾಯಿತು ; ಅದರಿಂದ ಸ್ಪರ್ಶರೂಪವಾದ ವಾಯು, ಅದರಿಂದ ರೂಪಾತ್ಮಕವಾದ ತೇಜಸ್ಸು, ಅದರಿಂದ ರಸಾತ್ಮಕವಾದ ಅಪ್ಪು, ಅದರಿಂದ ಗಂಧಾತ್ಮಕವಾದ ಪೃಥಿವಿಯು (-ಹೀಗೆ) ಉಂಟಾದವು.

೪-೬. ಆಕಾಶದಲ್ಲಿ ಶಬ್ದವೊಂದೇ ಗುಣವು ; ವಾಯುವಿಗೆ ಶಬ್ದ, ಸ್ಪರ್ಶ - ಇವೆರಡು ಗುಣಗಳು ; ಶಬ್ದ, ಸ್ಪರ್ಶ, ರೂಪ-ಈ ಮೂರು ಗುಣ ಗಳಿಂದ ಕೂಡಿದ್ದು ತೇಜಸ್ಸೆನಿಸುವದು ; ಅಪ್ಪಿನಲ್ಲಿ ಶಬ್ದ, ಸ್ಪರ್ಶ, ರೂಪ, ರಸ - ಈ ನಾಲ್ಕು ಗುಣಗಳು ಇರುವವು ; ಪೃಥ್ವಿಯಲ್ಲಿ ಶಬ್ದ, ಸ್ಪರ್ಶ, ರೂಪ, ರಸ, ಗಂಧ- ಈ ಐದು ಗುಣಗಳು ಇರುವವು.

೬-೭. ಇವುಗಳಿಂದ **ಸೂತ್ರ**ವೂ ಸರ್ವಾತ್ಮಕವಾದ **ಲಿಂಗ**ವೂ ಆದ **ಮಹತ್ತು** ಉಂಟಾಯಿತು, ಅವುಗಳಿಂದ ಐದು ಸ್ಥೂಲಭೂತಗಳುಂಟಾದವು, ಅವುಗಳಿಂದ **ವಿರಾಜ**ನಾದನು. ಪಂಚೀಕೃತವಾದ ಭೂತಗಳಿಗೆ ಸ್ಥೂಲ ವೆಂದು ಹೆಸರು.

## ೩. ಪಂಚೀಕರಣದ ರೀತಿ

೮-೧೦. ಪೃಥಿವಿಯೇ ಮುಂತಾದ ಭೂತಗಳಲ್ಲಿ ಒಂದೊಂದನ್ನೂ ಬೇರೆಬೇರೆ ಎರಡೆರಡು ಭಾಗವಾಗಿ ಮಾಡಬೇಕು ; ಇವುಗಳಲ್ಲಿ ಒಂದೊಂದು ಭಾಗವನ್ನು ತೆಗೆದುಕೊಂಡು ಮತ್ತೆ ನಾಲ್ಕು ಭಾಗಗಳಾಗಿ

ಏಕೈಕಂ ಭಾಗಮೇಕಸ್ಮಿನ್ ಭೂತೇ ಸಂವೇಶಯೇತ್ ಕ್ರಮಾತ್ ।
ತತಶ್ಚಾಕಾಶಭೂತಸ್ಯ ಭಾಗಾಃ ಪಞ್ಚ ಭವನ್ತಿ ಹಿ ॥ ೯ ॥
ವಾಯ್ವಾದಿಭಾಗಾಶ್ಚತ್ವಾರೋ ವಾಯ್ವಾದಿಷ್ವೇವಮಾದಿಶೇತ್ ।
ಪಞ್ಚೀಕರಣಮೇತತ್ ಸ್ಯಾದಿತ್ಯಾಹುಸ್ತತ್ತ್ವವೇದಿನಃ ॥ ೧೦ ॥

೪

ಪಞ್ಚೀಕೃತಾನಿ ಭೂತಾನಿ ತತ್ಕಾರ್ಯಂ ಚ ವಿರಾಡ್ ಭವೇತ್ ।
ಸ್ಥೂಲಂ ಶರೀರಮೇತತ್ ಸ್ಯಾದಶರೀರಸ್ಯ ಚಾತ್ಮನಃ ॥ ೧೧ ॥
ಅಧಿದೈವತಮಧ್ಯಾತ್ಮಮಧಿಭೂತಮಿತಿ ತ್ರಿಧಾ ।
ಏಕಂ ಬ್ರಹ್ಮ ವಿಭಾಗೇನ ಭ್ರಮಾದ್ ಭಾತಿ ನ ತತ್ತ್ವತಃ ॥ ೧೨ ॥
ಇನ್ದ್ರಿಯೈರರ್ಥವಿಜ್ಞಾನಂ ದೇವತಾನುಗ್ರಹಾನ್ವಿತೈಃ ।
ಶಬ್ದಾದಿವಿಷಯಂ ಜ್ಞಾನಂ ತಜ್ಜಾಗರಿತಮುಚ್ಯತೇ ॥ ೧೩ ॥
ಶ್ರೋತ್ರಮಧ್ಯಾತ್ಮಮಿತ್ಯುಕ್ತಂ ಶ್ರೋತವ್ಯಂ ಶಬ್ದಲಕ್ಷಣಮ್ ।
ಅಧಿಭೂತಂ ತದಿತ್ಯುಕ್ತಂ ದಿಶಸ್ತತ್ರಾಧಿದೈವತಮ್ ॥ ೧೪ ॥
ತ್ವಗಧ್ಯಾತ್ಮಮಿತಿ ಪ್ರೋಕ್ತಂ ಸ್ಪ್ರಷ್ಟವ್ಯಂ ಸ್ಪರ್ಶಲಕ್ಷಣಮ್ ।
ಅಧಿಭೂತಂ ತದಿತ್ಯುಕ್ತಂ ವಾಯುಸ್ತತ್ರಾಧಿದೈವತಮ್ ॥ ೧೫ ॥
ಚಕ್ಷುರಧ್ಯಾತ್ಮಮಿತ್ಯುಕ್ತಂ ದ್ರಷ್ಟವ್ಯಂ ರೂಪಲಕ್ಷಣಮ್ ।
ಅಧಿಭೂತಂ ತದಿತ್ಯುಕ್ತಮಾದಿತ್ಯೋಽತ್ರಾಧಿದೈವತಮ್ ॥ ೧೬ ॥
ಜಿಹ್ವಾಧ್ಯಾತ್ಮಂ, ತಯಾಽಽಸ್ವಾದ್ಯಮಧಿಭೂತಂ ರಸಾತ್ಮಕಮ್ ।
ವರುಣೋ ದೇವತಾ ತತ್ರ ಜಿಹ್ವಾಯಾಮಧಿದೈವತಮ್ ॥ ೧೭ ॥
ಘ್ರಾಣಮಧ್ಯಾತ್ಮಮಿತ್ಯುಕ್ತಂ ಘ್ರಾತವ್ಯಂ ಗನ್ಧಲಕ್ಷಣಮ್ ।

ಮಾಡಬೇಕು. ಈ ಒಂದೊಂದು ಭಾಗವನ್ನೂ ಒಂದೊಂದು ಭೂತದಲ್ಲಿ ಕ್ರಮವಾಗಿ ಸೇರಿಸುತ್ತಾ ಹೋಗಬೇಕು. ಇದರಿಂದ ಆಕಾಶಭೂತಕ್ಕೆ ಐದು ಭಾಗಗಳು ಆಗುತ್ತವೆಯಷ್ಟೆ? ಇವುಗಳಲ್ಲಿ ವಾಯುವೇ ಮುಂತಾದ ಭೂತಗಳ ಭಾಗಗಳು ನಾಲ್ಕು ಇರುವವು. ವಾಯುವೇ ಮುಂತಾದವುಗಳಲ್ಲಿಯೂ ಹೀಗೆಯೇ ತಿಳಿಯಬೇಕು. ಇದು **ಪಂಚೀಕರಣ**ವಾಗುವದೆಂದು ತತ್ತ್ವವನ್ನು ಬಲ್ಲವರು ಹೇಳುತ್ತಾರೆ.

## ೪. ವಿಶ್ವವಿರಾಜರ ಐಕ್ಯ

೧೧-೧೩. ಪಂಚೀಕೃತವಾದ ಭೂತಗಳೂ ಅವುಗಳ ಕಾರ್ಯವೂ **ವಿರಾಜ**ನೆನಿಸುವದು. ಶರೀರವಿಲ್ಲದ ಆತ್ಮನಿಗೆ ಇದು ಸ್ಥೂಲಶರೀರವಾಗಿರುವದು, ಅಧಿದೈವತ, ಅಧ್ಯಾತ್ಮ, ಅಧಿಭೂತ- ಎಂದು ಒಂದೇ ಬ್ರಹ್ಮವು ಮೂರು ಬಗೆಯಾಗಿ ಭ್ರಮೆಯಿಂದ ತೋರಿಕೊಳ್ಳುವದೇ ಹೊರತು ನಿಜವಾಗಿ (ಮೂರು ಭಾಗ) ವಿಲ್ಲ. ದೇವತಾನುಗ್ರಹದಿಂದ ಕೂಡಿದ ಇಂದ್ರಿಯಗಳಿಂದ ವಿಷಯಗಳ ಅರಿವು (ಉಂಟಾಗುತ್ತದೆ). ಶಬ್ದಾದಿಗಳನ್ನು ಗೋಚರಿಸುವ ಆ ಜ್ಞಾನವು ಎಚ್ಚರ **(ಜಾಗರಿತ)**ವೆನಿಸುವದು.

೧೪-೧೮. ಶ್ರೋತ್ರೇಂದ್ರಿಯವು 'ಅಧ್ಯಾತ್ಮ'ವೆನಿಸುತ್ತದೆ ; ಶಬ್ದವೆಂಬುದು ಕೇಳಲ್ಪಡತಕ್ಕದ್ದು ; ಇದು 'ಅಧಿಭೂತ'ವೆನಿಸುತ್ತದೆ ; ಇಲ್ಲಿ 'ದಿಕ್ಕು'ಗಳೇ 'ಅಧಿದೈವತ'ವು. ತ್ವಗಿಂದ್ರಿಯವು ಅಧ್ಯಾತ್ಮವೆನಿಸುವದು, ಸ್ಪರ್ಶವೆಂಬುದು ಮುಟ್ಟಲ್ಪಡತಕ್ಕದ್ದು ; ಇದು ಅಧಿಭೂತವೆನಿಸುತ್ತದೆ ; ವಾಯುವು ಅದಕ್ಕೆ ಅಧಿದೈವತವು. ಚಕ್ಷುರಿಂದ್ರಿಯವು ಅಧ್ಯಾತ್ಮವೆನಿಸುತ್ತದೆ; ರೂಪವೆಂಬುದು ನೋಡಲ್ಪಡತಕ್ಕದ್ದು ; ಇದು ಅದಿಭೂತವೆನಿಸುತ್ತದೆ ; ಸೂರ್ಯನೇ ಇಲ್ಲಿ ಅಧಿದೈವತವು. ಜಿಹ್ವೇಂದ್ರಿಯವು ಅಧ್ಯಾತ್ಮವು ; ಅದರಿಂದ ಸವಿಯಲ್ಪಡತಕ್ಕ ರುಚಿಯು ಅಧಿಭೂತವು ; ಈ ಜಿಹ್ವೇಂದ್ರಿಯಕ್ಕೆ ವರುಣನೇ ಅಧಿದೈವತವು. ಘ್ರಾಣೇಂದ್ರಿಯವು ಅಧ್ಯಾತ್ಮವೆನಿಸುವದು ;

ಅಧಿಭೂತಂ ತದಿತ್ಯುಕ್ತಮಶ್ವಿನಾವಧಿದೈವತಮ್[1] ॥ ೧೮ ॥
ವಾಗಧ್ಯಾತ್ಮಮಿತಿ ಪ್ರೋಕ್ತಂ ವಕ್ತವ್ಯಂ ಶಬ್ದಲಕ್ಷಣಮ್ ।
ಅಧಿಭೂತಂ ತದಿತ್ಯುಕ್ತಮಗ್ನಿಸ್ತತ್ರಾಧಿದೈವತಮ್ ॥ ೧೯ ॥
ಹಸ್ತಾವಧ್ಯಾತ್ಮಮಿತ್ಯುಕ್ತಮಾದಾತವ್ಯಂ ಚ ಯದ್ಭವೇತ್ ।
ಅಧಿಭೂತಂ ತದಿತ್ಯುಕ್ತಮಿನ್ದ್ರಸ್ತತ್ರಾಧಿದೈವತಮ್ ॥ ೨೦ ॥
ಪಾದಾವಧ್ಯಾತ್ಮಮಿತ್ಯುಕ್ತಂ ಗನ್ತವ್ಯಂ ತತ್ರ ಯದ್ಭವೇತ್ ।
ಅಧಿಭೂತಂ ತದಿತ್ಯುಕ್ತಂ ವಿಷ್ಣುಸ್ತತ್ರಾಧಿದೈವತಮ್ ॥ ೨೧ ॥
ಪಾಯುರಿನ್ದ್ರಿಯಮಧ್ಯಾತ್ಮಂ ವಿಸರ್ಗಸ್ತತ್ರ ಯೋ ಭವೇತ್ ।
ಅಧಿಭೂತಂ ತದಿತ್ಯುಕ್ತಂ ಮೃತ್ಯುಸ್ತತ್ರಾಧಿದೈವತಮ್ ॥ ೨೨ ॥
ಉಪಸ್ಥೇನ್ದ್ರಿಯಮಧ್ಯಾತ್ಮಂ ಸ್ತ್ರ್ಯಾದ್ಯಾನನ್ದಸ್ಯ ಕಾರಣಮ್ ।
ಅಧಿಭೂತಂ ತದಿತ್ಯುಕ್ತಮಧಿದೈವಂ ಪ್ರಜಾಪತಿಃ ॥ ೨೩ ॥
ಮನೋಽಧ್ಯಾತ್ಮಮಿತಿ ಪ್ರೋಕ್ತಂ ಮನ್ತವ್ಯಂ ತತ್ರ ಯದ್ಭವೇತ್ ।
ಅಧಿಭೂತಂ ತದಿತ್ಯುಕ್ತಂ ಚನ್ದ್ರಸ್ತತ್ರಾಧಿದೈವತಮ್ ॥ ೨೪ ॥
ಬುದ್ಧಿರಧ್ಯಾತ್ಮಮಿತ್ಯುಕ್ತಂ ಬೋದ್ಧವ್ಯಂ ತತ್ರ ಯದ್ಭವೇತ್ ।
ಅಧಿಭೂತಂ ತದಿತ್ಯುಕ್ತಮಧಿದೈವಂ ಬೃಹಸ್ಪತಿಃ ॥ ೨೫ ॥
ಅಹಂಕಾರಸ್ತಥಾಧ್ಯಾತ್ಮಮಹಂಕರ್ತವ್ಯಮೇವ ಯತ್[2] ।
ಅಧಿಭೂತಂ ತದಿತ್ಯುಕ್ತಂ ರುದ್ರಸ್ತತ್ರಾಧಿದೈವತಮ್ ॥ ೨೬ ॥
ಚಿತ್ತಮಧ್ಯಾತ್ಮಮಿತ್ಯುಕ್ತಂ ಚೇತವ್ಯಂ ತತ್ರ ಯದ್ಭವೇತ್ ।
ಅಧಿಭೂತಂ ತದಿತ್ಯುಕ್ತಂ ಕ್ಷೇತ್ರಜ್ಞೋಽತ್ರಾಧಿದೈವತಮ್[3] ॥ ೨೭ ॥
ತಮೋಽಧ್ಯಾತ್ಮಮಿತಿ ಪ್ರೋಕ್ತಂ ವಿಕಾರಸ್ತತ್ರ ಯೋ ಭವೇತ್ ।
ಅಧಿಭೂತಂ ತದಿತ್ಯುಕ್ತಮೀಶ್ವರೋಽತ್ರಾಧಿದೈವತಮ್ ॥ ೨೮ ॥

---

1. 'ಪೃಥಿವ್ಯತ್ರಾಧಿದೈವತಮ್' ಕಾ॥ 2. 'ಚ' ॥ ಕಾ॥
3. ಕಾ॥ ಮೈ॥ ಪಾಠಗಳನ್ನನುಸರಿಸಿದೆ, 'ರುದ್ರಸ್ತತ್ರಾಧಿದೈವತಮ್' ಎಂಬುದು ನಿ॥ ಪಾಠ.

ಗಂಧವೆಂಬುದು ಅದರಿಂದ ಮೂಸಲ್ಪಡತಕ್ಕದ್ದು ; ಇದು ಅಧಿಭೂತವೆನಿಸುವದು ; ಅಶ್ವಿನೀ ದೇವತೆಗಳು ಅಧಿದೈವತವು.

೧೯-೨೩. ವಾಗಿಂದ್ರಿಯವು ಅಧ್ಯಾತ್ಮವೆನಿಸುವದು ; ಮಾತೆಂಬುದು ಅದರಿಂದ ಹೇಳಲ್ಪಡತಕ್ಕದ್ದು ; ಇದು ಅಧಿಭೂತವೆನಿಸುವದು ; ಅಗ್ನಿಯು ಇದಕ್ಕೆ ಅಧಿದೈವತವು. ಪಾಣೀಂದ್ರಿಯವು ಅಧ್ಯಾತ್ಮವೆನಿಸುವದು ; ಅದರಿಂದ ತೆಗೆದುಕೊಳ್ಳಲ್ಪಡುವದು ಯಾವದೋ ಅದು ಅಧಿಭೂತವೆನಿಸುವದು ; ಇಂದ್ರನು ಇದಕ್ಕೆ ಅಧಿದೈವತವು. ಪಾದೇಂದ್ರಿಯವು ಅಧ್ಯಾತ್ಮವೆನಿಸುವದು ; ಅದರಿಂದ ನಡೆಯಲ್ಪಡತಕ್ಕದ್ದು ಯಾವದೋ ಅದು ಅಧಿಭೂತವೆನಿಸುವದು ; ವಿಷ್ಣುವು ಇದಕ್ಕೆ ಅಧಿದೈವತವು. ಪಾಯ್ವಿಂದ್ರಿಯವು ಅಧ್ಯಾತ್ಮವು ; ಅದರಿಂದ ಬಿಡಲ್ಪಡತಕ್ಕದ್ದು ಯಾವದೋ ಅದು ಅಧಿಭೂತವೆನಿಸುವದು ; ಮೃತ್ಯುವು ಇದಕ್ಕೆ ಅಧಿದೈವತವು. ಉಪಸ್ಥೇಂದ್ರಿಯವು ಅಧ್ಯಾತ್ಮವು ; ಹೆಂಗಸರು ಮೊದಲಾದದ್ದೇ ಅದರ ಆನಂದಕ್ಕೆ ಕಾರಣವು ; ಅದು ಅಧಿಭೂತವೆನಿಸುವದು ; ಪ್ರಜಾಪತಿಯು ಇದಕ್ಕೆ ಅಧಿದೈವತವು.

೨೪-೨೮. ಮನಸ್ಸು ಅಧ್ಯಾತ್ಮವೆನಿಸುವದು ; ಅದರಿಂದ ಮನನ ಮಾಡಲ್ಪಡತಕ್ಕದ್ದು ಯಾವದೋ ಅದು ಅಧಿಭೂತವೆನಿಸುವದು ; ಚಂದ್ರನು ಇದಕ್ಕೆ ಅಧಿದೈವತವು. ಬುದ್ಧಿಯು ಅಧ್ಯಾತ್ಮವೆನಿಸುವದು ; ಅದರಿಂದ ನಿಶ್ಚಯಿಸಿ ಅರಿಯಲ್ಪಡತಕ್ಕದ್ದು ಯಾವದಿರುವದೋ ಅದು ಅಧಿಭೂತವೆನಿಸುವದು ; ಬೃಹಸ್ಪತಿಯು ಅಧಿದೈವತವು ; ಅಹಂಕಾರವು ಅಧ್ಯಾತ್ಮವು ; ಅಭಿಮಾನಪಡಲ್ಪಡತಕ್ಕದ್ದು ಯಾವದೋ ಅದು ಅಧಿಭೂತವೆನಿಸುವದು ; ರುದ್ರನು ಅದಕ್ಕೆ ಅಧಿದೈವತವು. ಚಿತ್ತವು ಅಧ್ಯಾತ್ಮವೆನಿಸುವದು ; ಅದರಿಂದ ತಿಳಿಯಲ್ಪಡತಕ್ಕದ್ದು ಯಾವದಿರುವದೋ ಅದು ಅಧಿಭೂತವೆನಿಸುವದು; ಇದಕ್ಕೆ ಕ್ಷೇತ್ರಜ್ಞನು ಅಧಿದೈವತವು.

ಬಾಹ್ಯಾನ್ತಃಕರಣೈರೇವಂ ದೇವತಾನುಗ್ರಹಾನ್ವಿತೈಃ ।
ಸ್ವಂ ಸ್ವಂ ಚ ವಿಷಯಜ್ಞಾನಂ ತಜ್ಜಾಗರಿತಮುಚ್ಯತೇ ॥ ೨೯ ॥
ಯೇಯಂ ಜಾಗರಿತಾವಸ್ಥಾ ಶರೀರಂ ಕರಣಾಶ್ರಯಮ್ ।
ಯಸ್ತಯೋರಭಿಮಾನೀ ಸ್ಯಾದ್ವಿಶ್ವ ಇತ್ಯಭಿಧೀಯತೇ ॥ ೩೦ ॥
ವಿಶ್ವಂ ವೈರಾಜರೂಪೇಣ ಪಶ್ಯೇದ್ಭೇದನಿವೃತ್ತಯೇ ।

ೞ

ಜ್ಞಾನೇನ್ದ್ರಿಯಾಣಿ ಪಞ್ಚೈವ ಪಞ್ಚ ಕರ್ಮೇನ್ದ್ರಿಯಾಣಿ ಚ ॥ ೩೧ ॥
ಶ್ರೋತ್ರತ್ವಙ್ನಯನಘ್ರಾಣಜಿಹ್ವಾ ಧೀನ್ದ್ರಿಯಪಞ್ಚಕಮ್ ।
ವಾಕ್ಪಾಣಿಪಾದಪಾಯೂಪಸ್ಥಾಃ ಕರ್ಮೇನ್ದ್ರಿಯಪಞ್ಚಕಮ್ ॥ ೩೨ ॥
ಮನೋ ಬುದ್ಧಿರಹಂಕಾರಶ್ಚಿತ್ತಂ ಚೇತಿ ಚತುಷ್ಟಯಮ್ ।
ಸಂಕಲ್ಪಾಖ್ಯಂ ಮನೋರೂಪಂ ಬುದ್ಧಿರ್ನಿಶ್ಚಯರೂಪಿಣೀ ॥ ೩೩ ॥
ಅಭಿಮಾನಾತ್ಮಕಸ್ತದ್ವದಹಂಕಾರಃ ಪ್ರಕೀರ್ತಿತಃ ।
ಅನುಸನ್ಧಾನರೂಪಂ ಚ ಚಿತ್ತಮಿತ್ಯಭಿಧೀಯತೇ ॥ ೩೪ ॥
ಪ್ರಾಣೋಽಪಾನಸ್ತಥಾ ವ್ಯಾನ ಉದಾನಾಖ್ಯಸ್ತಥೈವ ಚ ।
ಸಮಾನಶ್ಚೇತಿ ಪಞ್ಚೈತಾಃ ಕೀರ್ತಿತಾಃ ಪ್ರಾಣವೃತ್ತಯಃ ॥ ೩೫ ॥
ಖಂ[1] ವಾಯ್ವಗ್ನ್ಯಮ್ಬುಕ್ಷಿತಯೋ ಭೂತಸೂಕ್ಷ್ಮಾಣಿ ಪಞ್ಚ ಚ ।
ಅವಿದ್ಯಾಕಾಮಕರ್ಮಾಣಿ ಲಿಙ್ಗಂ ಪುರ್ಯಷ್ಟಕಂ ವಿದುಃ ॥ ೩೬ ॥
ಏತತ್ಸೂಕ್ಷ್ಮಶರೀರಂ ಸ್ಯಾನ್ಮಾಯಿಕಂ ಪ್ರತ್ಯಗಾತ್ಮನಃ ।
ಕರಣೋಪರಮೇ ಜಾಗ್ರತ್ಸಂಸ್ಕಾರೋತ್ಥಂ[2] ಪ್ರಬೋಧವತ್ ।
ಗ್ರಾಹ್ಯಗ್ರಾಹಕರೂಪೇಣ ಸ್ಫುರಣಂ ಸ್ವಪ್ನ ಉಚ್ಯತೇ ॥ ೩೭ ॥

1. ಖವಾಯು, ಮೈ ॥
2. 'ಜಾಗ್ರತ್ಸಂಸ್ಕಾರೋತ್ಥ' ಎಂಬ ನಿ॥ ಮೈ॥ ಪಾಠಗಳು ಅಚ್ಚಿನ ತಪ್ಪಾಗಿರಬೇಕು.

ಅಜ್ಞಾನವೇ ಅಧ್ಯಾತ್ಮವು ; ಅದರಿಂದಾಗುವ ಮಾರ್ಪಾಡು ಯಾವದುಂಟೋ ಅದು ಅಧಿಭೂತವೆನಿಸುವದು ; ಈಶ್ವರನು ಇದಕ್ಕೆ ಅಧಿದೈವತವು.

೨೯-೩೦. ಹೀಗೆ ದೇವತೆಗಳ ಅನುಗ್ರಹದಿಂದ ಕೂಡಿದ ಹೊರಗಿನ ಮತ್ತು ಒಳಗಿನ ಕರಣಗಳಿಂದ ತಮ್ಮ ತಮ್ಮ ವಿಷಯದ ಅರಿತು ಕೊಳ್ಳುವಿಕೆಯಾಗುವದು. ಇದು ಎಚ್ಚರವೆನಿಸುವದು. ಈ ಎಚ್ಚರವೆಂಬ ಅವಸ್ಥೆ, ಕರಣಗಳಿಗೆ ಆಶ್ರಯವಾಗಿರುವ ಶರೀರ- ಇವೆರಡಕ್ಕೂ ಅಭಿಮಾನಿ ಯಾದವನು **'ವಿಶ್ವ'** ನೆನಿಸುವನು. ವಿಶ್ವನನ್ನೇ **ವಿರಾಜ**ನೆಂದು ತಿಳಿಯಬೇಕು. ಇದರಿಂದ ಭೇದವು ತೊಲಗುತ್ತದೆ.

## ೫. ತೈಜಸಹಿರಣ್ಯಗರ್ಭರ ಐಕ್ಯ

೩೧-೩೬. ಜ್ಞಾನೇಂದ್ರಿಯಗಳು ಐದು, ಕರ್ಮೇಂದ್ರಿಯಗಳು ಐದು ; [ಹೇಗೆಂದರೆ : ಶ್ರೋತ್ರ, ತ್ವಕ್ಕು, ನೇತ್ರ, ಘ್ರಾಣ, ಜಿಹ್ವಾ - ಇವು ಐದೂ ಜ್ಞಾನೇಂದ್ರಿಯಗಳು ; ವಾಕ್ಕು, ಪಾಣಿ, ಪಾದ, ಪಾಯು, ಉಪಸ್ಥ - ಇವು ಐದೂ ಕರ್ಮೇಂದ್ರಿಯಗಳು.] ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ - ಇವು ನಾಲ್ಕು (ಅಂತಃಕರಣವು) ; [ಇವುಗಳಲ್ಲಿ ಮನಸ್ಸು ಸಂಕಲ್ಪರೂಪ ವಾಗಿರುವದು, ಬುದ್ಧಿಯು ನಿಶ್ಚಯರೂಪವಾಗಿರುವದು, ಅಹಂಕಾರವು ಅಭಿಮಾನ ರೂಪವಾಗಿರುವದು, ಚಿತ್ತವು ಅನುಸಂಧಾನರೂಪವಾಗಿರು ವದು.] ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ - ಈ ಐದೂ ಪ್ರಾಣ ವೃತ್ತಿಗಳು ; ಆಕಾಶ, ವಾಯು, ತೇಜಸ್ಸು, ಅಪ್ಪು, ಪೃಥ್ವಿ - ಇವು ಐದು ಸೂಕ್ಷ್ಮಭೂತಗಳು ; ಅವಿದ್ಯಾ, ಕಾಮ, ಕರ್ಮ - ಈ (ಎಂಟು ಭಾಗಗಳ) **ಪುರ್ಯಷ್ಟಕ** ವನ್ನು **ಲಿಂಗ**ವೆನ್ನುತ್ತಾರೆ. ಇದು ಪ್ರತ್ಯಗಾತ್ಮನಿಗೆ ಮಾಯಿಕವಾದ **ಸೂಕ್ಷ್ಮಶರೀರ**ವಾಗಿರುವದು.

೩೭-೩೮. ಕರಣಗಳು ಸುಮ್ಮನಾಗಲು ಎಚ್ಚರದ ಸಂಸ್ಕಾರ ದಿಂದುಂಟಾಗಿ ಅರಿಯುವದು, ಅರಿಯಲ್ಪಡತಕ್ಕದ್ದು - ಎಂಬ ರೂಪದಲ್ಲಿ

ಅಭಿಮಾನೀ ತಯೋರ್ಯಸ್ತು ತೈಜಸಃ ಪರಿಕೀರ್ತಿತಃ ।
ಹಿರಣ್ಯಗರ್ಭರೂಪೇಣ ತೈಜಸಂ ಚಿನ್ತಯೇದ್ ಬುಧಃ ॥ ೩೮ ॥

೬

ಚೈತನ್ಯಾಭಾಸಖಚಿತಂ ಶರೀರದ್ವಯಕಾರಣಮ್ ।
ಆತ್ಮಾಜ್ಞಾನಂ ತದವ್ಯಕ್ತಮವ್ಯಾಕೃತಮಿತೀರ್ಯತೇ ॥ ೩೯ ॥
ನ ಸನ್ನಾಸನ್ನ ಸದಸದ್ಭಿನ್ನಾಭಿನ್ನಂ ನ ಚೋಭಯಮ್[1] ।
ನ ಸಭಾಗಂ ನ ನಿರ್ಭಾಗಂ ನ ಚಾಪ್ಯುಭಯರೂಪಕಮ್ ॥ ೪೦ ॥
ಬ್ರಹ್ಮಾತ್ಮೈಕತ್ವವಿಜ್ಞಾನಹೇಯಂ ಮಿಥ್ಯಾತ್ವಕಾರಣಾತ್[2] ॥ ೪೧ ॥
ಜ್ಞಾನಾನಾಮುಪಸಂಹಾರೇ[3] ಬುದ್ಧೇಃ ಕಾರಣತಾಸ್ಥಿತಿಃ ।
ವಟಬೀಜೇ ವಟಸ್ಯೇವ ಸುಷುಪ್ತಿರಭಿಧೀಯತೇ ॥ ೪೨ ॥
ಅಭಿಮಾನೀ ತಯೋರ್ಯಸ್ತು ಪ್ರಾಜ್ಞ ಇತ್ಯಭಿಧೀಯತೇ ।
ಜಗತ್ಕಾರಣರೂಪೇಣ ಪ್ರಾಜ್ಞಾತ್ಮಾನಂ ವಿಚಿನ್ತಯೇತ್ ॥ ೪೩ ॥

೭

ವಿಶ್ವತೈಜಸಸೌಷುಪ್ತವಿರಾಟ್ಸೂತ್ರಾಕ್ಷರಾತ್ಮಭಿಃ ।
ವಿಭಿನ್ನಮಿವ ಸಮ್ಮೋಹಾದೇಕಂ[4] ತತ್ತ್ವಂ ಚಿದಾತ್ಮಕಮ್ ॥ ೪೪ ॥
ವಿಶ್ವಾದಿಕತ್ರಯಂ ಯಸ್ಮಾದ್ ವೈರಾಜಾದಿತ್ರಯಾತ್ಮಕಮ್ ।
ಏಕತ್ವೇನೈವ ಸಂಪಶ್ಯೇ[5] ದನ್ಯಾಭಾವಪ್ರಸಿದ್ಧಯೇ ॥ ೪೫ ॥

---

1. 'ನ ಚಾತ್ಮನಃ', ಕಾ॥ 2. ೩೬ನೆಯ ವಾರ್ತಿಕವಾದಮೇಲೆ ಬಿಟ್ಟಿದ್ದ ಅರ್ಧವನ್ನು ಸೇರಿಸಿಕೊಂಡು ಇಲ್ಲಿ ಒಂದು ಶ್ಲೋಕವೆಂದು ಲೆಕ್ಕ ಹಿಡಿದಿದೆ.

3. 'ಜ್ಞಾನಾನಾಮುಪಸಂಹಾರೋ'- ಎಂದೇ ಮುದ್ರಿತಪುಸ್ತಕದಲ್ಲಿದೆ; 'ಉಪಸಂಹಾರೇ' ಎಂಬುದೇ ಸರಿಯಾದ ಪಾಠವೆಂದು ಸಂದರ್ಭದಿಂದ ಗೊತ್ತಾಗುವದು.

4. ಏಕತತ್ತ್ವಮ್, ಮೈ॥ 5. ಏಕತ್ವೇನ ಸಮಂ ಪಶ್ಯೇದ್, ಮೈ॥

ಎಚ್ಚರದಂತೆ ತೋರುವಿಕೆಯೇ **ಸ್ವಪ್ನ**ವೆನಿಸುವದು. ಇವೆರಡಕ್ಕೂ ಅಭಿಮಾನಿಯಾದವನು **ತೈಜಸ**ನೆನಿಸುವನು. ಜಾಣನಾದವನು ಈ ತೈಜಸನನ್ನು **ಹಿರಣ್ಯಗರ್ಭ**ರೂಪದಲ್ಲಿ ಚಿಂತಿಸಬೇಕು.

## ೬. ಪ್ರಾಜ್ಞಜಗತ್ಕಾರಣರ ಐಕ್ಯ

೩೯-೪೧. ಚೈತನ್ಯದ ಆಭಾಸದಿಂದ ಕೂಡಿರುವದಾಗಿ ಎರಡು ಶರೀರಕ್ಕೂ ಕಾರಣವಾಗಿರುವದು ಆತ್ಮನ ಅಜ್ಞಾನವು. ಇದು **ಅವ್ಯಕ್ತ**ವೆಂದೂ **ಅವ್ಯಾಕೃತ**ವೆಂದೂ ಕರೆಯಲ್ಪಡುವದು. ಇದು ಸತ್ತೂ ಅಲ್ಲ, ಅಸತ್ತೂ ಅಲ್ಲ, ಸದಸತ್ತೂ ಅಲ್ಲ ; ಭಿನ್ನವಲ್ಲ, ಅಭಿನ್ನವಲ್ಲ, ಭಿನ್ನಾಭಿನ್ನವೂ ಅಲ್ಲ ; ಭಾಗವುಳ್ಳದ್ದೂ ಅಲ್ಲ, ಭಾಗವಿಲ್ಲದ್ದೂ ಅಲ್ಲ, ಭಾಗವಿದ್ದೂ ಇಲ್ಲದ್ದೂ ಅಲ್ಲ; ಇದು ಮಿಥ್ಯೆಯಾಗಿರುವದರಿಂದ ಬ್ರಹ್ಮ, ಆತ್ಮ - ಇವೆರಡೂ ಒಂದೇ ಎಂಬ ಜ್ಞಾನದಿಂದ ಹೋಗುವದು.

೪೨-೪೩. ಜ್ಞಾನಗಳೆಲ್ಲವೂ ಅಡಗಿ ಆಲದಮರವು ಆಲದ ಬೀಜದಲ್ಲಿರುವಂತೆ ಬುದ್ಧಿಯು ಕಾರಣರೂಪದಲ್ಲಿದ್ದುಕೊಂಡಿರುವದೇ **ಸುಷುಪ್ತಿ**ಯೆನಿಸುವದು. ಇವೆರಡಕ್ಕೂ ಅಭಿಮಾನಿಯಾದವನು **ಪ್ರಾಜ್ಞ**ನೆನಿಸುವನು. ಪ್ರಾಜ್ಞಾತ್ಮನೇ **ಜಗತ್ಕಾರಣ**ನೆಂದು ಚಿಂತಿಸಬೇಕು.

## ೭. ಓಂಕಾರದ ಮೂಲಕ ಲಯಚಿಂತನೆ

೪೪-೪೫. ವಿಶ್ವ, ತೈಜಸ, ಪ್ರಾಜ್ಞ ; ವಿರಾಜ, ಸೂತ್ರ, ಅಕ್ಷರ- ಹೀಗೆ ಚಿದ್ರೂಪವಾದ ಒಂದೇ ತತ್ತ್ವವು ಬೇರೆಬೇರೆಯಾಗಿ ಭ್ರಾಂತಿಯಿಂದ ತೋರುತ್ತಿರುವದು. ವಿಶ್ವನೇ ಮೊದಲಾದ ಮೂರೂ ವಿರಾಜನೇ ಮುಂತಾದ ಮೂರಾಗಿಯೇ ಇರುವದರಿಂದ ಇವೆರಡನ್ನೂ ಒಂದೆಂದೇ ತಿಳಿಯಬೇಕು. ಇದರಿಂದ ಎರಡನೆಯದು ಮತ್ತೇನೂ ಇಲ್ಲವೆಂದು ಸಿದ್ಧವಾಗುವದು.

ಓಂಕಾರಮಾತ್ರಮಖಿಲಂ ವಿಶ್ವಪ್ರಾಜ್ಞಾದಿಲಕ್ಷಣಮ್ ।
ವಾಚ್ಯವಾಚಕತಾಭೇದಾದ್ಭೇದೇನಾನುಪಲಬ್ಧಿತಃ ॥ ೪೬ ॥

ಅಕಾರಮಾತ್ರಂ ವಿಶ್ವಃ ಸ್ಯಾದುಕಾರಸ್ತೈಜಸಃ ಸ್ಮೃತಃ ।
ಪ್ರಾಜ್ಞೋ ಮಕಾರ ಇತ್ಯೇವಂ ಪರಿಪಶ್ಯೇತ್ ಕ್ರಮೇಣ ತು ॥ ೪೭ ॥

ಸಮಾಧಿಕಾಲಾತ್ ಪ್ರಾಗೇವಂ ವಿಚಿನ್ತ್ಯಾತಿಪ್ರಯತ್ನತಃ ।
ಸ್ಥೂಲಸೂಕ್ಷ್ಮಕ್ರಮಾತ್ ಸರ್ವಂ ಚಿದಾತ್ಮನಿ ವಿಲಾಪಯೇತ್ ॥ ೪೮ ॥

ಅಕಾರಂ ಪುರುಷಂ ವಿಶ್ವಮುಕಾರೇ ಪ್ರವಿಲಾಪಯೇತ್ ।
ಉಕಾರಂ ತೈಜಸಂ ಸೂಕ್ಷ್ಮಂ ಮಕಾರೇ ಪ್ರವಿಲಾಪಯೇತ್ ॥ ೪೯ ॥

ಮಕಾರಂ ಕಾರಣಂ ಪ್ರಾಜ್ಞಂ ಚಿದಾತ್ಮನಿ ವಿಲಾಪಯೇತ್ ।
ಚಿದಾತ್ಮಾಹಂ ನಿತ್ಯಶುದ್ಧಬುದ್ಧಮುಕ್ತಸದದ್ವಯಃ ॥ ೫೦ ॥

ಪರಮಾನನ್ದಸನ್ದೋಹವಾಸುದೇವೋಽಹಮೋಮಿತಿ ।
ಜ್ಞಾತ್ವಾ ವಿವೇಚಕಂ ಚಿತ್ತಂ ತತ್ಸಾಕ್ಷಿಣಿ ವಿಲಾಪಯೇತ್ ॥ ೫೧ ॥

ಚಿದಾತ್ಮನಿ ವಿಲೀನಂ ಚೇತ್ತಚ್ಚಿತ್ತಂ ನೈವ ಚಾಲಯೇತ್ ।
ಪೂರ್ಣಬೋಧಾತ್ಮನಾಸೀತ ಪೂರ್ಣಾಚಲಸಮುದ್ರವತ್ ॥ ೫೨ ॥

ಏವಂ ಸಮಾಹಿತೋ ಯೋಗೀ ಶ್ರದ್ಧಾಭಕ್ತಿಸಮನ್ವಿತಃ ।
ಜಿತೇನ್ದ್ರಿಯೋ ಜಿತಕ್ರೋಧಃ ಪಶ್ಯೇದಾತ್ಮಾನಮದ್ವಯಮ್ ॥ ೫೩ ॥

೮

ಆದಿಮಧ್ಯಾವಸಾನೇಷು ದುಃಖಂ ಸರ್ವಮಿದಂ ಯತಃ ।
ತಸ್ಮಾತ್ ಸರ್ವಂ ಪರಿತ್ಯಜ್ಯ ತತ್ತ್ವನಿಷ್ಠೋ ಭವೇತ್ ಸದಾ ॥ ೫೪ ॥

ಯಃ ಪಶ್ಯೇತ್ ಸರ್ವಗಂ ಶಾನ್ತಮಾನನ್ದಾತ್ಮಾನಮದ್ವಯಮ್ ।
ನ ತೇನ ಕಿಂಚಿದಾಪ್ತವ್ಯಂ ಜ್ಞಾತವ್ಯಂ ವಾಽವಶಿಷ್ಯತೇ ॥ ೫೫ ॥

೪೬-೪೯. ವಿಶ್ವ, ಪ್ರಾಜ್ಞ- ಮುಂತಾದದ್ದೆಲ್ಲವೂ ಓಂಕಾರರೂಪವಾಗಿಯೇ ಇರುವದು ; ಏಕೆಂದರೆ ವಾಚ್ಯವಾಚಕಗಳಿಗೆ ಭೇದವಿರುವದಿಲ್ಲ, ಇವು ಬೇರೆಯಾಗಿ ತೋರುವದೂ ಇಲ್ಲ. ವಿಶ್ವನು ಕೇವಲ ಅಕಾರವು, ತೈಜಸನು ಉಕಾರವು, ಪ್ರಾಜ್ಞನು ಮಕಾರವು- ಹೀಗೆಂದು ಕ್ರಮವಾಗಿ ಅರಿಯತಕ್ಕದ್ದು. ಸಮಾಧಿಯಾಗುವ ಕಾಲಕ್ಕಿಂತ ಮೊದಲು ಅತಿಪ್ರಯತ್ನದಿಂದ ಹೀಗೆ ಚಿಂತನೆಮಾಡಿಕೊಂಡು ಸ್ಥೂಲಸೂಕ್ಷ್ಮಕ್ರಮದಿಂದ ಎಲ್ಲವನ್ನೂ ಚಿದಾತ್ಮನಲ್ಲಿ ಲಯಮಾಡಿಕೊಳ್ಳಬೇಕು. ಅಕಾರವಾದ ವಿಶ್ವನೆಂಬ ಪುರುಷನನ್ನು ಉಕಾರದಲ್ಲಿ ಲಯಮಾಡಿಕೊಳ್ಳಬೇಕು ; ಉಕಾರವಾದ ತೈಜಸನೆಂಬ ಸೂಕ್ಷ್ಮಾತ್ಮನನ್ನು ಮಕಾರದಲ್ಲಿ ಲಯಮಾಡಿಕೊಳ್ಳಬೇಕು ; ಮಕಾರವಾದ ಕಾರಣರೂಪನಾದ ಪ್ರಾಜ್ಞನನ್ನು ಚಿದಾತ್ಮನಲ್ಲಿ ಲಯಮಾಡಿಕೊಳ್ಳಬೇಕು.

೫೦-೫೩. ನಿತ್ಯಶುದ್ಧಬುದ್ಧಮುಕ್ತನಾಗಿ ಎರಡನೆಯದಿಲ್ಲದ ಸದ್ರೂಪನಾಗಿರುವ ಚಿದಾತ್ಮನೇ ನಾನು. ಪರಮಾನಂದರಾಶಿಯಾಗಿಯೂ ಓಂಕಾರದ ಲಕ್ಷ್ಯವಾಗಿಯೂ ಇರುವ ವಾಸುದೇವನೇ ನಾನು. ಹೀಗೆಂದು ಅರಿತುಕೊಂಡು ವಿವೇಕಮಾಡುವ ಚಿತ್ತವನ್ನೂ ಅದರ ಸಾಕ್ಷಿಯಲ್ಲಿ ಲಯಗೊಳಿಸಬೇಕು. ಚಿದಾತ್ಮನಲ್ಲಿ ಚಿತ್ತವು ಲಯವಾಯಿತೆಂದರೆ ಅದನ್ನು ಅಲುಗಾಡಿಸಬಾರದು. ತುಂಬಿತುಳುಕದ ಕಡಲಿನಂತೆ ಪೂರ್ಣಜ್ಞಾನಸ್ವರೂಪನಾಗಿದ್ದುಕೊಂಡಿರಬೇಕು. ಶ್ರದ್ಧಾಭಕ್ತಿಗಳಿಂದ ಕೂಡಿ ಯೋಗಿಯಾದವನು ಈ ರೀತಿಯಲ್ಲಿ ಸಮಾಧಿಯನ್ನು ಹೊಂದಿ ಇಂದ್ರಿಯಗಳನ್ನು ಗೆದ್ದುಕೊಂಡು ಸಿಟ್ಟನ್ನು ಜಯಿಸಿ ಅದ್ವಯನಾದ ಆತ್ಮನನ್ನು ಕಂಡುಕೊಳ್ಳಬೇಕು.

## ೮. ಜ್ಞಾನದ ಫಲ

೫೪-೫೭. ಈ ಪ್ರಪಂಚವೆಲ್ಲವೂ ಮೊದಲೂ ನಡುವೆಯೂ ಕೊನೆಯಲ್ಲಿಯೂ ದುಃಖಮಯವಾಗಿಯೇ ಇರುವದರಿಂದ ಎಲ್ಲವನ್ನೂ ಕೈಬಿಟ್ಟು ಯಾವಾಗಲೂ ತತ್ತ್ವನಿಷ್ಠನಾಗಿರಬೇಕು. ಯಾವಾತನು ಎಲ್ಲೆ

ಕೃತಕೃತ್ಯೋ ಭವೇದ್ವಿದ್ವಾನ್ ಜೀವನ್ಮುಕ್ತೋ ಭವೇತ್ಸದಾ ।
ಆತ್ಮನ್ಯೇವಾರೂಢಭಾವೋ[1] ಜಗದೇತನ್ನ ವೀಕ್ಷತೇ ॥ ೫೬ ॥

ಕದಾಚಿದ್ವ್ಯವಹಾರೇ ತು ದ್ವೈತಂ ಯದ್ಯಪಿ ಪಶ್ಯತಿ ।
ಬೋಧಾತ್ಮವ್ಯತಿರೇಕೇಣ ನ ಪಶ್ಯತಿ ಚಿದನ್ವಯಾತ್ ॥ ೫೭ ॥

ಕಿಂ ತು ಪಶ್ಯತಿ ಮಿಥ್ಯೈವ[2] ದಿಙ್ಮೋಹೇನ್ದುವಿಭಾಗವತ್ ।
ಪ್ರತಿಭಾಸಶರೀರಃ[3] ಸ್ಯಾತ್ತದಾಽಽಪ್ರಾರಬ್ಧಸಂಕ್ಷಯಾತ್[4] ॥ ೫೮ ॥

ತಸ್ಯ ತಾವದೇವ ಚಿರಮಿತ್ಯಾದಿಶ್ರುತಿರಬ್ರವೀತ್ ।
ಪ್ರಾರಬ್ಧಸ್ಯಾನುವೃತ್ತಿಸ್ತು ಮುಕ್ತಸ್ಯಾಭಾಸಮಾತ್ರತಃ ॥ ೫೯ ॥

ಸರ್ವದಾ ಮುಕ್ತ ಏವ ಸ್ಯಾಜ್ಜ್ಞಾತತತ್ತ್ವಃ ಪುಮಾನಸೌ ।
ಪ್ರಾರಬ್ಧಭೋಗಶೇಷಸ್ಯ[5] ಸಂಕ್ಷಯೇ ತದನನ್ತರಮ್ ॥ ೬೦ ॥

ಅವಿದ್ಯಾತಿಮಿರಾತೀತಂ ಸರ್ವಾಭಾಸವಿವರ್ಜಿತಮ್ ।
ಆನನ್ದ[6]ಮಮಲಂ ಶುದ್ಧಂ ಮನೋವಾಚಾಮಗೋಚರಮ್ ॥ ೬೧ ॥

ವಾಚ್ಯವಾಚಕನಿರ್ಮುಕ್ತಂ ಹೇಯೋಪಾದೇಯವರ್ಜಿತಮ್ ।
ಪ್ರಜ್ಞಾನಘನಮಾನನ್ದಂ ವೈಷ್ಣವಂ ಪದಮಶ್ನುತೇ ॥ ೬೨ ॥

---

1. 'ಆತ್ಮನ್ಯಾರೂಢಭಾವಸ್ತು' ನಿ॥ ಮೈ॥
2. 'ಮಿಥ್ಯೇದಂ', ಮೈ॥
3. 'ಪ್ರತಿಭಾಸಃ ಶರೀರಸ್ಯ' - ಎಂಬ ಕಾ॥ ಪಾಠಕ್ಕಿಂತ ಇದು ಉತ್ತಮ.
4. 'ಸಂಚಯಾತ್' ನಿ॥
5. 'ಶೇಷಭೋಗಸ್ಯ' ಮೈ॥
6. 'ಚೈತನ್ಯಂ' ಮೈ ॥

ಲ್ಲಿಯೂ ಇರುವವನಾಗಿಯೂ ಶಾಂತನಾಗಿಯೂ ಆನಂದಸ್ವರೂಪನಾಗಿಯೂ ಎರಡನೆಯದಿಲ್ಲದಿರುವಾತನಾಗಿಯೂ ಇರುವ ಆತ್ಮನನ್ನು ಕಾಣುವನೋ ಆತನು ಇನ್ನು ಮೇಲೆ ಪಡೆಯಬೇಕಾದದ್ದಾಗಲಿ ತಿಳಿಯಬೇಕಾದದ್ದಾಗಲಿ ಯಾವದೂ ಇರುವದಿಲ್ಲ. ಹೀಗೆ ತಿಳಿದುಕೊಂಡಿರುವಾತನು ಕರ್ತವ್ಯವನ್ನೆಲ್ಲ ಮಾಡಿದವನಾಗಿರುತ್ತಾನೆ. ಯಾವಾಗಲೂ ಅವನು ಜೀವನ್ಮುಕ್ತನೇ ಆಗಿರುತ್ತಾನೆ. ಆತನು ಆತ್ಮನಲ್ಲಿಯೇ ಮನಸ್ಸನ್ನು ಹತ್ತಿಸಿದವನಾಗಿರುವದರಿಂದ ಈ ಜಗತ್ತನ್ನು ಕಾಣುವದೇ ಇಲ್ಲ ; ವ್ಯವಹಾರದಲ್ಲಿರುವಾಗ ದ್ವೈತವನ್ನು ಕಂಡರೂ ಎಲ್ಲೆಲ್ಲಿಯೂ ಚೈತನ್ಯವು ಸೇರಿಕೊಂಡೇ ಇರುವದರಿಂದ ಈ ದ್ವೈತವು ಚಿದಾತ್ಮಕ್ಕಿಂತ ಬೇರೆ ಎಂದು ಈತನು ತಿಳಿಯುವದಿಲ್ಲ. ದಿಕ್ಕುಗಳ ಭ್ರಮೆಯಾದಂತೆಯೂ ಚಂದ್ರನಲ್ಲಿ ತೋರುವ ವಿಭಾಗದಂತೆಯೂ ಇದೆಲ್ಲ ಮಿಥ್ಯೆಯೆಂದೇ ತಿಳಿಯುತ್ತಾನೆ.

೫೮-೬೨. ಆಗ ಅವನ ಪ್ರಾರಬ್ಧಕರ್ಮವು ನಾಶವಾಗುವವರೆಗೂ ಶರೀರವು ತೋರಿಕೊಳ್ಳುತ್ತಿರುವದು ; ಆದ್ದರಿಂದಲೇ ''ಅವನಿಗೆ ಅಲ್ಲಿಯವರೆಗೇ ತಡವು'' (ಛಾಂ.) ಎಂದು ಶ್ರುತಿಯು ಹೇಳಿರುತ್ತದೆ. ಪ್ರಾರಬ್ಧಕರ್ಮವು ಮುಕ್ತನಲ್ಲಿಯೂ ನಡೆದುಕೊಂಡುಬಂದಿರುವದೆಂಬುದೂ ಬರಿಯ ತೋರಿಕೆಯಾಗಿದೆ. ಏಕೆಂದರೆ ಈ ತತ್ತ್ವವನ್ನರಿತಾತನು ನಿಜವಾಗಿ ಯಾವಾಗಲೂ ಮುಕ್ತನೇ ಆಗಿರುತ್ತಾನೆ.

ಉಳಿದಿರುವ ಪ್ರಾರಬ್ಧವನ್ನನುಭವಿಸಿದ ಮೇಲೆ ಅವಿದ್ಯೆಯೆಂಬ ಕತ್ತಲೆಗೆ ಆಚೆಯಿರುವದಾಗಿಯೂ ಯಾವ ತೋರಿಕೆಯೂ ಇಲ್ಲದ್ದಾಗಿಯೂ ಆನಂದರೂಪವಾಗಿಯೂ ನಿರ್ಮಲವಾದ ಶುದ್ಧವಾದ ಚೈತನ್ಯವಾಗಿಯೂ ಮನಸ್ಸಿಗೂ ಮಾತುಗಳಿಗೂ ನಿಲುಕದೆ ಇರುವದಾಗಿಯೂ ವಾಚ್ಯವಾಚಕಗಳೆಂಬ ಭೇದವಿಲ್ಲದ್ದಾಗಿಯೂ ಬಿಡತಕ್ಕದ್ದಾಗಲಿ ಹಿಡಿಯತಕ್ಕದ್ದಾಗಲಿ ಯಾವದೊಂದೂ ಇಲ್ಲದ್ದಾಗಿಯೂ ಪ್ರಜ್ಞಾನದ ಗಟ್ಟಿಯಾಗಿಯೂ ಆನಂದರೂಪವಾಗಿಯೂ ಇರುವ ವಿಷ್ಣುವಿನ ಸ್ವರೂಪವನ್ನು ಪಡೆಯುತ್ತಾನೆ.

೯

ಇದಂ ಪ್ರಕರಣಂ ಯತ್ನಾಜ್ಜ್ಞಾತವ್ಯಂ[1] ಭಗವತ್ತಮೈಃ ।
ಅಮಾನಿತ್ವಾದಿನಿಯಮೈರ್ಗುರುಭಕ್ತಿಪ್ರಸಾದತಃ ॥ ೬೩ ॥
ಇಮಾಂ ವಿದ್ಯಾಂ ಪ್ರಯತ್ನೇನ ಯೋಗೀ ಸನ್ಧ್ಯಾಸು ಸರ್ವದಾ ।
ಸಮಭ್ಯಸೇದಿಹಾಮುತ್ರಭೋಗಾನಾಸಕ್ತಧೀಃ ಸುಧೀಃ ॥ ೬೪ ॥
ರಾಗದ್ವೇಷಾದಿರಹಿತಂ ಸ್ವಾತ್ಮಾನಂ ಚಿನ್ತಯೇತ್ ಸದಾ ।
ಸ ಏವ ಜೀವನ್ಮುಕ್ತೋ ವಾ ನ ಪುನರ್ಭವಸಂಭವಃ[2] ॥ ೬೫ ॥

-------

1. 'ಯಸ್ಮಾಜ್ಜ್ಞಾತವ್ಯಮ್' ನಿ॥ ಮೈ॥
2. ಇದು ನಿ॥ ಪಾಠದಲ್ಲಿ ಹೆಚ್ಚಾಗಿರುವ ಶ್ಲೋಕ ; ಮೈ॥ ಪಾಠದಲ್ಲಿ ಪೂರ್ವಾರ್ಧ ಮಾತ್ರ ಇದೆ.

## ೯. ಈ ಪ್ರಕರಣದಲ್ಲಿ ಹೇಳಿರುವ ವಿದ್ಯೆಗೆ ಅಧಿಕಾರಿಗಳು

೬೩-೬೫. ಈ ಪ್ರಕರಣವನ್ನು ಅಮಾನಿತ್ವವೇ ಮುಂತಾದ ಕಟ್ಟಲೆಗಳನ್ನು ಅನುಸರಿಸಿರುವ ಭಾಗವತೋತ್ತಮರು, ಗುರುಭಕ್ತಿ, (ಈಶ್ವರ) ಪ್ರಸಾದ- ಇವುಗಳಿಂದ ಪ್ರಯತ್ನಪಟ್ಟರೆ ತಿಳಿದುಕೊಳ್ಳಬಹುದು. ಜ್ಞಾನಿನಾದ ಯೋಗಿಯು ಈ ಲೋಕದ ಮತ್ತು ಪರಲೋಕದ ಭೋಗಗಳಲ್ಲಿ ಆಸಕ್ತಿಯನ್ನಿಡದೆ ಈ ವಿದ್ಯೆಯನ್ನು ಯಾವಾಗಲೂ ಸಂಧ್ಯಾಕಾಲಗಳಲ್ಲಿ ಚೆನ್ನಾಗಿ ಅಭ್ಯಾಸಮಾಡುತ್ತಿರಬೇಕು. (ತನ್ನ ಆತ್ಮನು ರಾಗದ್ವೇಷವೇ ಮುಂತಾದವುಗಳಿಲ್ಲದವನು- ಎಂದು ಯಾವಾಗಲೂ ಚಿಂತಿಸಬೇಕು. ಅಂಥವನೇ ಜೀವನ್ಮುಕ್ತನು; ಆತನಿಗೆ ಮರುಹುಟ್ಟಿನ ಸಂಭವವೇ ಇಲ್ಲ.)

---------

# ವಿಶೇಷ ಟಿಪ್ಪಣಿ

## ಪಂಚೀಕರಣ

೧. **'ಈಗ ಆದ್ದರಿಂದ'.** (ಅಥಾತಃ) ಎಂಬ ಮಾತುಗಳನ್ನು ಹೊಸ ಗ್ರಂಥದ ಅಥವಾ ಪ್ರಕರಣದ ಮೊದಲು ಉಪಯೋಗಿಸುವದು ಹಿಂದಿನ ಗ್ರಂಥಕಾರರ ಸಂಪ್ರದಾಯ. ಸೂತ್ರಗಳಲ್ಲಿ ಈ ವಾಡಿಕೆಯು ಹೆಚ್ಚು. 'ಮಧ್ಯಮಾಧಿಕಾರಿಗಳು ಸಮಾಧಿಯಿಂದಲೇ ತತ್ತ್ವವನ್ನು ಗ್ರಹಿಸ ಬೇಕಾಗಿರುವದಾದ್ದರಿಂದ' ಎಂಬುದು 'ಅತಃ' ಎಂಬುದರ ಅಭಿಪ್ರಾಯ ವಿರಬಹುದು.

**'ಪರಮಹಂಸರ'-** ಇಲ್ಲಿ ಹೇಳಿರುವ ಸಮಾಧಿಯ ಕ್ರಮವು ಸಂನ್ಯಾಸಿ ಗಳಿಗೋಸ್ಕರವೇ ಹೇಳಿದೆಯೆಂದು ಭಾವ ; ಏಕೆಂದರೆ ವಿಷಯವೈರಾಗ್ಯವಿದ್ದ ವರಿಗೆ ಮಾತ್ರ ಇದು ದಕ್ಕುವದು. ಮಿಕ್ಕವರು ಸಗುಣೋಪಾಸನೆ, ನಿಷ್ಕಾಮ ಕರ್ಮಯೋಗ, ಕಾಮ್ಯಕರ್ಮ - ಇವುಗಳಲ್ಲೊಂದಕ್ಕೆ ತಕ್ಕವರಾಗಿರುವರು. ೬೩ನೆಯ ವಾರ್ತಿಕದ ಟಿಪ್ಪಣಿಯನ್ನು ನೋಡಿ. ಬ್ರಹ್ಮಚಾರಿಯೂ ಗೃಹಸ್ಥನೂ ಸಂಧ್ಯಾವಂದನೆಯನ್ನು ಮಾಡುವಂತೆ ಸಂನ್ಯಾಸಿಗಳು ಇದನ್ನು ಮಾಡಬೇಕು. ೬೪ನೆಯ ವಾರ್ತಿಕ.

೨. **'ಸತ್'** ಎಂಬ ಶಬ್ದದಿಂದ ಹೇಳಲ್ಪಡುವದು'. ಇಲ್ಲಿ ಛಾಂದೋಗ್ಯದ ೬-೨-೧ರ ಸೂಚನೆಯಿದೆ.

**'ಅವಿದ್ಯೆಯಿಂದ ಸದೋಷವಾದ ಬ್ರಹ್ಮ.'** ಅವಿದ್ಯೆಯಿಂದಲೇ ಬ್ರಹ್ಮವು ಜಗತ್ಕಾರಣವೆನಿಸುವದು. ಸ್ವತಃ ಅದರಲ್ಲಿ ಕಾರಣತ್ವವಿಲ್ಲ. ಬ್ರಹ್ಮ ದಲ್ಲಿ ಯಾವ ಅವಿದ್ಯೆಯೂ ಇಲ್ಲವಾದರೂ ಬ್ರಹ್ಮದಲ್ಲಿಯೇ ಅಜ್ಞರು ಅವಿದ್ಯೆ ಯನ್ನು ಕಲ್ಪಿಸುತ್ತಾರೆ. ಇಲ್ಲಿ ಅವಿದ್ಯೆಯೆಂದರೆ ಬರಿಯ ಅಜ್ಞಾನವೆಂದು ಅರ್ಥವಲ್ಲ ; ಅವಿದ್ಯೆಯಿಂದ ಆಗಿರುವ ಜಗತ್ಕಾರಣವಾದ **ಮಾಯೆ** ಯೆಂದರ್ಥ. ಅವಿದ್ಯೆಯನ್ನೂ ಮಾಯೆಯನ್ನೂ ಒಂದೇ ಎಂದು ವ್ಯವ ಹರಿಸುವದು ವ್ಯಾಖ್ಯಾನಗ್ರಂಥಗಳಲ್ಲಿ ಬಹಳವಾಗಿ ವಾಡಿಕೆಯಾಗಿದೆ

ಯಾದರೂ ಭಾಷ್ಯದಲ್ಲಿಲ್ಲ ; **'ಅವಿದ್ಯಾಶಬಲ'** ಎಂಬ **ಮಾತಂತೂ ದಶೋಪನಿಷತ್ತುಗಳ ಭಾಷ್ಯಗಳಲ್ಲಿಯಾಗಲಿ ಗೀತಾಸೂತ್ರಭಾಷ್ಯಗಳಲ್ಲಾಗಲಿ ಇಲ್ಲವೇ ಇಲ್ಲ.**

**'ಅವ್ಯಕ್ತ'.** ಪ್ರಕೃತಿಯು ಎಂದರೆ ಜಗತ್ತಿಗೆ ಕಾರಣವಾದ ನಾಮ ರೂಪದ ಬೀಜವು ಇಂದ್ರಿಯಗಳಿಗೆ ಗೋಚರವಲ್ಲದ್ದರಿಂದ ಅವ್ಯಕ್ತವೆನಿಸುವದು. ಇದು ಬ್ರಹ್ಮದಲ್ಲಿಯೇ ಕಲ್ಪಿತವಾಗಿರುವದರಿಂದ ಬ್ರಹ್ಮದಿಂದ ಉಂಟಾಯಿತು - ಎಂದಿದೆ.

**ತ್ರಿಗುಣವ್ಯತಿರಿಕ್ತೋ ವೈ ಪುರುಷಶ್ಚೇತಿ ಕಲ್ಪಿತಃ ।**
**ತಸ್ಮಾದವ್ಯಕ್ತಮುತ್ಪನ್ನಂ ತ್ರಿಗುಣಂ ದ್ವಿಜಸತ್ತಮ ॥**

(ಪರಮಾತ್ಮನು ಮೂರು ಗುಣಗಳಿಗಿಂತಲೂ ಬೇರೆಯಾಗಿರುವನು. ಇವನನ್ನೇ ಪುರುಷನೆಂದು ಕಲ್ಪಿಸಿರುತ್ತಾರೆ ; ಎಲೈ ಬ್ರಾಹ್ಮಣೋತ್ತಮನೆ, ಈತನಿಂದ ತ್ರಿಗುಣಾತ್ಮಕವಾದ ಅವ್ಯಕ್ತವು ಉಂಟಾಯಿತು.) ಎಂದು ನಾರದ ಋಷಿಗೆ ನಾರಾಯಣನು ಹೇಳಿದನೆಂಬ ಮಹಾಭಾರತದ ಮೋಕ್ಷಧರ್ಮದ (೩೩೪-೩೧) ವಾಕ್ಯವನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬೇಕು.

**೩. 'ಪಂಚೀಕರಣ'-** ಛಾಂದೋಗ್ಯದಲ್ಲಿ ತೇಜಸ್ಸು, ಅಪ್ಪು, ಪೃಥ್ವಿ- ಎಂಬ ಮೂರು ಭೂತಗಳ ಸೃಷ್ಟಿಯನ್ನು ಹೇಳಿ ಒಂದೊಂದನ್ನೂ 'ಮೂರು ಮಡಿಕೆಯ ಭೂತವನ್ನಾಗಿ ಮಾಡುವೆನು' ಎಂದು ಹೇಳಿರುತ್ತದೆ. ಇದು ಪಂಚೀಕರಣಪಕ್ಷದಲ್ಲಿಯೂ ಸಮವಾಗುವದೆಂದು ಭಾಷ್ಯಕಾರರು ಅಲ್ಲಿ (ಛಾ. ಭಾ. ೪೭೧) ಬರೆದಿರುತ್ತಾರೆ. ಆ ವಾಕ್ಯದ ಆಧಾರದಿಂದ ಇಲ್ಲಿ ಪಂಚೀಕರಣವನ್ನು ವರ್ಣಿಸಿದೆಯೆಂದು ಹೇಳಬಹುದಾಗಿದೆ. ಇಲ್ಲಿ ಪೃಥ್ವಿ 1/2 + ಅಪ್ಪು 1/8 + ತೇಜಸ್ಸು 1/8 + ವಾಯು 1/8 + ಆಕಾಶ 1/8 = **ಪಂಚೀಕೃತಪೃಥ್ವಿ.** ಹೀಗೆಯೇ ಆಯಾ ಸೂಕ್ಷ್ಮಭೂತದ ಅರ್ಧಪಾಲು, **ಮಿಕ್ಕವುಗಳ** ಬೇಳೆಪಾಲುಗಳು ನಾಲ್ಕು - ಒಟ್ಟು ಸೇರಿ ಅಪ್ಪು, ತೇಜಸ್ಸು, ವಾಯು, ಆಕಾಶವೆಂಬ (ಪಂಚೀಕೃತ ಅಥವಾ) ಸ್ಥೂಲಭೂತಗಳು ಆಗುತ್ತವೆ

ಎಂದು ಭಾವ. **ಪಂಚದಶಿಯ ತತ್ತ್ವವಿವೇಕದ** ೨೭ನೆಯ ಶ್ಲೋಕವನ್ನು ನೋಡಿ. ಸೂಕ್ಷ್ಮಭೂತಗಳು ಇಂದ್ರಿಯಕ್ಕೆ ಗೋಚರವಾಗುವದಿಲ್ಲ, ಆದರೆ ಒಂದೊಂದು ಭೂತದಲ್ಲಿಯೂ ಮಿಕ್ಕ ನಾಲ್ಕು ಭೂತಗಳು ಸೇರಿಕೊಂಡರೆ ಆಗ ಅವು ಸ್ಥೂಲಭೂತಗಳಾಗಿ ಇಂದ್ರಿಯಕ್ಕೆ ತೋರುವವು - ಎಂಬರ್ಥ ವನ್ನು ಭಾಷ್ಯಕಾರರು ಗೀತೆಯ ೧೩-೫ ರಲ್ಲಿ ವಿವರಿಸಿರುತ್ತಾರೆ.

**'ಮಾಯಾರೂಪದರ್ಶನ'.** ಪಂಚೀಕೃತಜಗದ್ರೂಪದಿಂದ ಆತ್ಮನು ತೋರುವನೆಂಬುದು ಮಾಯಿಕವು, ಪರಮಾರ್ಥವಲ್ಲವೆಂದು ಭಾವ.

**'ಅಧ್ಯಾರೋಪ ಮತ್ತು ಅಪವಾದ ಇವುಗಳಿಂದ'.** ಪ್ರಪಂಚವು ನಿಜವಾಗಿ ಬ್ರಹ್ಮದಿಂದ ಉಂಟಾಗದೆ ಇದ್ದದ್ದು ಉಂಟಾಯಿತೆಂದು ಜನರ ಬುದ್ಧಿಯನ್ನನುಸರಿಸಿ ಹೇಳುವದು ಅಧ್ಯಾರೋಪವು ; ಪರಮಾರ್ಥವಾಗಿ ಸೃಷ್ಟಿಯು ಇಲ್ಲವೇ ಇಲ್ಲವೆಂದು ಹೇಳುವದು ಅಪವಾದವು. ಅಧ್ಯಾರೋಪ ವನ್ನೂ ಅಪವಾದವನ್ನೂ ತತ್ತ್ವಜ್ಞಾನಕ್ಕಾಗಿ ಉಪಯೋಗಿಸುವರು ; ಆದರೆ ಈ ಪ್ರಕರಣದಲ್ಲಿ ಸೃಷ್ಟಿಕ್ರಮವನ್ನು ಹೇಳಿರುವದು ಲಯಚಿಂತನೆಯಿಂದ ಸಮಾಧಿಯನ್ನು ಪಡೆಯುವ ಬಗೆಯನ್ನು ತಿಳಿಸುವದಕ್ಕೆ. **ಅಧ್ಯಾರೋಪಾಪ ವಾದಾಭ್ಯಾಂ ನಿಷ್ಪ್ರಪಞ್ಚಂ ಪ್ರಪಞ್ಚ್ಯತೇ** - ಈ ವಾಕ್ಯವನ್ನು ಸಂಪ್ರದಾಯ ವನ್ನು ಬಲ್ಲವರ ವಚನವೆಂದು **ಗೀತಾಭಾಷ್ಯ** (೧೩-೧೩) ದಲ್ಲಿ ಉದಾಹರಿ ಸಿದೆ. ಅದು ಜ್ಞಾನಪ್ರಕರಣದಲ್ಲಿದೆ.

೪. ಇಲ್ಲಿ **'ಓಂ'** ಎಂದು ಪ್ರಾರಂಭಮಾಡಿರುವದನ್ನು ನೋಡಿ ದರೆ ಪ್ರಕರಣವು ಇಲ್ಲಿಂದಲೇ ಮೊದಲು ಪ್ರಾರಂಭವಾಗಿತ್ತೆಂದೂ ಹಿಂದಿನ ಮೂರು ಖಂಡಗಳೂ ಗ್ರಂಥಕ್ಕೆ ಈಚೆಗೆ ಸೇರಿರುವದೆಂದೂ ಹೇಳಬೇಕಾಗು ತ್ತದೆ. ಈ ವಿಷಯದಲ್ಲಿ **ಒಂದನೆಯ ಪರಿಶಿಷ್ಟ**ವನ್ನು ನೋಡಿ.

**'ವಿರಾಜ'.** ಮಾಂಡೂಕ್ಯದಲ್ಲಿಯೂ ಬೇರೆ ಕಡೆಯಲ್ಲಿಯೂ ಸಮಸ್ತ ಸ್ಥೂಲಪ್ರಪಂಚಸಹಿತಚೈತನ್ಯವನ್ನೇ 'ವೈಶ್ವಾನರ' ಅಥವಾ 'ವಿರಾಟ್' ಎಂದು ಕರೆದಿರುತ್ತದೆಯಾದರೂ ಇಲ್ಲಿ ಭೂತಗಳು ಮತ್ತು ಅವುಗಳ ಕಾರ್ಯವನ್ನೇ

ವಿರಾಜನೆಂದು ಕರೆದಿರುವದೂ ವಿರಾಜನು ಆತ್ಮನ ಸ್ಥೂಲಶರೀರವೆಂದು ಹೇಳಿರುವದೂ ಈ ಪ್ರಕರಣದ ಒಂದು ವಿಶೇಷವಾಗಿರುತ್ತದೆ. ಉಪಾಧಿಯನ್ನು ವಿರಾಟ್ ಎಂದೂ ಆತ್ಮನನ್ನು ವಿಶ್ವನೆಂದೂ ಮತ್ತೆಲ್ಲಿಯೂ ಕರೆದದ್ದು ಕಂಡುಬಂದಿಲ್ಲ. ವಿಶ್ವನು ವ್ಯಷ್ಟಿ, ವಿರಾಜನು ಸಮಷ್ಟಿ- ಎಂದು ಕರೆದಿರುವದು ಕೆಲವು ಗ್ರಂಥಗಳಲ್ಲಿದೆ. ಇದರಂತೆ 'ಹಿರಣ್ಯಗರ್ಭ', 'ಅವ್ಯಾಕೃತ'- ಇವುಗಳನ್ನು ಈ ಗ್ರಂಥದಲ್ಲಿ ಶರೀರಗಳೆಂದೇ ವರ್ಣಿಸಿರುತ್ತದೆ. **ಒಂದನೆಯ ಪರಿಶಿಷ್ಟ**ವನ್ನು ನೋಡಿ. ಗೌಡಪಾದರ ಆಗಮಪ್ರಕರಣದಲ್ಲಿ ವೈಶ್ವಾನರನನ್ನು ವಿಶ್ವನೆಂದು ಕರೆದಿರುವಂತೆ ಇಲ್ಲಿಯೂ ಕರೆದಿದೆ

**ಅಕಾರವು.** ಮಾಂಡೂಕ್ಯದಲ್ಲಿ ವೈಶ್ವಾನರ ಅಥವಾ ವಿರಾಜನನ್ನೇ ಅಕಾರವೆಂದಿದೆಯಾದರೂ ಅದರಲ್ಲಿಯೂ ಅವಸ್ಥೆ, ಅದರಲ್ಲಿರುವ ವಿಷಯ, ಅಭಿಮಾನಿಯಾದ ಆತ್ಮ - ಈ ಮೂರೂ ಸೇರಿವೆ.

**೫. 'ಪಂಚೀಕರಣವಾಗದ ಐದು ಮಹಾಭೂತಗಳಿಂದ'.** ಇಲ್ಲಿ 'ಮಹಾಭೂತ'ಗಳೆಂದರೆ ತಮ್ಮ ಕಾರ್ಯಗಳಾದ ಭೂತಭೌತಿಕವಸ್ತುಗಳಲ್ಲಿ ವ್ಯಾಪಿಸಿರುವ ಸೂಕ್ಷ್ಮಭೂತಗಳೆಂದರ್ಥ ; ಹೀಗೆ ಭಾಷ್ಯಕಾರರು ಗೀತೆಯ ೧೩-೫ರಲ್ಲಿ ಅರ್ಥಮಾಡಿರುತ್ತಾರೆ.

**'ಎಚ್ಚರದ ಸಂಸ್ಕಾರದಿಂದಾದದ್ದಾಗಿಯೂ ವಿಷಯದಿಂದೊಡಗೂಡಿದ್ದಾಗಿಯೂ ಇರುವ ಪ್ರತ್ಯಯ'.** ಸ್ವಪ್ನವು ಎಚ್ಚರದ ವಾಸನೆಯಿಂದ ಆಗಿರುವದೆಂಬುದು ವ್ಯಾವಹಾರಿಕದೃಷ್ಟಿ ; ಅದು 'ಪ್ರತ್ಯಯ'ವೆಂಬುದೂ ಹಾಗೆಯೇ. ಏಕೆಂದರೆ ಎಚ್ಚರಕನಸುಗಳೆರಡೂ ಸ್ವತಂತ್ರಾವಸ್ಥೆಗಳಾಗಿವೆ ; ಇವೆರಡಕ್ಕೂ ಕಾರ್ಯಕಾರಣಭಾವವನ್ನು ಹೇಳುವದೂ ಸರಿಯಲ್ಲ. ಎಚ್ಚರದ ಮನಸ್ಸಿನ ಪ್ರತ್ಯಯವೇ ಕನಸೆಂಬುದೂ ಅನುಭವಕ್ಕೆ ಹೊಂದುವದಿಲ್ಲ ; ಏಕೆಂದರೆ ಕನಸಿನಲ್ಲಿ ಎಚ್ಚರದ ಮನಸ್ಸು ಇರುವದೆಂದರೆ ಎರಡವಸ್ಥೆಗಳೂ ಎಚ್ಚರವೆಂಬ ಒಂದೇ ಅವಸ್ಥೆಯಾಗಬೇಕಾಗುವದು. ಕನಸು, ಎಚ್ಚರ- ಈ ಎರಡೂ ಸ್ವತಂತ್ರಾವಸ್ಥೆಗಳೇ ಹೊರತು ಇವೆರಡಕ್ಕೆ ಕಾರ್ಯಕಾರಣಭಾವವಿಲ್ಲವೆಂಬ ಉತ್ತಮಸಿದ್ಧಾಂತವನ್ನು ಗೌಡಪಾದಕಾರಿಕೆಯ

**ಅಲಾತಶಾಂತಿಪ್ರಕರಣದಲ್ಲಿ ಮಾಡಿರುತ್ತದೆ.** ಕಾರಿಕೆಯಲ್ಲಿ ಸ್ವಪ್ನವನ್ನು 'ಪ್ರತ್ಯಯ'ವೆಂದು ಕರೆಯದಿದ್ದರೂ 'ವೃತ್ತಿ' ಎಂದು ಕರೆದಿದೆ.

**೬. 'ಎರಡು ಶರೀರಗಳಿಗೂ ಕಾರಣವಾದ ಆತ್ಮಾಜ್ಞಾನವು'.** ಆತ್ಮನನ್ನು ಅರಿಯದ್ದರಿಂದ ಆತ್ಮನಿಗೆ ಸ್ಥೂಲಸೂಕ್ಷ್ಮಗಳೆಂಬ ಎರಡು ಶರೀರಗಳಿರುವಂತೆ ತೋರುವದೆಂದು ಭಾವ.

**'ಆಭಾಸದೊಡನೆ ಕೂಡಿ'.** ಆತ್ಮನೇ ಅಜ್ಞಾನದಿಂದ ಜಗತ್ತಿಗೆ ಕಾರಣನಾಗಿರುವದರಿಂದಲೂ ಬರಿಯ ಆತ್ಮನಲ್ಲಿ ಕಾರಣತ್ವವು ನಿಜವಾಗಿಲ್ಲದ್ದರಿಂದಲೂ 'ಆತ್ಮಾಭಾಸದೊಡನೆ ಕೂಡಿದ ಅಜ್ಞಾನವು' ಜಗತ್ತಿಗೆ ಕಾರಣವೆಂದು ಹೇಳಿರುತ್ತದೆ.

**'ಕಾರಣಶರೀರವು'.** ಅಜ್ಞಾನವು ಕಾರಣಶರೀರವೆಂಬುದು ಪ್ರಸ್ಥಾನತ್ರಯದ ಭಾಷ್ಯದಲ್ಲಿ ಅಷ್ಟು ಪ್ರಚುರವಾಗಿಲ್ಲ ; ಈಶಾವಾಸ್ಯೋಪನಿಷದ್ಭಾಷ್ಯದಲ್ಲೊಂದರಲ್ಲಿ ಒಂದು ಕಡೆಯಲ್ಲಿ ಮಾತ್ರ ಕಾಣುತ್ತದೆ. ಅದು ಸತ್ತಲ್ಲ, ಅಸತ್ತಲ್ಲ - ಎಂದುಮುಂತಾಗಿ ವರ್ಣಿಸಿರುವದಂತೂ ಭಾಷ್ಯದಲ್ಲಿ ಎಲ್ಲಿಯೂ ಸಿಕ್ಕುವದಿಲ್ಲ. ಆದರೂ ಅಜ್ಞಾನಕಲ್ಪಿತವಾದ ಅವ್ಯಾಕೃತವು ಆತ್ಮನಿಗಿಂತ ಬೇರೆಯೆಂದಾಗಲಿ ಆತ್ಮನೇ ಎಂದಾಗಲಿ ಹೇಳುವದಕ್ಕೆ ಬರುವಹಾಗಿಲ್ಲವೆಂಬ ವಚನವು ಭಾಷ್ಯದಲ್ಲಿ ಸಿಕ್ಕುತ್ತದೆ. **ವಿವೇಕಚೂಡಾಮಣಿ**ಯೇ ಮುಂತಾದ ಕೆಲವು ಪ್ರಕರಣಗಳಲ್ಲಿ ಮಾತ್ರ ಇಲ್ಲಿರುವಂತೆ ವರ್ಣನೆಯು ಕಂಡು ಬರುತ್ತದೆ.

**'ಬುದ್ಧಿಯು ಕಾರಣರೂಪದಿಂದ ಉಳಿಯುವದು'.** ಬುದ್ಧಿಗೂ ಆತ್ಮನಿಗೂ ಇರುವ ಸಂಬಂಧವು ಮಿಥ್ಯೆಯೆಂದೂ ಇದು ಸುಷುಪ್ತಿಯಲ್ಲಿ ಕೂಡ ಬೀಜರೂಪದಿಂದ ಇರುವದೆಂದೂ ಸೂತ್ರಭಾಷ್ಯದಲ್ಲಿ ಹೇಳಿರುತ್ತದೆ. (ಬ್ರ. ಸೂ. ೨-೩-೩೦, ೩೧). ಈ ಸಂಬಂಧವು ಅಜ್ಞಾನಕಲ್ಪಿತವೆಂಬುದನ್ನು ಮರೆತು ಈಚಿನ ವೇದಾಂತಿಗಳು ಮೂಲಾವಿದ್ಯೆಯೆಂಬ ಒಂದಾನೊಂದು ಅನಿರ್ವಚನೀಯಶಕ್ತಿಯು ಆತ್ಮನನ್ನು ಆಶ್ರಯಿಸಿರುವದೆಂದೂ ಇದು

ಅಧ್ಯಾಸರೂಪವಾದ ಅವಿದ್ಯೆಗೆ ಕಾರಣವೆಂದೂ ಸುಷುಪ್ತಿಯಲ್ಲಿ ಇದು ನಿಜವಾಗಿಯೂ ಇರುವದೆಂದೂ ಹೇಳುತ್ತಿರುವರು. ಈ ಮತವನ್ನು **'ಶಂಕರಹೃದಯ'**ವೆಂಬ ಸಂಸ್ಕೃತಗ್ರಂಥದಲ್ಲಿ ವಿಸ್ತಾರವಾಗಿ ಖಂಡಿಸಿರುತ್ತದೆ. ಅವ್ಯಾಕೃತವೇ ಮೂಲಾವಿದ್ಯೆಯಾದ್ದರಿಂದ ಅವಿದ್ಯಾಕಲ್ಪಿತವಾಗಿ ಅದು ಸುಷುಪ್ತಿಯಲ್ಲಿರುತ್ತದೆ ಎಂದು ಬೇಕಾದರೆ ಹೇಳಬಹುದು. ಆದರೆ ಅಧ್ಯಾಸಕ್ಕೆ ಕಾರಣವೆಂದು ಅದನ್ನು ವರ್ಣಿಸುವದು ಯುಕ್ತವಲ್ಲ. ಈ ಪ್ರಕರಣದಲ್ಲಿ ಕೊಟ್ಟಿರುವ ಅಜ್ಞಾನದ ವರ್ಣನೆಯು ಮೂಲಾವಿದ್ಯಾವಾದಿಗಳಿಗೆ ಅನುಕೂಲವಾಗಿರುವಂತೆ ತೋರುತ್ತದೆ. ಒಂದನೆಯ ಪರಿಶಿಷ್ಟವನ್ನು ನೋಡಿ.

೭. **'ಅಕಾರವು ಉಕಾರದಲ್ಲಿ'** ಇತ್ಯಾದಿ. ಇಲ್ಲಿ ಅಕಾರವನ್ನು ಉಕಾರದಲ್ಲಿ ಲಯಮಾಡಬೇಕೆಂದಿಷ್ಟೇ ಹೇಳಿರುತ್ತದೆ. ಹೇಗೆ ಲಯಮಾಡಬೇಕೆಂಬುದನ್ನು ತಿಳಿಸಲಿಲ್ಲ. ಈ ವಿಷಯದಲ್ಲಿ ಗೌಡಪಾದಕಾರಿಕೆಯೂ ಅದರ ಭಾಷ್ಯವೂ ಸಹಾಯಕವಾಗುವವು.

**'ಅಹಮ್ಮಿನಲ್ಲಿಯೇ'.** ಮೂಲದಲ್ಲಿ 'ಅಹಮ್ಯೇವ' ಎಂದು ಇದೆ. ಇದು ಅಹಂಕಾರವನ್ನು ಹೇಳುವ ಮಾತು ; ಅಹಂಕಾರದಲ್ಲಿ ಓಂಕಾರವು ಲಯವಾಗುತ್ತದೆ ಎಂದರೆ ಅರ್ಥವಿಲ್ಲ. 'ಆತ್ಮನಾದ ನನ್ನಲ್ಲಿ' ಎಂಬರ್ಥವು ಬರಬೇಕಾದರೆ 'ಮಯ್ಯೇವ' ಎಂದಿರಬೇಕಾಗುವದು. ಮೂಲದಲ್ಲಿ ಈಗಿನ ಪಾಠವು ಹೇಗೆ ಬಂದಿತೋ ಇದಕ್ಕೆ ಅರ್ಥವನ್ನು ಹೇಗೆ ಹೇಳಬೇಕೋ ತಿಳಿಯದು. ೭-೫೧ನೆಯ ವಾರ್ತಿಕದ ಟಿಪ್ಪಣಿಯನ್ನು ನೋಡಿ.

**'ಅಜ್ಞಾನವಲ್ಲ, ಅದರ ಕಾರ್ಯವೂ ಅಲ್ಲ'.** ನಾನು ಅಜ್ಞಾನವೆಂದು ಯಾರೂ ಅಧ್ಯಾರೋಪಮಾಡಿಕೊಂಡಿರುವದಿಲ್ಲ. 'ನಾನು ಅಜ್ಞಾನಿಯು' ಎಂದು ತಿಳಿದಿರುವದುಂಟು ; ಆದ್ದರಿಂದ ನನಗೆ ಅಜ್ಞಾನದ ಸಂಬಂಧವಿಲ್ಲ- ಎಂದೇ ಇದಕ್ಕೆ ಅರ್ಥವು. ಆಯಾ ಶರೀರ ಆಯಾ ಅವಸ್ಥೆಯ ಭೋಗ- ಇವು ಅಜ್ಞಾನ ಮತ್ತು ಅದರ ಕಾರ್ಯ- ಇವೆರಡರಲ್ಲಿಯೇ ಅಡಕವಾಗಿರುವವು.

**'ಬ್ರಹ್ಮವೇ ನಾನು'.** ಇದರ ಮುಂದೆ ಮೂಲಪಾಠದಲ್ಲಿ ಏನೋ ಹೆಚ್ಚುಕಡಿಮೆಯಾಗಿದೆಯೆಂದು ತೋರುವದು ; ಈಗಿರುವಂತೆ ನೋಡಿದರೆ ಚಿಂತನೆಯೇ ಸಮಾಧಿಯು ಎಂಬರ್ಥವಾಗುತ್ತದೆ.

**'ಎಂದು ಅಭೇದದಿಂದಿರುವಿಕೆಯೇ ಸಮಾಧಿಯು'.** ನಾನು ಬ್ರಹ್ಮವೇ ಎಂದು ಚಿಂತಿಸುತ್ತಿರುವದು ಸಮಾಧಿಯಲ್ಲ. ''ಮೇಲೆ ಹೇಳಿದಂತೆ ಎಲ್ಲವನ್ನೂ ಆತ್ಮನಲ್ಲಿ ಲಯಮಾಡಿಕೊಂಡಿರುವಾಗ 'ನಾನು' ಎಂಬ ಆತ್ಮಾಕಾರವಾದ ವೃತ್ತಿಯು ಇದ್ದರೆ ಅದಕ್ಕೆ **ಸಂಪ್ರಜ್ಞಾತಸಮಾಧಿ**ಯೆಂದು ಹೆಸರು ; ಈ ವೃತ್ತಿಯೂ ಹೋಗಿ ಯಾವ ಅರಿವೂ ಇಲ್ಲದಂತೆ ಆದರೆ **ಅಸಂಪ್ರಜ್ಞಾತಸಮಾಧಿ**ಯೆಂದು ಹೆಸರು.'' (ಆ|| ಟೀ||). ಎರಡನೆಯದೇ ನಿಜವಾದ ಸಮಾಧಿಯಾದರೂ ಮೊದಲನೆಯದು ಅದಕ್ಕೆ ತೀರ ಹತ್ತಿರದ ಸಾಧನವಾದ್ದರಿಂದ ಅದನ್ನೂ ಉಪಚಾರಕ್ಕೆ 'ಸಮಾಧಿ' ಯೆಂದು ಕರೆಯುವರು.

ಸಮಾಧಿಗೂ ಸುಷುಪ್ತಿಗೂ ಇರುವ ಭೇದವನ್ನು ತಿಳಿಯಿಸುವದಕ್ಕಾಗಿ **ಆನಂದಗಿರಿಯ ಟಿಪ್ಪಣಿ**ಯಲ್ಲಿ ಹೀಗೆಂದು ಬರೆದಿದೆ : ''ಸುಷುಪ್ತಿಯಲ್ಲಿ ಕಾರಣರೂಪದಿಂದ ಚಿತ್ತವು ಇರುವದೆಂದು ಹಿಂದೆ ಹೇಳಿದೆ ; ಈ ಸಮಾಧಿಯಲ್ಲೋ ಎಂದರೆ, ಕಾರ್ಯಕಾರಣಗಳ ಸಂಬಂಧವೇ ಇಲ್ಲದ ವಸ್ತುರೂಪದಿಂದ ಅದು ಇರುವದೆಂದು ಅಭಿಪ್ರಾಯ. ಇದು ಅದರ ಒಂದು ಬಗೆಯ ವಾಸನೆಯಾದ್ದರಿಂದ ಇದನ್ನು ಸಾಧನದೊಳಗೆ ಸೇರಿಸಿರುತ್ತದೆ.'' ಈ ವ್ಯಾಖ್ಯಾನವು ಸರಿಯಲ್ಲ. ಏಕೆಂದರೆ ಸುಷುಪ್ತಿಯಲ್ಲಿ ಕಾರಣರೂಪದಿಂದ ಚಿತ್ತವು ಇರುವದೆಂದು ಈಗಿನ ವೇದಾಂತಿಗಳು ಅಂಗೀಕರಿಸಿರುವದು ಮತ್ತೆ ಎಚ್ಚರವಾಗುವ ಅವಕಾಶವಿರಬೇಕೆಂಬುದಕ್ಕೆ ; ಆದರೆ ಸಮಾಧಿಯಾದವರಿಗೂ ಎಚ್ಚರವಾಗುವದರಿಂದ ಈ ವಿಚಾರಸರಣಿಯನ್ನನುಸರಿಸಿದರೆ ಅಲ್ಲಿಯೂ ಇದೇ ಯುಕ್ತಿಯಿಂದ ಕಾರಣರೂಪವನ್ನು ಒಪ್ಪಬೇಕಾಗುವದು. ಇದಲ್ಲದೆ ಸಮಾಧಿಯಲ್ಲಿ ಚಿತ್ತದ ವಾಸನೆಯಿದೆ

ಯೆಂದಾದರೆ ಕಾರ್ಯಕಾರಣಗಳ ಸಂಬಂಧವಿಲ್ಲವೆನ್ನುವದೂ ತಪ್ಪಾಗುತ್ತದೆ. ಆದ್ದರಿಂದ ಸುಷುಪ್ತಿಯಲ್ಲಿ ದ್ವೈತವು ಸ್ವಾಭಾವಿಕವಾಗಿ ಲಯವಾಗುತ್ತದೆ, ಸಮಾಧಿಯಲ್ಲಿ ಪ್ರಯತ್ನಪೂರ್ವಕವಾಗಿ ಲಯವಾಗುತ್ತದೆ ; ಎಚ್ಚರದ ದೃಷ್ಟಿಯಿಂದ ನೋಡಿದರೆ ಸುಷುಪ್ತಿಯು ತಾಮಸ, ಸಮಾಧಿಯು ಸಾತ್ತ್ವಿಕ- ಎಂದು ಈ ಎರಡು ಅವಸ್ಥೆಗಳಿಗೂ ಭೇದವನ್ನು ಹೇಳಬೇಕು.

**'ಬ್ರಹ್ಮಾಹಮಸ್ಮಿ, ಪ್ರಜ್ಞಾನಮಾನನ್ದಂ ಬ್ರಹ್ಮ'. ಇವುಗಳಲ್ಲಿ** ಮೊದಲನೆಯದು **ಪರಮಹಂಸೋಪನಿಷತ್ತಿನಲ್ಲಿರುವ ವಚನ** ; ಎರಡನೆಯದು ಯಾವ ಉಪನಿಷತ್ತಿನಲ್ಲಿಯೂ ಇಲ್ಲ. ಈ ವಾಕ್ಯಗಳು 'ಅಹಂ ಬ್ರಹ್ಮಾಸ್ಮಿ', 'ಪ್ರಜ್ಞಾನಂ ಬ್ರಹ್ಮ'- ಎಂದು ಇರಬೇಕೆಂದೂ, ಕೈತಪ್ಪಿನಿಂದಲೋ ಮನಃಪೂರ್ವಕವಾಗಿಯೋ ಲೇಖಕರು ಮಾಡಿರುವ ಮಾರ್ಪಾಡುಗಳೆಂದೂ ತೋರುತ್ತದೆ. ಈ ವಿಷಯದಲ್ಲಿ **ಒಂದನೆಯ ಪರಿಶಿಷ್ಟ**ವನ್ನು ನೋಡಿ. ಕಾ॥ ಪಾಠದಲ್ಲಿ 'ಬ್ರಹ್ಮೈವಾಹಮಸ್ಮಿ, ಅಹಂ ಬ್ರಹ್ಮಾಸ್ಮೀತ್ಯಭೇದೇ- ನಾವಸ್ಥಾನಮ್' ಎಂದಿದೆ. ಆನಂದಗಿರಿಯ ವ್ಯಾಖ್ಯಾನವೂ ಇದಕ್ಕೆ ತಕ್ಕಂತೆ ಇದೆ. 'ತತ್ಪದಾರ್ಥಕ್ಕೆ ತ್ವಂಪದಾರ್ಥತ್ವವನ್ನು ಮೊದಲು ಹೇಳಿ ತ್ವಂ ಪದಾರ್ಥಕ್ಕೆ ತತ್ಪದಾರ್ಥತ್ವವನ್ನು ಈಗ ಹೇಳುತ್ತಾರೆ' ಎಂದು ಅಲ್ಲಿ ಬರೆದಿದೆ. ಬ್ರಹ್ಮವು ಆತ್ಮ, ಆತ್ಮನೇ ಬ್ರಹ್ಮ- ಎಂದು ತಿಳಿಯಿಸುವದಕ್ಕೆ ಎರಡು ಬಗೆಯ ವಾಕ್ಯಗಳು ಬಂದಿವೆ ಎಂದು ಆ ಟಿಪ್ಪಣಿಯ ಅಭಿಪ್ರಾಯ.

**'ಇವೇ ಮುಂತಾದ (ಶ್ರುತಿಗಳು) ಪ್ರಮಾಣವು'.** ಈ ಶ್ರುತಿಗಳಿಂದ ಬ್ರಹ್ಮಾತ್ಮೈಕ್ಯವು ಉಕ್ತವಾಗಿದೆ. ಇದು ಸಮಾಧಿಗೆ ಪ್ರಮಾಣವೆಂದರ್ಥವಲ್ಲ. ಈ ವಿಷಯದಲ್ಲಿ **ಒಂದನೆಯ ಪರಿಶಿಷ್ಟ**ವನ್ನು ನೋಡಿ.

**'ಹೀಗೆ ಪಂಚೀಕರಣವಾಯಿತು'.** ಈ ವಾಕ್ಯವು ಇಲ್ಲಿ ಹೇಗೆ ಬಂದಿತೋ ತಿಳಿಯದು ; ಆನಂದಗಿರಿಯಲ್ಲಿ ಇದಕ್ಕೆ ವ್ಯಾಖ್ಯಾನವಿಲ್ಲ. **ಒಂದನೆಯ ಪರಿಶಿಷ್ಟ**ವನ್ನು ನೋಡಿ.

-------

# ವಾರ್ತಿಕ

(ಮೊದಲನೆಯ ಸಂಖ್ಯೆಯು ಖಂಡವನ್ನೂ ಎರಡನೆಯದು ವಾರ್ತಿಕವನ್ನೂ ಸೂಚಿಸುವದು).

೧-೧. **'ತಿಳಿಯಿಸುತ್ತೇವೆ'.** ಇಲ್ಲಿ ಪಂಚೀಕರಣದರ್ಥವನ್ನು ವಿವರಿಸುತ್ತೇವೆಂಬ ಪ್ರತಿಜ್ಞೆಯಿಲ್ಲ.

**'ಯಾವಾಗಲೂ ಮುಕ್ತವಾಗಿಯೇ ಇರುವ'.** ಬ್ರಹ್ಮವು ನಿತ್ಯಮುಕ್ತವಾಗಿರುವದೆಂದು ಹೇಳಿದ್ದರಿಂದ ಜಗತ್ಸೃಷ್ಟಿಯೇ ಮುಂತಾದದ್ದಕ್ಕೆ ಅದು ಕಾರಣವೆಂದು ವರ್ಣಿಸಿರುವದೆಲ್ಲ ಅಧ್ಯಾರೋಪವೆಂದು ಸೂಚಿಸಿದಂತಾಯಿತು. 'ಇತ್ತು'- ಎಂದು ಭೂತಕಾಲವನ್ನು ಹೇಳಿರುವದು ಜಗತ್ತಿನ ಅಧ್ಯಾರೋಪವನ್ನು ತಿಳಿಯುವವರ ಸೌಕರ್ಯಕ್ಕಾಗಿಯೇ ಹೊರತು ನಿಜವಾಗಿ ಬ್ರಹ್ಮಕ್ಕೆ ಕಾಲದ ಸಂಬಂಧವಿದೆಯೆಂಬ ಅಭಿಪ್ರಾಯದಿಂದಲ್ಲ.

೨-೨. **'ಅದು ತನ್ನ ಮಾಯೆಯ ಸಂಬಂಧದಿಂದ'.** 'ತತ್ ಸ್ವಮಾಯಾಸಮಾವೇಶಾತ್' ಎಂಬ ಮೂಲದ ಕನ್ನಡವಿದು. ಪಂಚೀಕರಣದ ಮೂಲವನ್ನು ನೋಡಿದರೆ (ಖಂ. ೧) ಬ್ರಹ್ಮದಿಂದಲೇ ಅವ್ಯಕ್ತವು- ಅಥವಾ ಅವ್ಯಾಕೃತವು- ಉಂಟಾಯಿತು ಎಂದು ಸ್ಪಷ್ಟವಾಗಿ ಹೇಳಿರುವದು ಕಾಣುತ್ತದೆ. 'ತಸ್ಯ ಮಾಯಾಸಮಾವೇಶಾತ್' ಎಂದಿದ್ದರೆ ಇದೇ ಅಭಿಪ್ರಾಯವು ಹೊರಡಬಹುದು ; ಮುಂದೆ ನಲವತ್ತನೆಯ ವಾರ್ತಿಕವೂ ಇದಕ್ಕೆ ಅನುಗುಣವಾಗಿದೆ. ಆದರೆ ಪಾಠವು ಹೀಗಿಲ್ಲ. 'ತನ್ನ ಮಾಯೆಯೆಂದರೆ ತನ್ನ ಶಕ್ತಿಯಾಗಿರುವ ಮತ್ತು ತನ್ನಲ್ಲಿಯೇ ಅಧ್ಯಸ್ತವಾಗಿರುವ ಮಾಯೆ- ಎಂದರ್ಥವೆಂದು ಟೀಕಾಕಾರನು ಬರೆದಿರುತ್ತಾನೆ.

೨-೩. **'ಶಬ್ದತನ್ಮಾತ್ರೆಯ'.** ''ಶಬ್ದತನ್ಮಾತ್ರೆಯಲ್ಲಿ ಶಬ್ದವೆಂಬ ಒಂದು ಸ್ವಭಾವವಿರುವದೇ ಹೊರತು ಶಾಂತ, ಘೋರ, ಮೂಢಗಳೆಂಬ ಗುಣವಿಶೇಷಗಳಿರುವದಿಲ್ಲವಾದ್ದರಿಂದ ಅದನ್ನು 'ತನ್ಮಾತ್ರೆ' (ಅಷ್ಟು ಮಾತ್ರವೇ) ಎಂದು ಕರೆದಿದೆ. ಹೀಗೆಯೇ ಮಿಕ್ಕ ತನ್ಮಾತ್ರೆಗಳನ್ನೂ ಅರಿಯಬೇಕು.'' (ಟೀ.)

೨-೪. ಈ ವಾರ್ತಿಕದಿಂದ ಆರನೆಯ ವಾರ್ತಿಕದವರೆಗೆ ತನ್ಮಾತ್ರೆಗಳಲ್ಲಿರುವ ಗುಣಗಳನ್ನು ಹೇಳಿದೆ. ಆಕಾಶ, ವಾಯು, ತೇಜಸ್ಸು, ಅಪ್ಪು, ಪೃಥ್ವಿ- ಇವುಗಳಲ್ಲಿ ಹಿಂದುಹಿಂದಿನ ತನ್ಮಾತ್ರೆಗಳ ಗುಣಗಳೆಲ್ಲ ಮುಂದು ಮುಂದಿನ ತನ್ಮಾತ್ರೆಯಲ್ಲಿರುತ್ತವೆ ; ಆದರದರ ವಿಶೇಷಗುಣವೂ ಸೇರಿರುತ್ತದೆ - ಎಂಬುದು ಈ ಭಾಗದ ಒಟ್ಟರ್ಥ.

೨-೬. **'ಸರ್ವಾತ್ಮಕವಾದ ಲಿಂಗವೂ ಆದ ಮಹತ್ತು.'** ಭೂತ ತನ್ಮಾತ್ರೆಗಳಿಂದ ಮಹತ್ತುಂಟಾಯಿತೆಂದು ಹೇಳಿರುವದು ಮನಸ್ಸು, ಪ್ರಾಣ, ವಾಗಾದೀಂದ್ರಿಯಗಳು- ಇವುಗಳೆಲ್ಲ ಭೌತಿಕವೇ ಎಂದು ಹೇಳುವ ಛಾಂದೋಗ್ಯಶ್ರುತಿಗೆ (೬-೫-೪) ಅನುಸಾರವಾಗಿದೆ. ಮೂಲದಲ್ಲಿ ಅವ್ಯಕ್ತದಿಂದ ಮಹತ್ತುಂಟಾಗುವದೆಂದು ಹೇಳಿರುವದು ಸಾಂಖ್ಯಕ್ಕೆ ಸರಿಯಾಗುವದು ; **'ತತ್ತ್ವಸಮಾಸ'ದ ಎರಡನೆಯ ಸೂತ್ರದ ವಿವರಣೆ**ಯನ್ನು ನೋಡಿ. ಲಿಂಗಶರೀರವನ್ನು ಮುಂದೆ ಐದನೆಯ ಖಂಡದಲ್ಲಿ ವಾರ್ತಿಕಕಾರರು ವಿವರಿಸಿರುತ್ತಾರೆ. ಪಂಚೀಕರಣಮೂಲಕ್ಕೂ ವಾರ್ತಿಕಕ್ಕೂ ಈ ವಿಷಯದಲ್ಲಿ ಏತಕ್ಕೆ ಹೆಚ್ಚು ಕಡಿಮೆಯಿರುವದೋ ತಿಳಿಯದು. **ಒಂದನೆಯ ಪರಿಶಿಷ್ಟ**ವನ್ನು ನೋಡಿ.

೪-೧೧. **'ವಿರಾಜನು'** ಇದನ್ನು ಕೇವಲ ಉಪಾಧಿಯೆಂದೇ ವರ್ಣಿಸಿರುವದು ಪಂಚೀಕರಣ ಮತ್ತು ಈ ವಾರ್ತಿಕದಲ್ಲಿ ಮಾತ್ರ ; ಮಿಕ್ಕ ಕಡೆಯಲ್ಲಿ ಸಮಷ್ಟಿಶರೀರದ ಅಭಿಮಾನಿಯನ್ನೇ **ವಿರಾಜ**ನೆಂದಿರುತ್ತದೆ. ಉದಾಹರಣೆಗೆ ಮಾಂಡೂಕ್ಯಭಾಷ್ಯವನ್ನು ನೋಡಿ.

೪-೧೩. ಈ ಕಾರಿಕೆಯಲ್ಲಿರುವ ಮಾತುಗಳ ಸ್ವಾರಸ್ಯವನ್ನು ಟೀಕಾಕಾರನು ಹೀಗೆ ತಿಳಿಸಿರುತ್ತಾನೆ : ''ಇಲ್ಲಿ ಜ್ಞಾನವೆಂಬ ಮಾತು **ಎರಡು** ಸಲ ಬಂದಿರುತ್ತದೆಯಷ್ಟೆ ? ಇಂದ್ರಿಯದಿಂದಾಗುವ ಜ್ಞಾನವೂ ಶಾಸ್ತ್ರಾನುಮಾನಾದಿಗಳಿಂದಾಗುವ ಜ್ಞಾನವೂ ಜಾಗರಿತಾವಸ್ಥೆಯಲ್ಲಿ ಆಗುವವೆಂಬುದನ್ನು ಈ ಎರಡು ಮಾತುಗಳು ಸೂಚಿಸುವವು. ಇಲ್ಲಿ ಬರಿಯ ಜ್ಞಾನವಿರುವದಲ್ಲದೆ ವಿಷಯದ ಜ್ಞಾನವೂ ಇರುವದರಿಂದ ತುರೀಯಕ್ಕೂ ಎಚ್ಚರಕ್ಕೂ ಭೇದವಿರುವದೆಂದು ತಿಳಿಯಿಸುವದಕ್ಕೆ 'ಅರ್ಥವಿಜ್ಞಾನಂ'

ಎಂದು ಹೇಳಿದೆ ; ಸುಷುಪ್ತಿಯಲ್ಲಿ ಅಜ್ಞಾನವು ವಿಷಯವಾಗಿರುವದರಿಂದ ಇಲ್ಲಿ ಶಬ್ದಾದಿಗಳೇ ವಿಷಯಗಳೆಂಬ ತಾರತಮ್ಯವನ್ನು ತಿಳಿಯಿಸುವದಕ್ಕಾಗಿ 'ಶಬ್ದಾದಿವಿಷಯಂ ಜ್ಞಾನಮ್' ಎಂಬ ಮಾತುಗಳು ಬಂದಿವೆ.'' ಈ ವ್ಯಾಖ್ಯಾನದಲ್ಲಿ ಎರಡು ದೋಷಗಳಿವೆ. ಹೇಗೆಂದರೆ : ತುರೀಯವೆಂಬುದು ಆತ್ಮನ ಹೆಸರೇ ಹೊರತು ಅವಸ್ಥೆಯ ಹೆಸರಲ್ಲವಾದ್ದರಿಂದ ತುರೀಯನಿಗೂ ಎಚ್ಚರಕ್ಕೂ ವೈಲಕ್ಷಣ್ಯವನ್ನು ಹೇಳಬೇಕಾದದ್ದಿಲ್ಲ. ಸುಷುಪ್ತಿಯಲ್ಲಿ ಯಾವ ಜ್ಞಾನವೂ ಇರುವದಿಲ್ಲವೆಂಬರ್ಥದಲ್ಲಿ ಅಜ್ಞಾನವಿರುವದಾದರೂ ಅದನ್ನು ವಿಷಯೀಕರಿಸಿ ಅಲ್ಲಿ ಜ್ಞಾನವಾಗುವದೇ ಇಲ್ಲವಾದ್ದರಿಂದ 'ಅರ್ಥ'ವೆಂಬ ಮಾತಿಗೆ ಸ್ವಾರಸ್ಯವನ್ನು ಕಲ್ಪಿಸಿದ್ದೂ ಸರಿಯಲ್ಲ.

೪-೧೪. ಎಚ್ಚರವನ್ನು ವಿವರಿಸುವದಕ್ಕಾಗಿ ಇಂದ್ರಿಯವು ಅಧ್ಯಾತ್ಮ, ಅದರ ವಿಷಯವು ಅಧಿಭೂತ, ಇಂದ್ರಿಯವು ತನ್ನ ವಿಷಯವನ್ನು ಅರಿಯುವದಕ್ಕೆ ಸಹಾಯವಾದ ದೇವತೆಯು ಅಧಿದೈವ- ಹೀಗೆ ಮೂರು ವಿಭಾಗಗಳಾಗಿ ವಿಂಗಡಿಸಿರುತ್ತದೆ. ಇವೆಲ್ಲ ಸ್ಥೂಲಶರೀರದಲ್ಲಿ ಸೇರಿವೆ ಯೆಂದು ಭಾವ. ಇಲ್ಲಿ ಹೇಳಿರುವ ಅಧ್ಯಾತ್ಮಾದಿವಿಭಾಗಗಳನ್ನು **ತ್ರಿಪುಟಿ** ಗಳೆಂದು ಕರೆಯುವುದುಂಟು. ಇಲ್ಲಿ ಹೇಳಿರುವ ಹದಿನೈದು ತ್ರಿಪುಟಿಗಳಿಗೂ ಮಿಕ್ಕ ಗ್ರಂಥಗಳಲ್ಲಿ ಕೊಟ್ಟಿರುವ ತ್ರಿಪುಟಿಗಳಿಗೂ ಇರುವ ಹೆಚ್ಚು ಕಡಿಮೆಗಳನ್ನು **ಎರಡನೆಯ ಪರಿಶಿಷ್ಟ**ದಲ್ಲಿ ಕೊಟ್ಟಿರುತ್ತದೆ.

೪-೩೧. ಇಲ್ಲಿ ವಿಶ್ವವಿರಾಜರ ಐಕ್ಯವನ್ನು ಹೇಳಿರುವದರಿಂದ ವಿರಾಜನೆಂದರೆ ಆತ್ಮನೆಂದು ಇಟ್ಟುಕೊಂಡಂತೆ ಆಯಿತು ; ಆದರೆ ೧೧ನೆಯ ವಾರ್ತಿಕದಲ್ಲಿ ಸಮಷ್ಟಿ **ಸ್ಥೂಲಪ್ರಪಂಚಕ್ಕೆ** ಮಾತ್ರ ಈ ಹೆಸರನ್ನು ಕೊಟ್ಟಿರು ತ್ತದೆ.

೫-೩೨. ಇಂದ್ರಿಯಗಳಿಂದ ವಿಷಯಗಳನ್ನು ಅರಿಯುವದು ಎಚ್ಚರವೆಂದು ವಿವರಿಸುವ ನಿಮಿತ್ತದಿಂದ ಇಂದ್ರಿಯಗಳನ್ನೆಲ್ಲ ಹಿಂದೆಯೇ ವರ್ಣಿಸಿದೆ. ಇಲ್ಲಿ ಸೂಕ್ಷ್ಮಶರೀರವನ್ನು ವಿವರಿಸುವದಕ್ಕೆ ಅವುಗಳನ್ನು ಮತ್ತೆ ವಿಂಗಡಿಸಿದೆ. ಕಿವಿ, ಕಣ್ಣು- ಮುಂತಾದವು ಇಂದ್ರಿಯಗಳ ಗೋಲಕಗಳು ಅಥವಾ ಸ್ಥಾನಗಳು ; ಅವು ಸ್ಥೂಲಶರೀರಕ್ಕೆ ಸಂಬಂಧಪಟ್ಟಿರುವವು.

ಶ್ರೋತ್ರ, ಚಕ್ಷುಸ್ಸು- ಮುಂತಾದ ನಿಜವಾದ ಇಂದ್ರಿಯಗಳು ಸೂಕ್ಷ್ಮ ಶರೀರಕ್ಕೆ ಸಂಬಂಧಪಟ್ಟಿರುವವು.

೫-೩೩, ೩೪. ಪಂಚೀಕರಣದಲ್ಲಿ ಅಂತಃಕರಣವನ್ನು ಮನಸ್ಸು, ಬುದ್ಧಿ- ಎಂದು ಎರಡೇ ಭಾಗವಾಗಿ ವಿಂಗಡಿಸಿದೆ ; ವಾರ್ತಿಕದಲ್ಲಿ ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ- ಎಂದು ನಾಲ್ಕು ಭಾಗಗಳಾಗಿ ಮಾಡಿರುತ್ತದೆ. ಎರಡೇ ಭಾಗವಾಗಿ ಮಾಡುವಾಗ ಬುದ್ಧಿಯಲ್ಲಿಯೇ ಮಿಕ್ಕೆರಡನ್ನೂ ಅಡಕಮಾಡಿಕೊಳ್ಳಬೇಕು.

೫-೩೫. ಇಲ್ಲಿ ಹೇಳಿರುವ ಸೂಕ್ಷ್ಮಶರೀರದ ವರ್ಣನೆಗೂ ಪಂಚೀಕರಣದಲ್ಲಿ ಕೊಟ್ಟಿರುವ ವರ್ಣನೆಗೂ ಹೆಚ್ಚುಕಡಿಮೆಯಿದೆ. ಅಲ್ಲಿ ಐದು ಪ್ರಾಣಗಳು, ಹತ್ತು ಇಂದ್ರಿಯಗಳು, ಮನಸ್ಸು, ಬುದ್ಧಿ- ಎಂಬ ಹದಿನೇಳು ಸೇರಿ ಸೂಕ್ಷ್ಮ ಶರೀರವಾಗಿದೆಯೆಂದು ಹೇಳಿದೆ ; ಇಲ್ಲಿ (೧) ಜ್ಞಾನೇಂದ್ರಿಯ ಪಂಚಕ, (೨) ಕರ್ಮೇಂದ್ರಿಯಪಂಚಕ, (೩) ಪ್ರಾಣಾದಿಪಂಚಕ, (೪) ಭೂತಪಂಚಕ, (೫) ಅಂತಃಕರಣಚತುಷ್ಟಯ, (೬) ಅವಿದ್ಯೆ, (೭) ಕಾಮ, (೮) ಕರ್ಮ- ಎಂಬ **ಎಂಟುಪುರಿ**ಗಳಿಂದಾಗಿರುವದು ಸೂಕ್ಷ್ಮ ಶರೀರವೆಂದು ಹೇಳಿದೆ.

**ಬೃಹದಾರಣ್ಯಕವಾರ್ತಿಕ** (೧-೩-೨೫೮) ದಲ್ಲಿ-

**''ಬುದ್ಧೀನ್ದ್ರಿಯಾಣಿ ಪಞ್ಚೈವ ತಥಾ ಕರ್ಮೇನ್ದ್ರಿಯಾಣ್ಯಪಿ ।**

**ವಾಯವಃ ಪಞ್ಚ ಬುದ್ಧಿಶ್ಚ ಮನಃ ಸಪ್ತದಶಂ ವಿದುಃ ॥''**

ಎಂದು ಪಂಚೀಕರಣದಂತೆಯೇ ಹದಿನೇಳವಯವಗಳನ್ನು ಲಿಂಗ ಶರೀರಕ್ಕೆ ಹೇಳಿದೆ.

ಇಲ್ಲಿ ಪುರ್ಯಷ್ಟಕದಲ್ಲಿ ಸೇರಿರುವ **ಅವಿದ್ಯೆ**ಗೂ ೪-೨೮ರಲ್ಲಿ ಹೇಳಿರುವ ತಮಸ್ಸಿಗೂ ಏನು ಹೆಚ್ಚುಕಡಿಮೆಯೋ, ಅಲ್ಲಿ ತಮಸ್ಸನ್ನು ಸ್ಥೂಲಶರೀರದೊಳಗೆ ಸೇರಿಸಿ ಇಲ್ಲಿ ಅವಿದ್ಯೆಯನ್ನು ಸೂಕ್ಷ್ಮಶರೀರದಲ್ಲೇಕೆ ಸೇರಿಸಿರುವರೋ ತಿಳಿಯದು. ಎರಡು ಮಾತುಗಳಿಗೂ ಅಜ್ಞಾನವೆಂದೇ ಅರ್ಥವಾಗುತ್ತದೆ. ಮುಂದೆ ೩೯ನೆಯ ವಾರ್ತಿಕದಲ್ಲಿ **'ಆತ್ಮಾಜ್ಞಾನ'**ವೆಂಬ

ಪದವೊಂದಿದೆ. ಅದರ ಟಿಪ್ಪಣಿಯನ್ನು ನೋಡಿ.

೫-೩೬. 'ಅನುಸಂಧಾನ'ವೆಂಬುದರಲ್ಲಿ ಲಕ್ಷ್ಯವಿಟ್ಟು ಅರಿಯುವದು, ನೆನಪಿಗೆ ತಂದುಕೊಳ್ಳುವದು- ಈ ಎರಡೂ ಸೇರಿವೆ.

೫-೩೭. **'ಮಾಯಿಕವಾದ ಸೂಕ್ಷ್ಮಶರೀರ'.** ಆತ್ಮನಿಗೆ ನಿಜವಾಗಿ ಶರೀರವಿಲ್ಲವೆಂಬುದನ್ನು ಮಾಯಿಕವೆಂಬ ಮಾತು ಸೂಚಿಸುವದು.

ಈ ಲಕ್ಷಣವಾಕ್ಯದಲ್ಲಿ ಸ್ಫುರಣವೆಂದರೆ ತೋರುವಿಕೆ ; ಇದನ್ನು ಮನಸ್ಸಿಗೆ ತಂದುಕೊಳ್ಳದೆ ಚೈತನ್ಯವೆಂಬ ಅರ್ಥವನ್ನು ಮಾಡಿಕೊಂಡು ಟೀಕಾಕಾರನು ಇಲ್ಲದ ಕಷ್ಟವನ್ನು ಮೈಮೇಲೆ ಹಾಕಿಕೊಂಡಿರುತ್ತಾನೆ. 'ಪ್ರಬೋಧವತ್' ಎಂದರೆ 'ಎಚ್ಚರದಂತೆ' ಎಂದರ್ಥ ; ಇದಕ್ಕೆ 'ಎಚ್ಚರದಿಂದ ಕೂಡಿದ' ಎಂಬ ತಪ್ಪರ್ಥವನ್ನು ಮಾಡಿರುತ್ತಾನೆ. ''ಕರಣಗಳು ಸುಮ್ಮನಾಗಲಾಗಿ ಎಚ್ಚರದನುಭವದ ಸಂಸ್ಕಾರದಿಂದುಂಟಾದ ಅಂತಃಕರಣದ ವೃತ್ತಿಯೆಂಬ ಎಚ್ಚರದಿಂದ ಕೂಡಿದ ಗ್ರಾಹ್ಯಗ್ರಾಹಕರೂಪವಾಗಿ ತೋರುವ ಚೈತನ್ಯಕ್ಕೆ ವಿಷಯವಾದ ರಥಗಜಾದಿಗಳೂ ಅವುಗಳನ್ನು ವಿಷಯೀಕರಿಸುವ ಅಂತಃಕರಣವೃತ್ತಿಯೂ ಸೇರಿ ಸ್ವಪ್ನವೆನಿಸುವದು'' ಎಂದು ಟೀಕಾಕಾರನ ಅರ್ಥ. ಇದನ್ನು ನಾವು ಕೊಟ್ಟಿರುವ ಅರ್ಥಕ್ಕೆ ಹೋಲಿಸಿದರೆ ನಮ್ಮರ್ಥವು ಎಷ್ಟು ಸರಳವಾಗಿ ಮೂಲಾನುಸಾರವಾಗಿರುವದೆಂಬುದು ತಿಳಿಯಬರುವದು.

**'ಎಚ್ಚರದ ಸಂಸ್ಕಾರದಿಂದುಂಟಾಗಿ'.** ಕನಸು ಎಚ್ಚರದ ಸಂಸ್ಕಾರದಿಂದ, ಅಂದರೆ ವಾಸನೆಯಿಂದ, ಆಗಿರುವದೆಂದು ಹೇಳುವದು ಎಚ್ಚರದ ದೃಷ್ಟಿಯಿಂದ ; ಅವಸ್ಥೆಗಳೆರಡಕ್ಕೂ ನಿಜವಾಗಿ ಕಾರ್ಯಕಾರಣಭಾವವನ್ನು ಒಪ್ಪುವದಕ್ಕಾಗುವದಿಲ್ಲ.

೫-೩೮. **'ಇವೆರಡಕ್ಕೂ'-** ಸೂಕ್ಷ್ಮಶರೀರಕ್ಕೂ ಸ್ವಪ್ನಕ್ಕೂ. ವಿಶ್ವನು ಸ್ಥೂಲಶರೀರವನ್ನೂ ಎಚ್ಚರವನ್ನೂ ತನ್ನದೆಂದು ಅಭಿಮಾನಪಡುವಂತೆ ತೈಜಸನು ಸೂಕ್ಷ್ಮಶರೀರಸ್ವಪ್ನಗಳನ್ನು ತನ್ನದೆಂದು ತಿಳಿಯುತ್ತಾನೆ.

ಇಲ್ಲಿ ತೈಜಸಹಿರಣ್ಯಗರ್ಭರ ಐಕ್ಯವನ್ನು ಹೇಳಿರುವದರಿಂದ ಹಿರಣ್ಯಗರ್ಭನೆಂದರೆ ಆತ್ಮನೆಂದಂತೆ ಆಯಿತು. ಆದರೆ ಪಂಚೀಕರಣದ ೫ನೆಯ

ಖಂಡದಲ್ಲಿ ಹಿರಣ್ಯಗರ್ಭನೆಂದರೆ ಸೂಕ್ಷ್ಮಶರೀರವೆಂದೇ ಹೇಳಿದೆ ; ಹಾಗೆ ಮತ್ತೆ ಯಾವ ಗ್ರಂಥದಲ್ಲಿಯೂ ಹೇಳಿರುವದು ಕಂಡುಬರುವದಿಲ್ಲ.

೬-೩೯, ೪೦. ಇಲ್ಲಿ ಆತ್ಮಾಜ್ಞಾನವನ್ನು ವರ್ಣಿಸಿರುವ ಹಾಗೆ ವಾರ್ತಿಕಕಾರರು ಮತ್ತೆಲ್ಲಿಯಾದರೂ ವರ್ಣಿಸಿದ್ದಾರೋ ಇಲ್ಲವೋ ತಿಳಿಯದು. ನೈಷ್ಕರ್ಮ್ಯಸಿದ್ಧಿಯಲ್ಲಿಯೂ ವಾರ್ತಿಕಗಳಲ್ಲಿಯೂ ಅಜ್ಞಾನವು ಅವಿಚಾರಸಿದ್ಧವೆಂದೂ ಅವರು ಬರೆದಿದ್ದಾರೆ.

ಇಲ್ಲಿ 'ನ ಚೋಭಯಮ್' (ಸತ್ತು, ಅಸತ್ತು- ಈ ಎರಡೂ ಸೇರಿದ್ದು ಅಲ್ಲ) ಎಂಬ ಮಾತಿಗೆ ಬದಲು 'ನ ಚಾತ್ಮನಃ' ಎಂಬ ಕಾ|| ಪಾಠವೂ ಉಂಟು. ಆತ್ಮನಿಗಿಂತ ಇದು ಭಿನ್ನವೂ ಅಲ್ಲ, ಅಭಿನ್ನವೂ ಅಲ್ಲ- ಎಂದು ಆ ಪಾಠಕ್ಕೆ ಅರ್ಥ.

೬-೪೧. **'ಮಿಥ್ಯೆಯಾಗಿರುವದರಿಂದ'.** ಈ ಮಾತು ಬಹಳ ಮುಖ್ಯವಾದದ್ದು. ಏಕೆಂದರೆ ಸುಷುಪ್ತಿಯಲ್ಲಿ ಕಾರಣರೂಪದಿಂದಲೂ ಜಾಗ್ರತ್ಸ್ವಪ್ನಗಳಲ್ಲಿ ಕಾರ್ಯರೂಪದಿಂದಲೂ ಅಜ್ಞಾನವು ಇರುವದೆಂಬುದು ಕಲ್ಪಿತದೃಷ್ಟಿ ಎಂಬ ಉತ್ತಮಸಿದ್ಧಾಂತವು ಇದರಿಂದ ಹೊರಡುತ್ತದೆ. **ಆದ್ದರಿಂದ ಸರಿಯಾಗಿ ನೋಡಿದರೆ ಸುಷುಪ್ತಿಯಲ್ಲಿ ಕಾರಣಾಜ್ಞಾನವು ಇಲ್ಲವೇ ಇಲ್ಲವೆಂದು ನಿರ್ಣಯಿಸಬೇಕಾಗುವದು.**

೬-೪೨. ಬುದ್ಧಿಯು ಕಾರಣರೂಪದಿಂದ ಇರುವದೆಂದು ಇಲ್ಲಿ ಹೇಳಿರುವಂತೆ ಆತ್ಮನಿಗೂ ಬುದ್ಧಿಗೂ ಇರುವ ಸಂಬಂಧವು ಮಿಥ್ಯಾಜ್ಞಾನಕಲ್ಪಿತವಾಗಿರುವದೆಂದೂ ಅದು ಸುಷುಪ್ತಿಯಲ್ಲಿ ಕೂಡ ಅವಿದ್ಯಾಕಲ್ಪಿತವಾಗಿ ಇದ್ದೇ ಇರುವದೆಂದೂ ಸೂತ್ರಭಾಷ್ಯದಲ್ಲಿಯೂ ಹೇಳಿರುತ್ತದೆ. (೨-೩-೩೦, ೩೧) ನಿದ್ರೆಯಲ್ಲಿರುವ ಈ ಸಂಬಂಧವು ಅವಿದ್ಯಾಕಲ್ಪಿತವೆಂದದ್ದರಿಂದ ನಿಜವಾಗಿ ಸುಷುಪ್ತಿಯಲ್ಲಿ ಯಾವ ಬೀಜವೂ ಇಲ್ಲವೆಂಬುದು ಭಾಷ್ಯಕಾರರ ಅಭಿಪ್ರಾಯವೆಂದಾಯಿತು. ಇದನ್ನರಿಯದೆ ಸುಷುಪ್ತಿಯಲ್ಲಿ ಮೂಲಾವಿದ್ಯೆಯೆಂಬ ಒಂದಾನೊಂದು ಬೀಜರೂಪವಾದ ಅವಿದ್ಯೆಯು ಇರುವದೆಂದು ಈಚಿನ ವೇದಾಂತಿಗಳು ಭಾಷ್ಯಕಾರರ ಅಭಿಪ್ರಾಯವನ್ನು ತರ್ಕಿಸುತ್ತಿದ್ದಾರೆ. ಆದರೆ ಸುಷುಪ್ತಿಯಲ್ಲಿ ಯಾವ

ಅವಿದ್ಯೆಯೂ ಇಲ್ಲವೇ ಇಲ್ಲವೆಂಬ ಬಾಷ್ಯವಾರ್ತಿಕವಚನಗಳಿಗೆ ಇದು ವಿರುದ್ಧವಾಗಿರುತ್ತದೆ. (ಬೃ. ಭಾ. ೪-೩-೨೧, ಬೃ. ಭಾ. ವಾ. ೪-೩-೧೧೦೩, ೧೨೦೫- ಇವುಗಳನ್ನು ನೋಡಿ.)

ಇಲ್ಲಿ ಹೇಳಿರುವ ಅಜ್ಞಾನವು ಮೂಲಾವಿದ್ಯೆಯೆಂದೂ ಸ್ವಪ್ನದ ವರ್ಣನೆಯಲ್ಲಿ ಹೇಳಿರುವದು ವಾಸನಾವಿದ್ಯೆಯೆಂದೂ ಜಾಗ್ರತ್ತಿನಲ್ಲಿ ವರ್ಣಿಸಿರುವದು ಮಿಥ್ಯಾಜ್ಞಾನವೆಂದೂ **ಟೀಕಾಕಾರನು** ಹೇಳುತ್ತಾನೆ. ಜಾಗ್ರತ್ ದೃಷ್ಟಿಯಿಂದ ನೋಡಿದರೆ ಸುಷುಪ್ತಿಯಲ್ಲಿ ವೃತ್ತಿಜ್ಞಾನಾಭಾವರೂಪವಾದ ಅವಿದ್ಯೆಯಿರುವದರಿಂದ ಅದನ್ನೇ ಮೂಲಾವಿದ್ಯೆಯೆಂದು ಕರೆಯುವದಾದರೆ ಈ ಅಭಿಪ್ರಾಯವನ್ನು ಒಪ್ಪಬಹುದಾಗಿದೆ ; ಈ ವಿಭಾಗವೆಲ್ಲ ವ್ಯಾವಹಾರಿಕವೆಂಬುದನ್ನು ಮಾತ್ರ ಮರೆಯದೆ ಇರಬೇಕು.

೬-೪೩. **'ಇವೆರಡಕ್ಕೂ'.** ಸುಷುಪ್ತಿಗೂ ಕಾರಣರೂಪದಲ್ಲಿರುವ ಬುದ್ಧಿಗೂ. ಪ್ರಾಜ್ಞನು ಇವೆರಡನ್ನೂ ತನ್ನದೆಂದು ಸುಷುಪ್ತಿಯಲ್ಲಿ ಅಭಿಮಾನಪಡುತ್ತಾನೆಂದರ್ಥವಲ್ಲ, ಎಚ್ಚತ್ತಮೇಲೆ ಇವೆರಡೂ ಸುಷುಪ್ತಿಯಲ್ಲಿದ್ದಂತೆ ಅಜ್ಞರಿಗೆ ತೋರುವದೆಂದಭಿಪ್ರಾಯ.

ಇಲ್ಲಿ ಪ್ರಾಜ್ಞನನ್ನು ಜಗತ್ಕಾರಣರೂಪದಿಂದ ಚಿಂತಿಸಬೇಕೆಂದೂ ೩೧ನೆಯ ವಾರ್ತಿಕದಲ್ಲಿ ವಿಶ್ವನನ್ನು ವೈರಾಜರೂಪದಿಂದ ಚಿಂತಿಸಬೇಕೆಂದೂ, ೩೮ರಲ್ಲಿ ತೈಜಸನನ್ನು ಹಿರಣ್ಯಗರ್ಭರೂಪದಿಂದ ಚಿಂತಿಸಬೇಕೆಂದೂ ಹೇಳಿದೆಯಷ್ಟೆ. ನಮ್ಮೊಳಗಿನ ಆತ್ಮನೇ ವಿರಾಟ್, ಹಿರಣ್ಯಗರ್ಭ, ಜಗತ್ಕಾರಣ- ಈ ರೂಪದಿಂದಿರುವನೆಂದು ಚಿಂತಿಸಬೇಕೆಂದು ಅದಕ್ಕೆ ಅರ್ಥ. ಪ್ರತ್ಯಗಾತ್ಮನಲ್ಲಿಯೇ ಪ್ರಪಂಚವನ್ನೆಲ್ಲ ಲಯಮಾಡಿಕೊಳ್ಳುವದಕ್ಕೆ ಇದು ಸಾಧನವಾಗುವದು. ಇದನ್ನೇ ಮುಂದಿನ ಎರಡು ವಾರ್ತಿಕಗಳಲ್ಲಿ ವಿವರಿಸಿರುತ್ತದೆ.

೭-೪೪. ಈ ವಾರ್ತಿಕದಲ್ಲಿ ಅಕ್ಷರನೆಂದರೆ ನಿರುಪಾಧಿಕಬ್ರಹ್ಮವೇ. ದೇಹವೆಂಬ ಉಪಾಧಿಯಿಂದ ವಿಶ್ವನಾಗಿರುವವನೇ ಜಗತ್ತೆಂಬ ಉಪಾಧಿಯಿಂದ ವಿರಾಟ್ ಎನಿಸಿರುವನು ; ಏಕೆಂದರೆ ಎಚ್ಚರದವಸ್ಥೆಯು

ಹೋಗಿ ಕನಸಾದರೆ ಸ್ಥೂಲಶರೀರವು ಹೋಗುವಂತೆ ಹೊರಗಿನ ಪ್ರಪಂಚವೆಲ್ಲವೂ ಹೋಗಿಬಿಡುವದು ; ಇದರಂತೆ ತೈಜಸಹಿರಣ್ಯಗರ್ಭರ ಐಕ್ಯವನ್ನೂ ತಿಳಿಯಬೇಕು. ಸುಷುಪ್ತಿಯಲ್ಲಿರುವ ಆತ್ಮನಲ್ಲಿ ಯಾವ ವಿಶೇಷವೂ ಇಲ್ಲದೆ ಎಚ್ಚರವಾಗುತ್ತಲೂ ಜಗತ್ತು ಕಾಣಿಸಿಕೊಳ್ಳುವದರಿಂದ ಪ್ರಾಜ್ಞನನ್ನೇ ಜಗತ್ಕಾರಣನೆಂದು ಭಾವಿಸುವದು ಯುಕ್ತವೇ ಆಗಿದೆ.

**'ಎರಡನೆಯದು ಮತ್ತೊಂದು ಇಲ್ಲವೆಂದು ಸಿದ್ಧವಾಗುವದು'.** ವಿಶ್ವಾದಿಗಳಿಗಿಂತ ಬೇರೆಯಾಗಿ ವಿರಾಜನೇ ಮೊದಲಾದವರು ಇಲ್ಲವೇ ಇಲ್ಲ; ಆತ್ಮನೊಬ್ಬನೇ ವಿಶ್ವಾದಿರೂಪಗಳಿಂದ ತೋರಿಕೊಳ್ಳುವನು- ಎಂದು ಸಿದ್ಧವಾಗುತ್ತದೆ.

೭-೪೬. ಈ ವಾರ್ತಿಕವನ್ನೂ ಮಾಂಡೂಕ್ಯೋಪನಿಷತ್ತಿನ ಒಂದನೆಯ ಮಂತ್ರದ ಭಾಷ್ಯವನ್ನೂ ಹೋಲಿಸಿನೋಡಿರಿ.

೭-೪೮. **'ಸ್ಥೂಲಸೂಕ್ಷ್ಮಕ್ರಮದಿಂದ ಲಯಮಾಡಿಕೊಳ್ಳಬೇಕು'** ಎಂದು ಇಲ್ಲಿ ಹೇಳಿರುತ್ತದೆಯಾದರೂ ಹೇಗೆ ಲಯಮಾಡಿಕೊಳ್ಳಬೇಕೆಂಬುದನ್ನು ವಿವರಿಸಿಲ್ಲ. ಜಾಗ್ರತ್ಸ್ವಪ್ನಗಳನ್ನು ಚೆನ್ನಾಗಿ ಚಿಂತನೆಮಾಡಿ ಇವೆರಡಕ್ಕೂ ಭೇದವಿಲ್ಲವೆಂಬುದನ್ನರಿತು 'ಎರಡೂ ಸ್ವಪ್ನವೇ, ಆದ್ದರಿಂದ ವಿಶ್ವತೈಜಸರಿಗೆ ಭೇದವಿಲ್ಲ'- ಎಂದು ಚಿಂತಿಸಬೇಕು. ಆಮೇಲೆ ದೃಶ್ಯವಾದ ಪ್ರಪಂಚವು ಅದನ್ನು ನೋಡುತ್ತಿರುವ ಆತ್ಮನಿಗಿಂತ ಬೇರೆಯಾಗಿಲ್ಲ ; ಅದು ಸುಷುಪ್ತಿಯಲ್ಲಿ ಆತ್ಮನಲ್ಲಿಯೇ ಅಡಗುತ್ತಿರುವದರಿಂದಲೂ ಸುಷುಪ್ತಿಯೂ ಆತ್ಮನಿಗಿಂತ ಬೇರೆಯಾಗಿಲ್ಲದಿರುವದರಿಂದಲೂ ಪ್ರಪಂಚವೆಂಬುದು ನಿಜವಾಗಿ ಚಿದಾತ್ಮನೇ ಎಂದು ನಿಶ್ಚಯಿಸಬೇಕು. ೪೯ನೆಯ ವಾರ್ತಿಕಕ್ಕೆ ಇದೇ ತಾತ್ಪರ್ಯವು. ಇಲ್ಲಿ ವಿಶ್ವನೆಂದರೆ ವಿರಾಜನ ರೂಪದಲ್ಲಿರುವ ವಿಶ್ವ ; ಇದರಂತೆಯೇ ತೈಜಸಪ್ರಾಜ್ಞರೆಂಬ ಮಾತುಗಳನ್ನು ಹಿರಣ್ಯಗರ್ಭ, ಜಗತ್ಕಾರಣವೆಂಬ ಅರ್ಥದಲ್ಲಿಯೇ ತಿಳಿಯಬೇಕು.

**'ಅತಿಪ್ರಯತ್ನದಿಂದ'** ವಿಶ್ವನೇ ಮೊದಲಾದವರು ವಿರಾಜನೇ ಮುಂತಾದ ರೂಪದಿಂದಿರುವರೆಂದು ಭಾವಿಸುವದಕ್ಕೆ ಬುದ್ಧಿಯ ಪ್ರಯತ್ನವು ಬಹಳವಾಗಿ ಬೇಕಾಗುವದು.

೭-೫೦. ಪ್ರಾಜ್ಞನನ್ನು ಚಿದಾತ್ಮನಲ್ಲಿ ಲಯಮಾಡಬೇಕೆಂದು ಇಲ್ಲಿ ಹೇಳಿರಲು ಪಂಚೀಕರಣದಲ್ಲಿ ಮಕಾರವು ಓಂಕಾರದಲ್ಲಿಯೂ ಓಂಕಾರವು ಅಹಮ್ಮಿನಲ್ಲಿಯೂ ಲಯವಾಗುವದೆಂದು ಹೇಳಿರುವದು ಇದಕ್ಕೆ ವಿರುದ್ಧವಾಗಿರುತ್ತದೆ. ಓಂಕಾರವು ಅಹಮ್ಮಿನಲ್ಲಿ ಲಯವಾಗುವದೆಂಬುದಕ್ಕೆ **ಆನಂದಗಿರಿಯ** ವ್ಯಾಖ್ಯಾನದಲ್ಲಿಯೂ ವಿವರಣವು ಕಂಡುಬರುವದಿಲ್ಲ. ಓಂಕಾರವನ್ನು ಲಯಮಾಡಬೇಕೆಂದು ಮತ್ತೆ ಯಾವ ಗ್ರಂಥದಲ್ಲಿಯೂ ಹೇಳಿರುವದಿಲ್ಲ. ಈ ಕಾರಣದಿಂದ ಈ ಭಾಗವನ್ನು ಯಾರೋ ಈಚೆಗೆ ಸೇರಿಸಿರಬಹುದೆ ?- ಎಂಬ ಸಂಶಯವಾಗುತ್ತದೆ.

೭-೫೧. **'ಹೀಗೆಂದು ಅರಿತುಕೊಂಡು ವಿವೇಕಮಾಡುವ ಚಿತ್ತವನ್ನು ಅದರ ಸಾಕ್ಷಿಯಲ್ಲಿ ಲಯಮಾಡಬೇಕು'.** ಇಲ್ಲಿ 'ಅರಿತುಕೊಂಡು' ಎಂಬುದು ಸಂಪ್ರಜ್ಞಾತಸಮಾಧಿಯನ್ನೂ 'ಸಾಕ್ಷಿಯಲ್ಲಿ ಲಯಮಾಡಬೇಕು' ಎಂಬುದು ಅಸಂಪ್ರಜ್ಞಾತಸಮಾಧಿಯನ್ನೂ ಸೂಚಿಸುವದು. ಚೈತನ್ಯವು ಅಸಂಪ್ರಜ್ಞಾತಸಮಾಧಿಯಲ್ಲಿ ಸಾಕ್ಷಿತ್ವವನ್ನು ಕೂಡ ಬಿಟ್ಟುಬಿಡುವದೆಂದು ಹೇಳಬೇಕು ; ಏಕೆಂದರೆ ಆಗ ಸಾಕ್ಷಿಚೈತನ್ಯಕ್ಕೆ ವಿಷಯವೇ ಇರುವದಿಲ್ಲ.

೭-೫೨. ಇಲ್ಲಿ ಗೌಡಪಾದಕಾರಿಕೆಯು (ಅದ್ವೈತಪ್ರಕರಣದ ೩-೪೪, ೩-೪೫) ಸೂಚನೆಯಿದೆ.

೮-೫೪, ೫೫. **''ಅದ್ವಯಮ್'', ''ಅವ್ಯಯಮ್''** ಎಂಬ ಪಾಠಕ್ಕಿಂತ ಇದು ಉತ್ತಮ.

೮-೫೬. ಸಮಾಧಿಯಿಂದ ಮನೋನಿಗ್ರಹವನ್ನು ಪಡೆದು ತತ್ತ್ವಜ್ಞಾನವನ್ನು ಪಡೆದವನು ಕೃತಕೃತ್ಯನಾದವನು ; ಜ್ಞಾನವಾದಮೇಲೆ ಅವನು ಮತ್ತೆ ಏನನ್ನೂ ಮಾಡಬೇಕಾದದ್ದಿರುವದಿಲ್ಲ.

೮-೫೭. ಸಮಾಧಿಯಲ್ಲಿರುವಾಗ ಯಾವ ದ್ವೈತವೂ ಕಾಣುವದಿಲ್ಲ ; ಸಮಾಧಿಯಿಂದ ಎಚ್ಚತ್ತಿರುವಾಗ ಚಿದ್ರೂಪನಾದ ಆತ್ಮನಿಗಿಂತ ಬೇರೆ ಯಾಗಿರುವದೇ ಇಲ್ಲವೆಂಬ ಅರಿವಿನಿಂದ ಅದನ್ನು ಮಿಥ್ಯೆಯೆಂದು ಜ್ಞಾನಿಯು ನಿಶ್ಚಯಿಸಿರುವನು. ಜ್ಞಾನದಿಂದ ಮಿಥ್ಯಾತ್ವವನ್ನು ನಿಶ್ಚಯಿಸುವದೇ ಮುಖ್ಯವಾಗಿದ್ದರೂ ಮಧ್ಯಮಾಧಿಕಾರಿಗಳಿಗಾಗಿ ಹೊರಟಿರುವ ಈ ಪ್ರಕರಣದಲ್ಲಿ ಸಮಾಧಿಯನ್ನೇ ಪ್ರಧಾನವಾಗಿ ಹೇಳಿರುತ್ತದೆ.

೮-೫೮. ಬೇರೊಂದು ಊರಿಗೆ ಹೋದಾಗ ಇಂಥ ದಿಕ್ಕೆಂಬುದು ತೋರದೆ ಭ್ರಾಂತಿಯಾಗುವದುಂಟು. ಇದು ದಿಙ್ಮೋಹ ; ಕಣ್ಣಿನ ದೋಷದಿಂದ ಎರಡು ಚಂದ್ರರು ಕಾಣಿಸುವದುಂಟು. ಇದು ಚಂದ್ರ ನಲ್ಲಿ ತೋರುವ ವಿಭಾಗ. ಈ ಸಂದರ್ಭಗಳಲ್ಲಿ ಭ್ರಾಂತಿಯಿಂದ ತೋರುವ ದನ್ನು ಸತ್ಯವೆಂದು ಯಾರೂ ತಿಳಿಯುವದಿಲ್ಲ.

೮-೫೯. ಇಲ್ಲಿ ಹೇಳಿರುವ ಶ್ರುತಿಯು ಛಾಂದೋಗ್ಯದಲ್ಲಿದೆ. ಜ್ಞಾನಿಯು ಪ್ರಾರಬ್ಧದಿಂದ ಬದುಕಿರುವ ಶರೀರವು ಬಿದ್ದು ಹೋದಮೇಲೆ ವಿದೇಹಮುಕ್ತಿಯನ್ನು ಹೊಂದಿಯೇ ತೀರುತ್ತಾನೆಂದು ಆ ಶ್ರುತಿಯ ಅಭಿ ಪ್ರಾಯವೆಂದು ಇಲ್ಲಿ ಉದಾಹರಿಸಿರುತ್ತದೆ. ಅಜ್ಞಾನವು ಹೋದಕೂಡಲೆ ಮುಕ್ತಿಯಾಗುವದೆಂದು ಈ ಶ್ರುತಿಗೆ ಅರ್ಥವೆಂದು ವಾರ್ತಿಕಕಾರರೇ **ಬೃಹದಾರಣ್ಯಕವಾರ್ತಿಕ**ದಲ್ಲಿ ಬರೆದಿದ್ದಾರೆ.

೮-೬೨. ಇದು ಮುಖ್ಯವಾದ ವಾರ್ತಿಕವು ; ಪ್ರಾರಬ್ಧವೆಂಬುದು ವ್ಯಾವಹಾರಿಕ ದೃಷ್ಟಿಯಿಂದ ಹೇಳಿದ್ದೇ ಹೊರತು ನಿಜವಾಗಿರುವದಿಲ್ಲವೆಂಬು ದನ್ನು ಇಲ್ಲಿ ತಿಳಿಯಿಸಿದೆ. ಪರಮಾತ್ಮಜ್ಞಾನವಾದಮೇಲೆ ಸಕಲಕರ್ಮಗಳೂ ಕ್ಷಯವಾಗುವವೆಂಬ ಶ್ರುತಿಯನ್ನನುಸರಿಸಿ ಹೀಗೆ ಹೇಳಿದೆಯೆಂದು ತಿಳಿಯ ಬೇಕು. ಈ ದೃಷ್ಟಿಯಿಂದ ನೋಡಿದರೆ ೮-೬೨ರಲ್ಲಿ ಹೇಳಿರುವ ವಿದೇಹ ಮುಕ್ತಿಯು ಗೌಣವಾಗುವದು.

೯-೬೩. ಇಲ್ಲಿ ಹೇಳಿರುವ ಅಮಾನಿತ್ವವೇ ಮುಂತಾದ ಸಾಧನ ಗಳನ್ನು ಗೀತೆಯ ೧೩ನೆಯ ಅಧ್ಯಾಯದಲ್ಲಿ ವಿವರಿಸಿದೆ. ಮೂಲದಲ್ಲಿ ಪರಮಹಂಸರಿಗೆ ಮಾತ್ರ ಈ ಸಮಾಧಿಯೆಂದಿದ್ದರೂ ಇಲ್ಲಿ ಅಮಾನಿತ್ವವೇ ಮುಂತಾದ ಗುಣಗಳಿರುವವರು ಇದನ್ನು ಮಾಡಬೇಕೆಂದಿರುವದರಿಂದ ಬರಿಯ ಆಶ್ರಮಸಂನ್ಯಾಸಿಗಳಿಗೆ ಈ ಮಾರ್ಗವೆಂತ ಅರ್ಥಮಾಡಬಾರದೆಂದು ಹೇಳಿದಂತಾಯಿತು.

೯-೬೫. ಇದು ನಿ॥ ಪಾಠದಲ್ಲಿ ಮಾತ್ರವೇ ಇರುವ ವಾರ್ತಿಕ. ಓಂಕಾರ ತತ್ತ್ವಜ್ಞಾನದಿಂದ ಜೀವನ್ಮುಕ್ತನಾಗುವನು ಎಂದು ಇದಕ್ಕೆ ಅಭಿಪ್ರಾಯಹೇಳಬಹುದು.

----------

# ಒಂದನೆಯ ಪರಿಶಿಷ್ಟ

ಶ್ರೀ ಶಂಕರಾಚಾರ್ಯರೇ ಪಂಚೀಕರಣವನ್ನು ಬರೆದಿರುವರೆಂದು ಊಹಿಸಲು ಇರುವ ಮುಖ್ಯವಾದ ಅಡ್ಡಿಗಳು ಯಾವವೆಂದರೆ :-

## ೧. ಪಾಠದ ಸ್ಥಿತಿ

ಈ ಗ್ರಂಥದಲ್ಲಿ 'ಅಥಾತಃ ಪರಮಹಂಸಾನಾಮ್' ಎಂಬುವದರಿಂದ ಹಿಡಿದು 'ನಿಷ್ಪ್ರಪಞ್ಚಂ ಪ್ರಪಞ್ಚ್ಯತೇ' ಎಂಬವರೆಗಿರುವ **ಮೊದಲನೆಯ ಮೂರು ಖಂಡ**ಗಳು ಈಚೆಗೆ ಯಾರೋ ಸೇರಿಸಿದವುಗಳಾಗಿರಬೇಕೆಂದು ಕಾಶೀಪುಸ್ತಕಸಂಶೋಧಕರಾದ ಭಾವೂಶಾಸ್ತ್ರಿಗಳು ಅಭಿಪ್ರಾಯಪಟ್ಟಿರು ತ್ತಾರೆ. ಈ ಭಾಗದ ಮೇಲೆ ಆನಂದಗಿರಿಗಳ ವ್ಯಾಖ್ಯಾನವಿಲ್ಲ. ನಾಲ್ಕನೆಯ ಖಂಡವು ಓಂಕಾರಪೂರ್ವಕವಾಗಿ ಪ್ರಾರಂಭವಾಗಿರುವದೂ ಈ ಭಾಗವು ಈಚೆಗೆ ಸೇರಿದ್ದೆಂಬ ವಾದಕ್ಕೆ ಸಹಾಯಕವಾಗಿದೆ. 'ಮಾಯಾರೂಪದರ್ಶನಂ ಅಧ್ಯಾರೋಪಾಪವಾದಾಭ್ಯಾಂ ನಿಷ್ಪ್ರಪಞ್ಚಂ ಪ್ರಪಞ್ಚ್ಯತೇ'- ಎಂಬ ವಾಕ್ಯವು ಪಂಚೀಕರಣವನ್ನು ತಿಳಿಯಿಸುವ ವಾಕ್ಯಕ್ಕೆ ಹೊಂದುವಹಾಗಿಲ್ಲ. ಸಮಾಧಿ ಯನ್ನು ತಿಳಿಸುವ ಈ ಗ್ರಂಥದಲ್ಲಿ ಜ್ಞಾನಪ್ರಕರಣಕ್ಕೆ ಬೇಕಾಗಿರುವ ಅಧ್ಯಾ ರೋಪಾಪವಾದವನ್ನು ಏತಕ್ಕೆ ತಂದಿದೆಯೋ ಹೇಳುವದಕ್ಕೇ ಬರುವಂತಿಲ್ಲ.

ಅಭೇದಸ್ಥಿತಿಯೇ ಸಮಾಧಿಯೆನ್ನುವದಕ್ಕೆ ಆಧಾರವಾಗಿ ೭ನೆಯ ಖಂಡದಲ್ಲಿ ಕೊಟ್ಟಿರುವ ಪ್ರಮಾಣವಚನಗಳು ಸಮಾಧಿಯ ವಿಚಾರವನ್ನೇ ಮುಟ್ಟುವದಿಲ್ಲ. 'ತತ್ತ್ವಮಸಿ', 'ಬ್ರಹ್ಮಾಹಮಸ್ಮಿ', 'ಪ್ರಜ್ಞಾನಮಾನನ್ದಂ ಬ್ರಹ್ಮ', 'ಅಯಮಾತ್ಮಾ ಬ್ರಹ್ಮ'- ಎಂಬ ನಾಲ್ಕು ವಾಕ್ಯಗಳಲ್ಲಿ ಮೊದಲನೆ ಯದು ಛಾಂದೋಗ್ಯದಲ್ಲಿದೆ, ಎರಡನೆಯದು ಪರಮಹಂಸೋಪನಿಷತ್ತಿ ನಲ್ಲಿದೆ, ಮೂರನೆಯದು ಯಾವ ಉಪನಿಷತ್ತಿನಲ್ಲಿಯೂ ಇಲ್ಲ, ನಾಲ್ಕನೆ ಯದು ಬೃಹದಾರಣ್ಯಕ ಮಾಂಡೂಕ್ಯಗಳಲ್ಲಿದೆ. ಎರಡನೆಯ ಮೂರನೆಯ ವಾಕ್ಯಗಳನ್ನು ಆಚಾರ್ಯರವರು ಎಲ್ಲಿಯೂ ಉದಾಹರಿಸಿಲ್ಲ. ಇವೆಲ್ಲವೂ ಪಂಚೀಕರಣದಲ್ಲಿ ಮೊದಲಿನಿಂದಲೂ ಹೀಗೆಯೇ ಇವೆಯೆಂದು

ಇಟ್ಟುಕೊಂಡರೆ ಗ್ರಂಥವು ಆಚಾರ್ಯರಚಿತವೆನ್ನುವದು ಸಂದೇಹಕ್ಕೆ ಈಡಾಗುವದು. ವಾರ್ತಿಕದಲ್ಲಿ ಈ ವಾಕ್ಯಗಳ ತಂಟೆಗೇ ಹೋಗಿರುವದಿಲ್ಲ. ಆನಂದಗಿರಿಯ ವ್ಯಾಖ್ಯಾನವನ್ನು ನೋಡಿದರೆ ಈ ಶ್ರುತಿಗಳು ಮೂಲ ಗ್ರಂಥಕ್ಕೆ ಸೇರಿದವುಗಳೆಂಬುದಕ್ಕೆ ಹಿಂಜರಿಯಬೇಕಾಗುವದು ; ಏಕೆಂದರೆ ಅಲ್ಲಿ. 'ಜೀವಬ್ರಹ್ಮಣೋರೈಕ್ಯೇ ಶ್ರುತಿಂ ಪ್ರಮಾಣಯತಿ' (ಜೀವಬ್ರಹ್ಮರು ಒಂದೇ ಎಂದು ತಿಳಿಸುವದಕ್ಕೆ ಶ್ರುತಿಯನ್ನು ಪ್ರಮಾಣವಾಗಿ ಕೊಡುತ್ತಾರೆ). ಎಂದು 'ಅಯಮಾತ್ಮಾ ಬ್ರಹ್ಮ' ಎಂಬ ಒಂದೇ ಶ್ರುತಿಯನ್ನು ಕೊಟ್ಟಿರುತ್ತದೆ. 'ಇತ್ಯಾದಿಶ್ರುತಿಭ್ಯಃ' ಎಂಬ ಮೂಲವನ್ನು ವಿವರಿಸುವಾಗ ''ಆದಿ ಎಂಬ ಮಾತಿನಿಂದ 'ತತ್ತ್ವಮಸಿ' ಮುಂತಾದ ಮಹಾವಾಕ್ಯಗಳನ್ನೂ ತತ್ ತ್ವಂ ಪದಾರ್ಥಗಳನ್ನು ತಿಳಿಯಿಸುವ ಅವಾಂತರವಾಕ್ಯಗಳನ್ನೂ ತೆಗೆದುಕೊಳ್ಳ ಬೇಕು'' ಎಂದೂ ಹೇಳಿರುತ್ತದೆ. ಇದನ್ನು ನೋಡಿದರೆ ಮೂಲದಲ್ಲಿರುವ ತತ್ತ್ವಮಸಿ, ಅಯಮಾತ್ಮಾ ಬ್ರಹ್ಮ'- ಎಂಬ ಮಹಾವಾಕ್ಯಗಳನ್ನೇ ಮೊದಲು ಬೇಕೆಂದು ಹೇಳಬೇಕಾಗುವದು. ಇದು ನಿಜವಾದರೆ ಪಂಚದಶಿಯ ಮಹಾವಾಕ್ಯವಿವೇಕದಲ್ಲಿ ಕೊಟ್ಟಿರುವ 'ಪ್ರಜ್ಞಾನಂ ಬ್ರಹ್ಮ, ಅಹಂ ಬ್ರಹ್ಮಾಸ್ಮಿ, ತತ್ತ್ವಮಸಿ. ಅಯಮಾತ್ಮಾ ಬ್ರಹ್ಮ, ಎಂಬ ಮಹಾವಾಕ್ಯಗಳನ್ನೇ ಮೊದಲು ಅವರು ಸೇರಿಸಿರಬಹುದೆಂತಲೂ ಅವು ಬರೆದವರ ಕೈತಪ್ಪಿನಿಂದ ಈಗಿನ ರೂಪಕ್ಕೆ ಇಳಿದಿದ್ದರೂ ಇಳಿದಿರಬಹುದೆಂತಲೂ ಊಹಿಸುವದಕ್ಕೆ ಅವಕಾಶ ಏದೆ.

## ೨. ವಿಷಯವಿಮರ್ಶೆಯ ಕ್ರಮ

**ವಿರಾಜ, ಹಿರಣ್ಯಗರ್ಭ, ಅವ್ಯಾಕೃತ** - ಇವು ಆತ್ಮನಿಗೆ ಆಯಾ ಉಪಾಧಿಗಳಿಂದ ಬಂದ ಹೆಸರುಗಳೆಂದು ಆಚಾರ್ಯರು ಬೇರೆಯ[1] ಕಡೆಗಳಲ್ಲಿ ಕಂಠೋಕ್ತವಾಗಿ ಹೇಳಿರುತ್ತಾರೆ; ಇದಕ್ಕೆ ವಿರುದ್ಧವಾಗಿ ಈ ಗ್ರಂಥದಲ್ಲಿ ವಿರಾಜನೇ ಮುಂತಾದವು ಶರೀರಗಳೆಂದು ವ್ಯವಹರಿಸಿರುತ್ತದೆ.

1. ಐತರೇಯಭಾಷ್ಯದ ಆರನೆಯ ಅಧ್ಯಾಯ, ಬೃಹದಾರಣ್ಯಕಭಾಷ್ಯ ೧-೪-೭, ಮಾಂಡೂಕ್ಯೋಪನಿಷತ್ತಿನ ಭಾಷ್ಯ- ಮುಂತಾದ ಕಡೆಗಳಲ್ಲಿ.

ಹೀಗೆ ವಿರಾಡಾದಿಗಳು ಶರೀರದ ಹೆಸರೆಂದು ಕರೆದಿರುವದು ಈ ಗ್ರಂಥದಲ್ಲಿ ಮಾತ್ರ ಕಂಡುಬರುವ ವಿಶೇಷವಾಗಿದೆ. ಆಚಾರ್ಯರು ಈ ಗ್ರಂಥವನ್ನು ಬರೆದಿದ್ದರೆ ತಮ್ಮ ಕ್ರಮವನ್ನು ಬಿಟ್ಟು ಬೇರೊಂದು ರೀತಿಯನ್ನು ಇಲ್ಲಿ ಅನುಸರಿಸುವದಕ್ಕೆ ಕಾರಣವಿಲ್ಲ.

**ಅಜ್ಞಾನ**ವನ್ನೂ ಅವ್ಯಾಕೃತವನ್ನೂ ಒಂದೆಂದು ಭಾಪಿಸಿ ಅದು ಸತ್ತಲ್ಲ, ಅಸತ್ತಲ್ಲ- ಎಂದು ಮುಂತಾಗಿ ವರ್ಣಿಸಿರುವದು ಭಾಷ್ಯಗ್ರಂಥಗಳಲ್ಲಿ ಕಂಡು ಬರುವದೇ ಇಲ್ಲ. ಅಜ್ಞಾನಕಲ್ಪಿತವಾದ ನಾಮರೂಪಗಳನ್ನು ಅವ್ಯಾಕೃತ ವೆಂದು ಕರೆದಿರುವದೂ ಅದು ಕಲ್ಪಿತವಾದ್ದರಿಂದ ಮಿಥ್ಯೆಯಾದರೂ ವ್ಯವಹಾರದಲ್ಲಿ ಅದನ್ನು ಆತ್ಮನಿಗಿಂತ ಬೇರೆಯೆಂದಾಗಲಿ ಆತ್ಮನೇ ಎಂದಾಗಲಿ ಹೇಳುವದಕ್ಕಾಗುವದಿಲ್ಲ. (ತತ್ತ್ವಾನ್ಯತ್ವಾಭ್ಯಾಮನಿರ್ವಚ-ನೀಯಮ್)- ಎಂದು ಹೇಳಿರುವದೂ ಭಾಷ್ಯದಲ್ಲಿ ಕಂಡುಬರುತ್ತದೆ. ಅವ್ಯಾಕೃತವೆಂಬ ಹೆಸರನ್ನು ನಾಮರೂಪಗಳ ಬೀಜ, ಜಗತ್ಕಾರಣನಾದ ಈಶ್ವರ- ಎಂಬ ಎರಡು ಅರ್ಥಗಳಲ್ಲಿ ಉಪಯೋಗಿಸಿದೆಯೆಂದು ಹೇಳಿ ರುವದೂ ಕಂಡುಬರುತ್ತದೆ. ಆದರೆ ಅಜ್ಞಾನವನ್ನೇ ಅವ್ಯಾಕೃತವೆಂದು ಕರೆ ದಿರುವದು ಈ ಗ್ರಂಥದಲ್ಲಿಯೂ ಭಗವತ್ಪಾದಕೃತವೆಂದು ಪ್ರಸಿದ್ಧವಾಗಿರುವ ಮತ್ತೆ ಕೆಲವು ಪ್ರಕರಣಗ್ರಂಥಗಳಲ್ಲಿಯೂ ಕಂಡುಬರುತ್ತದೆ. ಈ ಹೆಚ್ಚು ಕಡಿಮೆಯಿಂದ ಪಂಚೀಕರಣವು ಈಚಿನ ಯಾರೋ ಒಬ್ಬರಿಂದ ರಚಿತವಾಗಿದ್ದರೂ ಆಗಿರಬಹುದೆಂದು ಊಹಿಸುವದಕ್ಕೆ ಅವಕಾಶವಿದೆ.

**ಪಂಚೀಕರಣ**ದ ವಿವರವನ್ನು ಆಚಾರ್ಯರು ಈ ಗ್ರಂಥದಲ್ಲಿರು ವಷ್ಟು ವಿವರವಾಗಿ ಎಲ್ಲಿಯೂ ಬರೆದಿಲ್ಲ, ಅದರ ಸೂಚನೆಯನ್ನೂ ಮಾಡಿಲ್ಲ. ಪಂಚದಶಿಯೇ ಮುಂತಾದ ಗ್ರಂಥಗಳಲ್ಲಿ ಈ ಹೆಸರು ಕಂಡು ಬರುತ್ತದೆ. ಈ ಗ್ರಂಥದ ಕೊನೆಯಲ್ಲಿ 'ಇತಿ ಪಂಚೀಕರಣಂ ಭವತಿ' ಎಂಬ ಮಾತುಗಳಿವೆ. ಇದಕ್ಕೆ ಆನಂದಗಿರಿಗಳು ವ್ಯಾಖ್ಯಾನಮಾಡಿಲ್ಲ. ಗ್ರಂಥದ ಮೊದಲು ಪಂಚೀಕರಣವನ್ನು ಹೇಳುತ್ತೇವೆಂಬ ಪ್ರತಿಜ್ಞೆಯೇನೂ ಇರುವ ದಿಲ್ಲ. ಈ ಎಲ್ಲಾ ಕಾರಣಗಳಿಂದ ಪಂಚೀಕರಣಸಂಬಂಧವಾದ ವಾಕ್ಯಗಳು

ಈಚೆಗೆ ಸೇರಿಸಿದವೆಂದಾದರೂ ಅಭಿಪ್ರಾಯಪಡಬೇಕು, ಇಲ್ಲದಿದ್ದರೆ ಗ್ರಂಥಕ್ಕೆ ಅವು ಸೇರಿದ್ದರೆ ಈ ಪ್ರಕರಣವನ್ನು ಆಚಾರ್ಯರು ಬರೆದಿಲ್ಲವೆಂದಾದರೂ ಅಭಿಪ್ರಾಯಪಡಬೇಕು.

**ಚಿತ್ತಸಮಾಧಾನ**ದಿಂದಲೇ ಆತ್ಮಸ್ಥಿತಿಯನ್ನು ಪಡೆದೆನೆಂದು ಭಾವಿಸುವವನು ಉತ್ತಮಾಧಿಕಾರಿಯಲ್ಲವೆಂದೂ ಶ್ರುತಿಯಲ್ಲಿ ಉಪಾಸನೆಯನ್ನೂ ಸಮಾಧಿಯನ್ನೂ ಹೇಳಿರುವದು ಮಧ್ಯಮಾಧಿಕಾರಿಗಳಿಗೆ ಎಂದೂ ಭಾಷ್ಯಕಾರರು ತಮ್ಮ ಭಾಷ್ಯಗ್ರಂಥಗಳಲ್ಲಿ[1] ಸ್ಪಷ್ಟವಾಗಿ ಹೇಳಿರುತ್ತಾರೆ. ಆತ್ಮಜ್ಞಾನವಾದ ಬಳಿಕ ಚಿತ್ತನಿರೋಧವನ್ನು ವಿಧಿಸುವ ವಾಕ್ಯವೇ ಇಲ್ಲವೆಂದೂ ಆತ್ಮನಿಗೆ ವಿಧಿಯು ಅನ್ವಯಿಸುವದಿಲ್ಲವೆಂದೂ ಅಲ್ಲಲ್ಲಿ[2] ಹೇಳಿರುತ್ತಾರೆ. ಹೀಗಿರುವಲ್ಲಿ 'ಪರಮಹಂಸರ ಸಮಾಧಿವಿಧಿಯನ್ನು ತಿಳಿಸುತ್ತೇವೆ' ಎಂದು ಪ್ರಾರಂಭಿಸಿರುವದೂ 'ತತ್ತ್ವಮಸಿ' ಮುಂತಾದ ಮಹಾವಾಕ್ಯಗಳು ಸಮಾಧಿಯನ್ನು ಸೂಚಿಸುವ ಪ್ರಮಾಣವಾಕ್ಯಗಳೆಂದು ಉಪಸಂಹಾರದಲ್ಲಿ ಹೇಳಿರುವದೂ ಭಾಷ್ಯಕಾರರ ವಿಚಾರಸರಣಿಗೆ ವಿರುದ್ಧವಾಗಿದೆ. ಪಂಚೀಕರಣವು ಭಾಷ್ಯಕಾರರಚಿತವಾಗಿರಲಾರದೆನ್ನುವವರಿಗೆ ಇದೊಂದು ಬೆಂಬಲವಾದ ಯುಕ್ತಿಯಾಗಿದೆ.

ಅಕಾರ, ಉಕಾರ, ಮಕಾರಗಳನ್ನು ಒಂದರಲ್ಲೊಂದನ್ನು ಲಯಮಾಡಿ ಸಮಾಧಿಯನ್ನು ಪಡೆಯುವ ಬಗೆಯನ್ನು **ಅಧ್ಯಾತ್ಮರಾಮಾಯಣ**ದ ಉತ್ತರ ಕಾಂಡದ ಐದನೆಯ ಸರ್ಗದಲ್ಲಿ ಪಂಚೀಕರಣಗ್ರಂಥದಲ್ಲಿರುವಂತೆಯೇ ವರ್ಣಿಸಿದೆ. ಅಧ್ಯಾತ್ಮರಾಮಾಯಣವನ್ನು ಭಾಷ್ಯಕಾರರು ತಮ್ಮ ಮುಖ್ಯ ಗ್ರಂಥಗಳಲ್ಲಿ ಎಲ್ಲಿಯೂ ಪ್ರಮಾಣವಾಗಿ ಉದಾಹರಿಸಿರುವದಿಲ್ಲ. ಇದು ಭಾಷ್ಯಕಾರರಿಂದೀಚೆಗೆ ಹುಟ್ಟಿರುವ ಗ್ರಂಥವೆಂದೂ ಕೆಲವರು ಶೋಧಕರು ಅಭಿಪ್ರಾಯಪಡುತ್ತಾರೆ. ಪಂಚೀಕರಣವು ಆಚಾರ್ಯರದ್ದಲ್ಲವೆಂದು ಊಹಿಸುವವರಿಗೆ ಇದೂ ಒಂದು ಸಾಧಕಯುಕ್ತಿಯಾಗಿರುತ್ತದೆ.

1. ಮಾಂ. ಭಾ. ೧೨, ಅದ್ವೈತ ೧, ೧೬, ೪೦, ೪೮.
2. ಬೃ. ೧- ೪- ೭

## ೩. ವಾರ್ತಿಕಕ್ಕೂ ಪಂಚೀಕರಣಕ್ಕೂ ಸಂಬಂಧ

ಪಂಚೀಕರಣವಾರ್ತಿಕವೆಂದು ಪ್ರಸಿದ್ಧವಾಗಿರುವ ಗ್ರಂಥಕ್ಕೂ ಪಂಚೀಕರಣಕ್ಕೂ ವಿಷಯಪ್ರತಿಪಾದನೆಯಲ್ಲಿ ಬಹಳ ಹೆಚ್ಚು ಕಡಿಮೆಗಳಿವೆ. ಉದಾಹರಣೆಗೆ (೧) ಸೂಕ್ಷ್ಮಶರೀರವನ್ನು ಪಂಚೀಕರಣದಲ್ಲಿ ವರ್ಣಿಸಿರುವ ಬಗೆಗೂ ವಾರ್ತಿಕದಲ್ಲಿ ವರ್ಣಿಸಿರುವ ಬಗೆಗೂ ಹೆಚ್ಚುಕಡಿಮೆಯಿದೆ. (೨)ಪಂಚೀಕರಣದಲ್ಲಿರುವ ಉತ್ಪತ್ತಿಯ ಕ್ರಮದಲ್ಲಿ ಸ್ವಲ್ಪಭಾಗವನ್ನು ವಾರ್ತಿಕದಲ್ಲಿ ಹೇಳಿರುವದಿಲ್ಲ, ಇನ್ನು ಸ್ವಲ್ಪಭಾಗವನ್ನು ಅದಕ್ಕಿಂತ ಭಿನ್ನವಾಗಿಯೇ ವರ್ಣಿಸಿರುತ್ತದೆ. (೩) ವಿಶ್ವ, ವಿರಾಜ, ತೈಜಸ, ಹಿರಣ್ಯಗರ್ಭ, ಪ್ರಾಜ್ಞ, ಅವ್ಯಾಕೃತ- ಇವುಗಳ ಸಂಬಂಧವನ್ನು ಪಂಚೀಕರಣ ದಲ್ಲಿ ಒಂದು ಬಗೆಯಾಗಿಯೂ ವಾರ್ತಿಕದಲ್ಲಿ ಮತ್ತೊಂದು ಬಗೆ ಯಾಗಿಯೂ ವಿವರಿಸಿದೆ. ಆಚಾರ್ಯರು ಬರೆದಿರುವ ಪಂಚೀಕರಣಕ್ಕೆ ತಾವು ವ್ಯಾಖ್ಯಾನವನ್ನು ಮಾಡುವದಾಗಿ ವಾರ್ತಿಕಕಾರರು ಎಲ್ಲಿಯೂ ಸೂಚಿಸಿ ರುವದಿಲ್ಲ. ಸುರೇಶ್ವರವಾರ್ತಿಕವೊಂದು ಇದೆ ಎಂಬುದಿಷ್ಟೇ ಕಾರಣದಿಂದ ಪಂಚೀಕರಣವು ಆಚಾರ್ಯಕೃತವಾಗಿರಬೇಕೆನ್ನುವವರಿಗೆ ಇವೆಲ್ಲ ಅಡ್ಡಿಗಳಾಗಿರುತ್ತವೆ.

---------

# ಎರಡನೆಯ ಪರಿಶಿಷ್ಟ

ವಾರ್ತಿಕದಲ್ಲಿ ಹೇಳಿರುವ ಅಧ್ಯಾತ್ಮಾಧಿಭೂತಾಧಿದೈವಗಳ ವಿಭಾಗಕ್ಕೂ ಮಿಕ್ಕ ಗ್ರಂಥಗಳಲ್ಲಿ ಕಂಡುಬರುವ ವಿಷಯಗಳಿಗೂ ಕೆಲವು ಹೆಚ್ಚು ಕಡಿಮೆಗಳಿವೆ.

**ಐತರೇಯೋಪನಿಷತ್ತಿನಲ್ಲಿ**

| **ಅಧ್ಯಾತ್ಮ** | **ಅಧಿದೈವ** | **ವಾರ್ತಿಕದಲ್ಲಿ** |
|---|---|---|
| ಶ್ರೋತ್ರ | ದಿಕ್ಕುಗಳು | ದಿಕ್ಕುಗಳು |
| ತ್ವಕ್ಕು | ಓಷಧಿವನಸ್ಪತಿಗಳು* | ವಾಯು |
| ಚಕ್ಷುಸ್ಸು | ಆದಿತ್ಯ | ಆದಿತ್ಯ |
| ಜಿಹ್ವಾ | --- | ವರುಣ |
| ಘ್ರಾಣ | ವಾಯು* | ಪೃಥಿವೀ |
| ವಾಕ್ಕು | ಅಗ್ನಿ | ಅಗ್ನಿ |
| ಹಸ್ತ | --- | ಇಂದ್ರ |
| ಪಾದ | --- | ವಿಷ್ಣು |
| ಪಾಯು | ಮೃತ್ಯು | ಮೃತ್ಯು |
| ಉಪಸ್ಥ | ಅಪ್ಪು* | ಪ್ರಜಾಪತಿ |
| ಮನಸ್ಸು | ಚಂದ್ರ | ಚಂದ್ರ |
| ಬುದ್ಧಿ | --- | ಬೃಹಸ್ಪತಿ |
| ಅಹಂಕಾರ | --- | ರುದ್ರ |
| ಚಿತ್ತ | --- | ಕ್ಷೇತ್ರಜ್ಞ |
| ತಮಸ್ಸು | --- | ಈಶ್ವರ |

**ವಿಶೇಷ :** ಉಪನಿಷತ್ತಿನಲ್ಲಿ ಗೀಟುಹಾಕಿರುವ ಕಡೆಗಳಲ್ಲಿ ದೇವತೆಯನ್ನು ಕೊಟ್ಟಿಲ್ಲ ; ವಾರ್ತಿಕಕ್ಕೂ ಉಪನಿಷತ್ತಿಗೂ ಹೆಚ್ಚುಕಡಿಮೆಯಿರುವ ಕಡೆಯಲ್ಲಿ* ಈ ಗುರುತನ್ನು ಹಾಕಿದೆ.

ಉಪನಿಷತ್ತಿನಲ್ಲಿ ತ್ವಕ್ಕಿಗೆ ಓಷಧಿವನಸ್ಪತಿಗಳೇ ದೇವತೆಯೆಂದಿರುತ್ತದೆ. ಗಿಡಮರಗಳಿಗೆ ವಾಯುವೇ ಅಧಿಷ್ಠಾತೃದೇವತೆಯಾದ್ದರಿಂದ

ವಾರ್ತಿಕಕ್ಕೂ ಉಪನಿಷತ್ತಿಗೂ ವಿರೋಧವಿಲ್ಲವೆಂದು ಟೀಕಾಕಾರನು ಬರೆದಿರುತ್ತಾನೆ.

ಘ್ರಾಣಕ್ಕೆ ವಾಯುದೇವತೆಯೆಂದು ಹೇಳಿರುವದು ಮೂಗಿನಲ್ಲಿ ಓಡಾಡುವ ಉಸಿರಿನ ರೂಪದಿಂದ ವಾಯುವು ವಾಸನೆಯನ್ನು ಹಿಡಿಯುವದಕ್ಕೆ ಸಹಕಾರಿಯೆಂಬುದನ್ನು ತಿಳಿಸುವದಕ್ಕೆ ; ವಾರ್ತಿಕದಲ್ಲಿ ಹೇಳಿರುವ ಪೃಥಿವೀದೇವತೆಯೇ ಘ್ರಾಣಕ್ಕೆ ದೇವತೆ, ಏಕೆಂದರೆ ಘ್ರಾಣೇಂದ್ರಿಯವು ಪೃಥಿವೀತತ್ತ್ವದಿಂದಾಗಿದೆ- ಎಂದು ಟೀಕಾಕಾರನು ಬರೆದಿರುತ್ತಾನೆ.

ನಿ॥ ಮೈ॥ ವಾರ್ತಿಕದ ಪಾಠದಲ್ಲಿ ಅಶ್ವಿನೀಕುಮಾರರೇ ಘ್ರಾಣಕ್ಕೆ ದೇವತೆಗಳೆಂದಿದೆ. ಅಶ್ವಿನೀದೇವತೆಗಳು ಸೂರ್ಯನ ಪತ್ನಿಯಾದ ಹೆಣ್ಣು ಕುದುರೆಯ ಮೂಗಿನಿಂದ ಉತ್ಪತ್ತಿಯಾದರೆಂದು ಪುರಾಣದಲ್ಲಿರುವದರಿಂದ ಅಶ್ವಿನೀಕುಮಾರರೇ ಘ್ರಾಣದೇವತೆಗಳು ; ಮನುಷ್ಯರಂತೆ ಅಶ್ವಿನೀಕುಮಾರರು ಪೃಥ್ವಿಯಲ್ಲಿ ಸಂಚರಿಸುವರೆಂದು ಶ್ರುತಿಯಲ್ಲಿರುವದರಿಂದ ಪೃಥ್ವಿಯೆಂದರೆ ಪೃಥ್ವಿಯ ಸಂಬಂಧವುಳ್ಳ ಅಶ್ವಿನೀಕುಮಾರರೆಂದೇ ಅರ್ಥ- ಎಂದು ಟೀಕಾಕಾರರು ಬರೆದಿರುತ್ತಾರೆ. ಈ ವ್ಯಾಖ್ಯಾನವನ್ನನುಸರಿಸಿ ನಿ॥ ಮೈ॥ ಪಾಠಗಳಿವೆಯೋ, ಆ ಪಾಠಗಳನ್ನನುಸರಿಸಿ ಈ ವ್ಯಾಖ್ಯಾನವು ಹುಟ್ಟಿದೆಯೋ ಹೇಳಲಾಗುವದಿಲ್ಲ.

ಉಪನಿಷತ್ತಿನಲ್ಲಿ ಉಪಸ್ಥೇಂದ್ರಿಯಕ್ಕೆ ಅಪ್ಪು ದೇವತೆಯೆಂದಿದೆ. ಇಲ್ಲಿ ಅಪ್ಪೆಂಬುದು ಪಂಚಭೂತಗಳಿಗೆ ಉಪಲಕ್ಷಣವು, ಎಂದರೆ ಉದಾಹರಣೆಗಾಗಿ ಒಂದನ್ನು ಹೇಳಿದ್ದು ; ಪಂಚಭೂತಗಳೆಂಬ ಉಪಾಧಿಯುಳ್ಳ ಪ್ರಜಾಪತಿಯೆಂದೇ ಶ್ರುತಿಗೆ ತಾತ್ಪರ್ಯವೆಂತ ಟೀಕಾಕಾರನ ಮತವು. ಟೀಕಾಕಾರನ ಅಭಿಪ್ರಾಯವನ್ನು ಭಾಷ್ಯದಲ್ಲಿ ಎಲ್ಲಿಯೂ ಸೂಚಿಸಿರುವದಿಲ್ಲ.

## ಸುಬಾಲೋಪನಿಷತ್ತಿನಲ್ಲಿ

ಇದರ ಐದನೆಯ ಖಂಡದಲ್ಲಿರುವ ಅಧ್ಯಾತ್ಮಾದಿವಿಭಾಗಗಳು ವಾರ್ತಿಕದಲ್ಲಿರುವಂತೆಯೇ ಇವೆ ; ಆದರೆ ಇಲ್ಲಿ ಬುದ್ಧಿಗೆ ಬ್ರಹ್ಮನು ದೇವತೆಯೆಂದಿದೆ, ತಮಸ್ಸೆಂಬ ಅಧ್ಯಾತ್ಮವನ್ನು ಕೊಟ್ಟಿರುವದಿಲ್ಲ.

## ತೈತ್ತಿರೀಯೋಪನಿಷದ್ಭಾಷ್ಯದಲ್ಲಿ

ಮಿತ್ರನು ಪ್ರಾಣವೃತ್ತಿಗೆ, ವರುಣನು ಅಪಾನವೃತ್ತಿಗೆ, ಆದಿತ್ಯನು ಚಕ್ಷುಸ್ಸಿಗೆ, ಬೃಹಸ್ಪತಿಯು ವಾಕ್ಕಿಗೆ ಮತ್ತು ಬುದ್ಧಿಗೆ, ವಿಷ್ಣುವು ಪಾದಕ್ಕೆ ಅಭಿಮಾನಿದೇವತೆಗಳೆಂದು ಹೇಳಿದೆ.

## ಮಹಾಭಾರತದಲ್ಲಿ

(ಶಾಂತಿಪರ್ವ, ಮೋಕ್ಷಧರ್ಮ ೩೧೩ನೆಯ ಅಧ್ಯಾಯ)

| ಅಧ್ಯಾತ್ಮ | ಅಧಿಭೂತ | ಅಧಿದೈವ |
|---|---|---|
| ಪಾದ | ಗಂತವ್ಯ | ವಿಷ್ಣು |
| ಪಾಯು | ವಿಸರ್ಗ | ಮಿತ್ರ* |
| ಉಪಸ್ಥ | ಆನಂದ | ಪ್ರಜಾಪತಿ |
| ಹಸ್ತ | ಕರ್ತವ್ಯ | ಇಂದ್ರ |
| ವಾಕ್ಕು | ವಕ್ತವ್ಯ | ವಹ್ನಿ |
| ಚಕ್ಷುಸ್ಸು | ರೂಪ | ಸೂರ್ಯ |
| ಶ್ರೋತ್ರ | ಶಬ್ದ | ದಿಕ್ಕುಗಳು |
| ಜಿಹ್ವಾ | ರಸ | ಅಪ್ಪು* |
| ಘ್ರಾಣ | ಗಂಧ | ಪೃಥಿವೀ |
| ತ್ವಕ್ಕು | ಸ್ಪರ್ಶ | ಪವನ |
| ಮನಸ್ಸು | ಮನ್ತವ್ಯ | ಚಂದ್ರ |
| ಅಹಂಕಾರ | ಅಭಿಮಾನ | ಬುದ್ಧಿ* |
| ಬುದ್ಧಿ | ಬೋದ್ಧವ್ಯ | ಕ್ಷೇತ್ರಜ್ಞ* |

**ವಿಶೇಷ :** ಭಾರತದಲ್ಲಿರುವ ಮಿತ್ರ, ಅಪ್ಪು, ಬುದ್ಧಿ, ಕ್ಷೇತ್ರಜ್ಞ-ಈ ದೇವತೆಗಳ ಸ್ಥಾನದಲ್ಲಿ ವಾರ್ತಿಕದಲ್ಲಿ ಕ್ರಮವಾಗಿ ಮೃತ್ಯು, ವರುಣ, ರುದ್ರ, ಬೃಹಸ್ಪತಿ-ಎಂಬ ದೇವತೆಗಳ ಹೆಸರು ಇದೆ. ಚಿತ್ತಕ್ಕೆ ಕ್ಷೇತ್ರಜ್ಞನೆಂದೂ ತಮಸ್ಸಿಗೆ ಈಶ್ವರ ನೆಂದೂ ವಾರ್ತಿಕದಲ್ಲಿರುವದು ಭಾರತದಲ್ಲಿಲ್ಲ. ಅಶ್ವಮೇಧ ಪರ್ವ ದಲ್ಲಿ ೪೨ನೆಯ ಅಧ್ಯಾಯದಲ್ಲಿ ಇದೇ ವಿಚಾರವು ಬಂದಿದೆ. ಅಲ್ಲಿ ಜಿಹ್ವೆಗೆ ಸೋಮ, ಘ್ರಾಣಕ್ಕೆ ವಾಯು, ತ್ವಕ್ಕಿಗೆ ವಿದ್ಯುತ್ತು, ಅಹಂಕಾರಕ್ಕೆ ರುದ್ರ, ಬುದ್ಧಿಗೆ ಬ್ರಹ್ಮ-ಹೀಗೆ ದೇವತೆಗಳನ್ನು ಕೊಟ್ಟಿದೆ ; ಮಿಕ್ಕದ್ದು ಮೋಕ್ಷ ಧರ್ಮದಂತೆ ಇದೆ.

## ತತ್ತ್ವೋಪದೇಶಸಾರದಲ್ಲಿ

(ಸೂತಸಂಹಿತೆಯ ೪-೧೪ನೆಯ ವ್ಯಾಖ್ಯಾನದಲ್ಲಿ ಉದಾಹರಿಸಿರುವದು)

ಪಾದಾವಧ್ಯಾತ್ಮಂ ಗನ್ತವ್ಯಮಧಿಭೂತಂ ವಿಷ್ಣುಸ್ತತ್ರಾಧಿದೈವತಮ್
ಹಸ್ತಾವಧ್ಯಾತ್ಮಮಾದಾತವ್ಯಮಧಿಭೂತಮಿನ್ದ್ರಸ್ತತ್ರಾಧಿದೈವತಮ್ ।
ವಾಗಧ್ಯಾತ್ಮಂ ವಕ್ತವ್ಯಮಧಿಭೂತಮಗ್ನಿಸ್ತತ್ರಾಧಿದೈವತಮ್ ॥
ಗುಹ್ಯಮಧ್ಯಾತ್ಮಮಾನನ್ದಯಿತವ್ಯಮಧಿಭೂತಂ ಪ್ರಜಾಪತಿ-
ಸ್ತತ್ರಾಧಿದೈವತಮ್ ।
ಪಾಯುರಧ್ಯಾತ್ಮಂ ವಿಸರ್ಜಯಿತವ್ಯಮಧಿಭೂತಂ ಮಿತ್ರಸ್ತತ್ರಾಧಿ-
ದೈವತಮ್ ॥
ಶ್ರೋತ್ರಮಧ್ಯಾತ್ಮಂ ಶ್ರೋತವ್ಯಮಧಿಭೂತಂ ದಿಶಸ್ತತ್ರಾಧಿದೈವತಮ್ ।
ತ್ವಗಧ್ಯಾತ್ಮಂ ಸ್ಪ್ರಷ್ಟವ್ಯಮಧಿಭೂತಂ ವಾಯುಸ್ತತ್ರಾಧಿದೈವತಮ್ ।
ಚಕ್ಷುರಧ್ಯಾತ್ಮಂ ದ್ರಷ್ಟವ್ಯಮಧಿಭೂತಂ ಸೂರ್ಯಸ್ತತ್ರಾಧಿದೈವತಮ್ ।
ಜಿಹ್ವಾಧ್ಯಾತ್ಮಂ ರಸಯಿತವ್ಯಮಧಿಭೂತಂ ವರುಣಸ್ತತ್ರಾಧಿದೈವತಮ್ ।
ಘ್ರಾಣಮಧ್ಯಾತ್ಮಂ ಘ್ರಾತವ್ಯಮಧಿಭೂತಂ ಪೃಥಿವೀ ತತ್ರಾಧಿ-
ದೈವತಮ್ ।
ಮನೋಽಧ್ಯಾತ್ಮಂ ಮನ್ತವ್ಯಮಧಿಭೂತಂ ಚನ್ದ್ರಸ್ತತ್ರಾಧಿದೈವತಮ್ ।
ಬುದ್ಧಿರಧ್ಯಾತ್ಮಂ ಬೋದ್ಧವ್ಯಮಧಿಭೂತಂ ಬ್ರಹ್ಮ ತತ್ರಾಧಿದೈವತಮ್ ।
ಅಹಂಕಾರೋಽಧ್ಯಾತ್ಮಮಹಂಕರ್ತವ್ಯಮಧಿಭೂತಂ ರುದ್ರಸ್ತತ್ರಾಧಿ-
ದೈವತಮ್ ॥

ವಾರ್ತಿಕದ ಕ್ರಮದಲ್ಲಿಯೇ ಇಲ್ಲಿ ಶ್ರೋತ್ರಾದಿಗಳನ್ನೂ ಅಧಿಭೂತಗಳನ್ನೂ ಅಧಿದೈವತಗಳನ್ನೂ ಬರೆದಿದೆ. ಆದರೆ ಪಾಯುವಿಗೆ ಮಿತ್ರನೂ ಬುದ್ಧಿಗೆ ಬ್ರಹ್ಮನೂ ದೇವತೆಗಳೆಂದಿದೆ. ಇಲ್ಲಿಯೂ ಚಿತ್ತತಮಸ್ಸುಗಳ ವಿಚಾರವಿಲ್ಲ.

--------

# ಶಬ್ದಾನುಕ್ರಮಣಿಕೆ

ಸೂ : ಸಂಖ್ಯೆಗಳು ಪುಟಗಳನ್ನು ಸೂಚಿಸುವವು.

## ಅ

**ಅಕಾರ** - ಓಂಕಾರದ ಮೊದಲಿನೆಯ ಮಾತ್ರೆ ; ಸ್ಥೂಲಶರೀರ, ಜಾಗ್ರದವಸ್ಥೆ, ವಿಶ್ವ- ಈ ಮೂರಕ್ಕೂ ಸಂಜ್ಞೆ ೨; ವಿಶ್ವ ೧೬, ೨೫.

**ಅಕ್ಷರ** - ಅವ್ಯಾಕೃತಾತ್ಮ ೧೫

**ಅಧಿದೈವತ** - ಕರಣಗಳಿಗೆ ದೇವತೆಗಳು ೯, ೩೧.

**ಅಧಿಭೂತ-** ಕರಣಕ್ಕೆ ತಿಳಿಯಬರುವ ಹೊರಗಿನ ವಿಷಯಗಳು ೯, ೩೨.

**ಅಧ್ಯಾತ್ಮ-** ಶರೀರದೊಳಗೆ ಇರುವ ಕರಣಗಳು ೯, ೩೨.

**ಅಧ್ಯಾರೋಪ-** ನಿಜವಾಗಿಲ್ಲದಿದ್ದರೂ ಇರುವದೆಂದು ಆರೋಪಿಸುವದು ; ಸೃಷ್ಟಿಯು ಪರಮಾರ್ಥವಲ್ಲದಿದ್ದರೂ ಅದನ್ನು ಇರುವಂತೆ ವರ್ಣಿಸಿರುವ ರೀತಿ, ೩, ೨೪.

**ಅಂತಃಕರಣ** - ಮನಸ್ಸುಬುದ್ಧಿಗಳೆಂಬ ಎರಡು ಅಥವಾ ಮನಸ್ಸು, ಬುದ್ಧಿ, ಚಿತ್ತ, ಅಹಂಕಾರಗಳೆಂಬ ನಾಲ್ಕು ವೃತ್ತಿಗಳುಳ್ಳ ನಮ್ಮೊಳಗಿನ ಕರಣ ೧೧, ೧೩, ೩೩.

**ಅಪವಾದ-** ಇಲ್ಲವೆನ್ನುವದು ; ಆತ್ಮನಲ್ಲಿ ಕಲ್ಪಿತವಾಗಿರುವ ಸೃಷ್ಟಿಯು. ಪರಮಾರ್ಥವಾಗಿಲ್ಲವೆಂದು ತಿಳಿಯಿಸಿಕೊಡುವದು ೩, ೨೪.

**ಅಮಾನಿತ್ವಾದಿಗಳು** - ಗೀತೆಯಲ್ಲಿ ಜ್ಞಾನಕ್ಕೆ ಹೇಳಿರುವ ಸಾಧನಗಳು ೨೦, ೪೯.

**ಅವಿದ್ಯೆ-** ಅಜ್ಞಾನ ; ಅಜ್ಞಾನದಿಂದಾಗಿರುವ ಮಾಯೆ ೧, ೨೨ ; ಸೂಕ್ಷ್ಮಶರೀರಕ್ಕೆ ಸೇರಿರುವ ಪುರ್ಯಷ್ಟಕದಲ್ಲಿ ಒಂದು ೧೩.

**ಅವಿದ್ಯಾಶಬಲ** - ಅವಿದ್ಯೆಯಿಂದ ಕೂಡಿದ ಬ್ರಹ್ಮ ೧, ೨೩.

**ಅವ್ಯಕ್ತ** - ವ್ಯಕ್ತವಾಗದೆ ಇರುವದು ಜಗತ್ತಿನ ಮೂಲಬೀಜ ೩ ; ಆತ್ಮಾಜ್ಞಾನ ೧೫, ೨೩.

**ಅವ್ಯಾಕೃತ-** ಆತ್ಮಾಜ್ಞಾನ ೫, ೧೫ ; ಜಗತ್ಕಾರಣನಾದ ಆತ್ಮ ೭, ೪೧.

**ಅಸಂಪ್ರಜ್ಞಾತ-** ಹೊರಗಿನ ಅರಿವು ಒಂದಿಷ್ಟೂ ಇಲ್ಲದ ಸಮಾಧಿ ೩೮.

**ಅಹಂಕಾರ-** ಮಹತ್ತಿನಿಂದುಂಟಾಗುವ ತತ್ತ್ವ ೩ ; ತನ್ಮಾತ್ರೆಗಳಿಂದಾದ ಲಿಂಗಶರೀರದ ಒಂದು ಪುರಿ ೧೩, ೩೩.

## ಆ

**ಆತ್ಮಾಜ್ಞಾನ-** ಸ್ಥೂಲಸೂಕ್ಷ್ಮಶರೀರಗಳಿಗೆ ಕಾರಣವಾಗಿರುವ ಬೀಜ ೫, ೧೫, ೨೬.

## ಇ

**ಇಂದ್ರಿಯಗಳು** - ಜೀವನಿಗೆ ಕೆಲಸಕ್ಕೂ ಅರಿವಿಗೂ ಬೇಕಾಗಿರುವ ಕರಣಗಳು ೩, ೯.

## ಉ

**ಉಕಾರ-** ಓಂಕಾರದ ಎರಡನೆಯ ಮಾತ್ರೆ ; ಸೂಕ್ಷ್ಮಶರೀರ, ಕನಸು, ತೈಜಸ- ಈ ಮೂರಕ್ಕೆ ಸಂಜ್ಞೆ ೫ ; ತೈಜಸ- ೧೭

## ಓ

**ಓಂಕಾರ-** ಪರಬ್ರಹ್ಮವಾಚಕವಾದ ಪ್ರಣವ ೭ ; ಇದರ ಲಯ ೫, ಇದರಲ್ಲಿ ಲಯ ೫, ೩೮.

## ಕ

**ಕರ್ಮೇಂದ್ರಿಯಗಳು-** ವಾಕ್ಕು, ಪಾಣಿ, ಪಾದ, ಪಾಯು, ಉಪಸ್ಥ- ಎಂಬ ಶರೀರದ ವ್ಯಾಪಾರಕ್ಕೆ ಬೇಕಾದ ಐದು ಇಂದ್ರಿಯಗಳು ೧೩.

**ಕಾರಣಶರೀರ-** ಆತ್ಮಾಜ್ಞಾನ ೫, ೨೬.

## ಗ

**ಗೋಲಕ-** ಕಿವಿ ಮುಂತಾದ ಇಂದ್ರಿಯ ಸ್ಥಾನಗಳು ೩೨.

## ಚ

**ಚಿತ್ತ** - ಅನುಸಂಧಾನಮಾಡುವ ಅಂತಃಕರಣ ವೃತ್ತಿ ೧೧, ೧೩, ೩೨.

**ಚೈತನ್ಯಾಭಾಸ-** ಚೈತನ್ಯದಂತೆ ತೋರುವದು ೧೫.

## ಜ

**ಜಗತ್ಕಾರಣ-** ಅವ್ಯಾಕೃತಾತ್ಮ ೧೫, ೩೬.

**ಜಾಗ್ರತ್ತು-** ಎಚ್ಚರವೆಂಬ ಅವಸ್ಥೆ ೩, ೧೩, ೩೦, ೩೧.

**ಜಾಗರಿತಸಂಸ್ಕಾರ-** ಕನಸಾಗುವದಕ್ಕೆ ಬೇಕಾದ ಎಚ್ಚರದ ವಾಸನೆ ೫, ೧೩, ೨೫, ೩೪

**ಜೀವನ್ಮುಕ್ತ-** ಬದುಕಿರುವಾಗಲೇ ಮುಕ್ತನಾಗಿರುವವನು ೧೯, ೨೧, ೩೯.

**ಜ್ಞಾನೇಂದ್ರಿಯಗಳು** - ಶ್ರೋತ್ರ, ತ್ವಕ್ಕು, ನೇತ್ರ, ಘ್ರಾಣ, ಜಿಹ್ವಾ- ಎಂಬ ಅರಿವನ್ನುಂಟು ಮಾಡುವ ಐದು ಇಂದ್ರಿಯಗಳು ೧೩,

## ತ

**ತನ್ಮಾತ್ರೆಗಳು-** ಪೃಥ್ವಿ, ಅಪ್ಪು, ತೇಜಸ್ಸು, ವಾಯು, ಆಕಾಶ- ಎಂಬ ಐದು ಸೂಕ್ಷ್ಮ ಭೂತಗಳು ೩, ೭, ೩೦.

**ತೈಜಸ-** ಕನಸಿನ ಶರೀರಕ್ಕೂ ಕನಸಿಗೂ ಅಭಿಮಾನಿಯಾದ ಆತ್ಮ ೧೩, ೩೪.

## ಪ

**ಪುರ್ಯಷ್ಟಕ-** ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು, ಅಂತಃಕರಣ, ಪ್ರಾಣಗಳು, ಸೂಕ್ಷ್ಮಭೂತಗಳು, ಅವಿದ್ಯೆ, ಕಾಮ, ಕರ್ಮ- ಎಂಬ ಎಂಟು ರಾಶಿಗಳ ಲಿಂಗಶರೀರ ೧೩, ೩೨.

**ಪಂಚಪ್ರಾಣಗಳು-** ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ- ಎಂಬ ಪ್ರಾಣವೃತ್ತಿಗಳು ೩, ೧೩.

**ಪಂಚೀಕರಣ** - ಸೂಕ್ಷ್ಮಭೂತಗಳೈದನ್ನೂ ಒಂದನ್ನೊಂದರಲ್ಲಿ ಬೆರೆಯಿಸಿ ಸ್ಥೂಲಭೂತ ಗಳನ್ನಾಗಿ ಮಾಡುವದು ೩, ೪, ೯, ೨೩, ೪೪.

**ಪಂಚೀಕೃತ-** ಐದು ಮಡಿಕೆಯಾಗಿ ಬೆರೆತಿರುವ ಸ್ಥೂಲಭೂತ ೩.

**ಪರಮಹಂಸರು-** ಸರ್ವಕರ್ಮಗಳನ್ನೂ ಸಂನ್ಯಾಸಮಾಡಿದವರು ೩.

**ಪ್ರತ್ಯಗಾತ್ಮ-** ನಮ್ಮೊಳಗಿನ ಆತ್ಮ ೧೩.

**ಪ್ರಾರಬ್ಧಕರ್ಮ-** ಫಲವನ್ನು ಕೊಡುವದಕ್ಕೆ ಮೊದಲುಮಾಡಿರುವ ಕರ್ಮ - ೧೯, ೩೯.

## ಬ

**ಬುದ್ಧಿ-** ನಿಶ್ಚಯಿಸುವ ಅಂತಃಕರಣವೃತ್ತಿ ೩, ೧೧, ೧೩.

**ಬ್ರಹ್ಮ-** ನಿತ್ಯಶುದ್ಧಬುದ್ಧಮುಕ್ತವಾಗಿರುವ ಆತ್ಮಚೈತನ್ಯ ೫.

## ಮ

**ಮಕಾರ-** ಓಂಕಾರದ ಮೂರನೆಯ ಮಾತ್ರೆ; ಕಾರಣಶರೀರ, ಸುಷುಪ್ತಿ, ಪ್ರಾಜ್ಞ- ಈ ಮೂರಕ್ಕೂ ಸಂಜ್ಞೆ ೫ ; ಪ್ರಾಜ್ಞ ೧೭.

**ಮನಸ್ಸು-** ಸಂಕಲ್ಪ ವಿಕಲ್ಪಾದಿಗಳನ್ನು ಮಾಡುವ ಅಂತಃಕರಣವೃತ್ತಿ ೧೧, ೧೩, ೩೨.

**ಮಹತ್ತು-** ಅವ್ಯಕ್ತದಿಂದುಂಟಾಗುವ ತತ್ತ್ವ ೩ ; ತನ್ಮಾತ್ರೆಗಳಿಂದಾಗುವ ಲಿಂಗಶರೀರ ೭, ೩೧.

**ಮಹಾಭೂತಗಳು** - ಪೃಥ್ವಿ ಮುಂತಾದ ಸ್ಥೂಲಭೂತಗಳು ೩, ೭ ; ಸೂಕ್ಷ್ಮಭೂತಗಳು ೪, ೨೫.

**ಮಾಯೆ-** ಬ್ರಹ್ಮದಲ್ಲಿರುವ ಅವಿದ್ಯಾಕಲ್ಪಿತ ಶಕ್ತಿ ೭, ೩೦.

**ಮಾಯಾದರ್ಶನ-** ಆತ್ಮನಲ್ಲಿಲ್ಲದ ಪ್ರಪಂಚವು ಇದ್ದಂತೆ ತೋರುವದು ೩, ೨೪.

**ಮುಮುಕ್ಷುಗಳು-** ಸಂಸಾರಬಂಧದಿಂದ ಬಿಡುಗಡೆಯನ್ನು ಹೊಂದಬೇಕೆಂದು ಹವಣಿಸುವವರು ೭.

**ಮೂಲಾವಿದ್ಯೆ-** ಜಾಗ್ರತ್ಸ್ವಪ್ನಗಳಿಗೂ ಪ್ರಪಂಚಭ್ರಾಂತಿಗೂ ಕಾರಣವಾಗಿ ಸುಷುಪ್ತಿಯಲ್ಲಿ ಬೀಜರೂಪವಾಗಿರುವದೆಂದು ಈಗಿನ ವೇದಾಂತಿಗಳು ಕಲ್ಪಿಸಿರುವ ಅವಿದ್ಯೆ ೨೭, ೩೫.

## ಲ

**ಲಕ್ಷ್ಯ-** ಪದಶಕ್ತಿಯಿಂದ ನೇರಾಗಿ ಹೇಳಲ್ಪಡದೆ ಕುರುಹಿಡಲ್ಪಡುವ ವಸ್ತು ೧೭.

**ಲಯಚಿಂತನೆ** - ಸ್ಥೂಲಸೂಕ್ಷ್ಮಕಾರಣಗಳು ಚಿದಾತ್ಮನಿಗಿಂತ ಬೇರೆಯಲ್ಲವೆಂದು ಚಿಂತಿಸುವದು ೪, ೧೭, ೨೭, ೪೩.

**ಲಿಂಗ-** ಪಂಚಪ್ರಾಣಗಳು, ದಶೇಂದ್ರಿಯಗಳು, ಮನಸ್ಸು, ಬುದ್ಧಿ- ಎಂಬ ಹದಿನೇಳವಯವಗಳಿಂದ ಕೂಡಿದ ಸೂಕ್ಷ್ಮಶರೀರ ೩ ; ಮಹತ್ತತ್ತ್ವ ೩ ; ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು, ಪ್ರಾಣಗಳು, ಭೂತಗಳು, ಅಂತಃಕರಣ, ಅವಿದ್ಯೆ, ಕಾಮ, ಕರ್ಮ- ಎಂಬ ಎಂಟವಯವಗಳಿಂದ ಕೂಡಿದ ಶರೀರ ೧೩, ೩೩.

## ವ

**ವಿಶ್ವ-** ಜಾಗ್ರತ್ತಿನ ಶರೀರಕ್ಕೂ ಜಾಗ್ರದವಸ್ಥೆಗೂ ಅಭಿಮಾನಿಯಾಗಿರುವ ಆತ್ಮ ೩, ೧೩.

**ವಿರಾಜ-** ಸಮಷ್ಟಿಸ್ಥೂಲಶರೀರ, ೩, ೯ ; ಸಮಷ್ಟಿಸ್ಥೂಲಶರೀರಾಭಿಮಾನಿಯಾದ ಆತ್ಮ ೧೩, ೨೪, ೩೧, ೩೭.

## ಸ

**ಸತ್** - ಇರವು ; ಜಗತ್ಕಾರಣವಾದ ಬ್ರಹ್ಮ ೩, ೨೨.

**ಸಮಾಧಿ-** ಚಿತ್ತನಿರೋಧ, ಆತ್ಮನಲ್ಲಿ ಎಲ್ಲವನ್ನೂ ಲಯಿಸಿಕೊಂಡು ಅಭೇದದಲ್ಲಿ ನಿಲ್ಲುವದು ೫, ೧೭, ೨೭, ೨೮.

**ಸಾಕ್ಷಿ-** ಅವಸ್ಥೆಗಳನ್ನೆಲ್ಲ ನೋಡುತ್ತಿರುವ ಚೈತನ್ಯ ೫, ೧೭.

**ಸುಷುಪ್ತಿ-** ಕನಸಿಲ್ಲದ ಬರಿನಿದ್ರೆ- ೫, ೧೫, ೨೭.

**ಸೂಕ್ಷ್ಮಶರೀರ-** ಲಿಂಗಶರೀರ ೩, ೧೩, ೩೩, ೩೪.

**ಸೂತ್ರ-** ಸಮಷ್ಟಿಸೂಕ್ಷ್ಮಶರೀರ ೭.

**ಸಂಪ್ರಜ್ಞಾತ-** ಸ್ವಲ್ಪ ಅರಿವಿನೊಡನೆಕೂಡಿರುವ ಸಮಾಧಿ ೩೮.

**ಸ್ಥೂಲಭೂತಗಳು** - ಪಂಚೀಕೃತವಾದ ಭೂತಗಳು ೭

**ಸ್ಥೂಲಶರೀರ-** ಸ್ಥೂಲಭೂತಗಳಿಂದಾಗಿರುವ ಶರೀರ ೩, ೯, ೩೨.

**ಸ್ವಪ್ನ-** ಕನಸೆಂಬ ಅವಸ್ಥೆ ೫, ೧೩.

## ಹ

**ಹಿರಣ್ಯಗರ್ಭ-** ಸಮಷ್ಟಿಸೂಕ್ಷ್ಮಶರೀರ ೩ ; ಸಮಷ್ಟಿಸೂಕ್ಷ್ಮಶರೀರಾಭಿಮಾನಿಯಾದ ಆತ್ಮ ೧೫, ೩೪, ೩೬.

---------

# ಕೆಲವು ಗ್ರಂಥಗಳು

1. **ಶಂಕರಮಹಾಮನನ :** ವೇದಾಂತಪ್ರಕ್ರಿಯೆಯ ಗುಟ್ಟನ್ನೆಲ್ಲ ಶ್ರೀಶಂಕರ ಭಗವತ್ಪಾದರವರ ಅಮೃತವಾಣಿಯಿಂದಲೇ ಹೊರಗೆಡವಿರುವ ಪುಟ್ಟಹೊತ್ತಗೆಯಿದು. ಹೊಸದಾಗಿ ಓದುವವರಿಗೆ ವೇದಾಂತದ ಒಟ್ಟು ಉಪದೇಶವನ್ನೂ ಆಗಲೆ ಓದಿರುವವರಿಗೆ ಅನುಸಂಧಾನಕ್ಕೆ ತಕ್ಕ ಸಂಗ್ರಹವನ್ನೂ ಒದಗಿಸುವದು.

**ನಾಲ್ಕನೆಯ ಮುದ್ರಣ 1995 : ಪುಟಗಳು ಕ್ರೌನ್ (6 + 24).**

2. **ಆತ್ಮವಿದ್ಯಾವಿಲಾಸ :** ಇದರಲ್ಲಿ ಆತ್ಮಸಾಕ್ಷಾತ್ಕಾರವನ್ನು ಹೊಂದಿರುವವರ ಮನಃಸ್ಥಿತಿಯನ್ನು ಉತ್ತಮರೀತಿಯಲ್ಲಿ ವರ್ಣಿಸಿರುತ್ತದೆ. ಮುಮುಕ್ಷುಗಳಿಗೆ ಅನುಸಂಧಾನಕ್ಕೆ ತಕ್ಕದ್ದು. ಶೃಂಗೇರೀಪೀಠಾಧಿಪರಾಗಿದ್ದ ಶ್ರೀ ಸಚ್ಚಿದಾನಂದಶಿವಾಭಿನವ ನರಸಿಂಹಭಾರತೀಸ್ವಾಮಿಗಳು ಬರೆದಿರುವ **ಸದಾಶಿವೇಂದ್ರಸ್ತುತಿ ಮತ್ತು ಸದಾಶಿವ ಪಂಚರತ್ನ**- ಎಂಬ ಎರಡು ಸ್ತೋತ್ರಗಳೂ ಕೆಲವು ಕೀರ್ತನೆಗಳೂ ಇವೆ.

**ಮೂರನೆಯ ಮುದ್ರಣ : 1990 ಪು. ಕ್ರೌನ್ ( 14 + 45).**

3. **ಶ್ರೀರಾಮಹೃದಯ :** ಸೀತಾದೇವಿಯೂ ಶ್ರೀರಾಮನೂ ಹನುಮಂತನಿಗೆ ಮಾಡಿದ ತತ್ತ್ವೋಪದೇಶವಿದು. ಪಾಠಾಂತರಸಹಿತ ಮೂಲ, ಅರ್ಥ, ಟಿಪ್ಪಣಿ, ಸಾರಾಂಶ- ಇಷ್ಟೂ ಇದೆ. ಅಧ್ಯಾತ್ಮರಾಮಾಯಣದ ಬಾಲಕಾಂಡದಿಂದ ಆರಿಸಿದ ಭಾಗವಿದು. **ಮೂರನೆಯ ಮುದ್ರಣ 1980 : ಪು. ಕ್ರೌನ್ (24).**

4. **ಶ್ರೀರಾಮಗೀತೆ ಮತ್ತು ವಾಗ್ದೇವೀಸ್ತೋತ್ರ :** ಇದು ಅಧ್ಯಾತ್ಮರಾಮಾಯಣದ ಉತ್ತರಕಾಂಡದಿಂದ ಆರಿಸಿದ ಭಾಗ. ಶ್ರೀರಾಮನು ಲಕ್ಷ್ಮಣನಿಗೆ ಮಾಡಿದ ಅಮೋಘ ಉಪದೇಶವು ಇದರಲ್ಲಿದೆ. ಮಹಾವಾಕ್ಯವಿಚಾರವೂ ಪರಮಾತ್ಮನಲ್ಲಿ ಪ್ರಪಂಚವನ್ನೆಲ್ಲ ಲಯಗೊಳಿಸಿಕೊಳ್ಳುವ ಸಾಧನಕ್ರಮವೂ ಇಲ್ಲಿ ಉಕ್ತವಾಗಿದೆ. ಜ್ಞಾನಕ್ಕೆ ಭಕ್ತಿಯೇ ಸಾಧನವೆಂದು ಪ್ರತಿಪಾದಿಸಿದೆ **ವಾಗ್ದೇವಿಸ್ತೋತ್ರ**ವನ್ನು ಪ್ರತಿದಿನವೂ ಕೀರ್ತನೆ ಮಾಡುವದರಿಂದ ಮನಸ್ಸಿನಲ್ಲಿ ಹರ್ಷವೂ, ಭಗವಂತನಲ್ಲಿ ಅನುರಾಗವೂ ಉಂಟಾಗುವದು. ಪರಮಪುರುಷಾರ್ಥಕ್ಕೆ ಇದೇ ನಿಚ್ಚಣಿಕೆಯು.

**ಮೂರನೆಯ ಮುದ್ರಣ 1999 :ಪು. ಕ್ರೌನ್ ( 10 + 44).**

5. **ಸರ್ವೇಷ್ಟಸಿದ್ಧಿ :** ಅಧ್ಯಾತ್ಮವಿದ್ಯೆಯೆಂಬ ಆನಂದಶಾಸ್ತ್ರವನ್ನು ಚಿಂತನೆ ಮಾಡುವವರಿಗೆ ಈ ಪುಸ್ತಕದಲ್ಲಿ ಹಲವು ಸೂಚನೆಗಳಿರುತ್ತವೆ. ಅಧ್ಯಾತ್ಮತತ್ತ್ವವನ್ನು ಬರಿಯ ತರ್ಕದಿಂದ ತಿಳಿವಡಿಸಿಕೊಳ್ಳಲಾಗುವದಿಲ್ಲ, ಸಾಧನಗಳನ್ನು ಮಾಡಿ ಅದನ್ನು ಅನುಭವಕ್ಕೆ ತಂದುಕೊಳ್ಳುವದು ಅವಶ್ಯ- ಎಂದು ತಿಳಿಸುವದು ಗ್ರಂಥದ ಗುರಿ.

**ಐದನೆಯ ಮುದ್ರಣ 1996 ಪು. ಕ್ರೌನ್ (4+ 44).**

ಪುಸ್ತಕಗಳ ಪೂರಾ ಬೆಲೆಪಟ್ಟಿಗೆ ಬರೆದುಕೊಳ್ಳಿರಿ.

---

**ಕಾರ್ಯದರ್ಶಿ**

ಅಧ್ಯಾತ್ಮಪ್ರಕಾಶಕಾರ್ಯಾಲಯ, ಹೊಳೆನರಸೀಪುರ - 573 211

# ಸಂಸ್ಥಾಪಕರ ಸ್ಮರಣೆ

ಕರ್ನಾಟಕದೇಶದ ಅಭಿನವಶಂಕರಾಚಾರ್ಯರೆಂದೇ ಸುಪ್ರಸಿದ್ಧರಾಗಿರುವ ಬ್ರಹ್ಮೀಭೂತ **ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳು** ಶಾಂಕರವೇದಾಂತದ ವಿಷಯಕ್ಕೆ 20ನೆಯ ಶತಮಾನದ ಅಧಿಕೃತ ವಕ್ತಾರರೂ, ಬರಹಗಾರರೂ ಆಗಿದ್ದರು. ಪೂಜ್ಯಶ್ರೀಶ್ರೀಗಳವರ ಅನುವಾದ, ಟಿಪ್ಪಣಿ, ವಿಮರ್ಶಾತ್ಮಕ ಪೀಠಿಕೆಗಳಿಂದ ಅಲಂಕೃತವಾದ ಶ್ರೀಶಂಕರರ ಪ್ರಸ್ಥಾನತ್ರಯ ಭಾಷ್ಯಗಳು, ಸಂಸ್ಕೃತವು ಬಾರದ ಕನ್ನಡಿಗರಾದ ಅಧ್ಯಾತ್ಮವಿಚಾರ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

5. 1. 1880ರಂದು ಜನಿಸಿದ ಪೂಜ್ಯ ಶ್ರೀಶ್ರೀಗಳವರ ಪೂರ್ವಾಶ್ರಮದ ಹೆಸರು **ವೈ. ಸುಬ್ಬರಾವ್** ಎಂದಿತ್ತು. 1948ರವರೆಗೆ (68ನೆಯ ವಯಸ್ಸಿನವರೆಗೆ) ಅವರು "ಸುಬ್ಬರಾಯ"ರೆಂದೇ ಪ್ರಖ್ಯಾತರಾಗಿದ್ದರು. 10.6.1948ರಂದು ಸಂನ್ಯಾಸವನ್ನು ಸ್ವೀಕರಿಸಿ **ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳಾದರು.**

'ಬೆಳಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿದಂದಿನಿಂದ ಬದುಕಿರುವವರೆಗೂ ವೇದಾಂತಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀಶ್ರೀಗಳವರು ತಮ್ಮ ಬಾಲ್ಯದಿಂದ 96ನೆಯ ವಯಸ್ಸಿನವರೆಗೂ ವೇದಾಂತಗ್ರಂಥಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು **ಪುರುಷಸರಸ್ವತಿ** ಎಂಬ ಅನ್ವರ್ಥನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲಿಷ್, ಸಂಸ್ಕೃತಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತ ಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಅವರು ಸಂಸ್ಥಾಪಿಸಿರುವ **ಅಧ್ಯಾತ್ಮಪ್ರಕಾಶಕಾರ್ಯಾಲಯವು** ದೇಶ ವಿದೇಶಗಳಲ್ಲೂ ಪ್ರಖ್ಯಾತವಾಗಿದ್ದು ಈಗಲೂ ನಿಜವಾದ ಅಧ್ಯಾತ್ಮವಿದ್ಯೆಯ ಅಂತರರಾಷ್ಟ್ರೀಯ ಕೇಂದ್ರವಾಗಿದೆ.

ಪೂಜ್ಯರು ಕರ್ನಾಟಕದ ಅಭಿನವಶಂಕರಾಚಾರ್ಯರಾಗಿ ಬಾಳಿ 1975ನೇ ಆಗಸ್ಟ್ 5 (1880-1975)ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿಪೀಠವು ಹೊಳೆನರಸೀಪುರದಲ್ಲಿದೆ.

ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹಿ ।
ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ॥

"ಓಂ ನಮೋ ಭಗವತೇ ಸಚ್ಚಿದಾನಂದಾಯ"